SABHĀPATRA

July 1868 to June 1869.

I.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. ೧೮೭೮ ಅಂಕೆ ೧.

ಪ್ರಸಿದ್ಧಿಪತ್ರ.

ದಕ್ಷಿಣ ಉತ್ತರ ಕನ್ನಡ, ದಕ್ಷಿಣ ಮಹಾರಾಷ್ಟ್ರದ ಜಿಲ್ಲೆಗಳಲ್ಲಿಯೂ ಕೊಡಗ ಶೀಮೆಯಲ್ಲಿಯೂ ನೀಲಗಿರಿಗಳಲ್ಲಿಯೂ ಇರುವ ನಮ್ಮ ಬಾಸೆಲ್ ಮಿಶ್ಯನ್ ಸಭೆಗಳ ಪ್ರಯೋಜನಾರ್ಥಕ್ಕಾಗಿ "ಸಭಾಪತ್ರ"ವೆಂಬ ಹೆಸರುಳ್ಳ ಒಂದು ಕಾಗದವನ್ನು ತಿಂಗಳು ತಿಂಗಳಿಗೆ ಪ್ರಸಿದ್ಧ ಮಾಡಲಿಕ್ಕೆ ಇಚ್ಛೈಸುತ್ತೇವೆ.

ಕ್ರೈಸ್ತರು ವಿಶ್ವಾಸದಲ್ಲಿ ದೃಢವಾಗಿರ ಬೇಕಲ್ಲದೆ ತಿಳುವಿಕೆಯಲ್ಲಿ ಸಹಾ ಬೆಳೆಯ ಬೇಕೆಂಬದೇ ಕರ್ತನ ಚಿತ್ತವು. ಆದರೆ ಇದಕ್ಕೆ ಸಹಾಯವಾಗುವ ಪುಸ್ತಕಗಳು ಕರ್ನಾಟಕ ಭಾಷೆಯಲ್ಲಿ ಸ್ವಲ್ಪ ಮಾತ್ರ ಇರುವದರಿಂದಲೂ ಈ ವರೆಗೆ ಛಾಪಿಸಿದ ದೇವವಾಕ್ಯವ್ಯಾಖ್ಯಾನದ ಪುಸ್ತಕಗಳನ್ನು ಎಲ್ಲರೂ ಪ್ರಯೋಗಿಸ ಕೂಡದಿರುವದರಿಂದಲೂ ಈ ಪ್ರಕಾರ ಒಂದು ಕೊರತೆ ಇರುವದರಿಂದ ಮೇಲಿನ ಪತ್ರವು ಅನೇಕರಿಗೆ ಸಹಾಯವಾದೀತೆಂಬ ಭಾವದಿಂದ ಅದನ್ನು ಛಾಪಿಸುವರೆ ಆಲೋಚನೆ ಹುಟ್ಟಿತು.

ಈ ಪತ್ರದಲ್ಲಿ ಪ್ರಸಿದ್ಧಿ ಪಡಿಸುವಂಥಾದ್ದು ಏನಂದರೆ—ದೇವರ ವಾಕ್ಯದ ಒಂದು ಪರಿಚ್ಛೇದನೆಯ ವಿವರ ಎಂಬ ಪ್ರಸಂಗವೂ, ವಿಶೇಷವಾದ ವಚನಗಳ ಟೀಕೂ, ದೇವರ ರಾಜ್ಯದ ಮುಖ್ಯ ಸಂಗತಿಗಳೂ, ಬೇರೆ ಬೇರೆ ಭೂಖಂಡಗಳಲ್ಲಿ ನಡಿಯುವ ನಮ್ಮ ಬಾಸೆಲ್ ಮಿಶ್ಯನ್ ಕುರಿತಾದ ವರ್ತಮಾನಗಳೂ, ದೇವರು ಮನುಷ್ಯರಲ್ಲಿ ಎಚ್ಚೈಸುವ ರೀತಿ ತೋರಿಸುವಂಥ ವಿಚಿತ್ರವಾದ ಸಂಗತಿಗಳ ಸಮಾಚಾರವೂ, ಇವಷ್ಟನ್ನು ಕಾಲಗತಿಯಲ್ಲಿ ಕಾಣಿಸುವಂತೆ ನಿರೀಕ್ಷಿಸುತ್ತೇವೆ.

ಈ ಪ್ರಕಾರ ಸಭಾಪತ್ರವನ್ನು ಓದಿ ತಕ್ಕ ಪ್ರಕಾರ ಪ್ರಯೋಗಿಸುವವರು ತಮ್ಮನ್ನು ಕ್ರೈಸ್ತ ಪರಿಶುದ್ಧ ವಿಶ್ವಾಸದಲ್ಲಿ ಕಟ್ಟಿ ಕೊಂಡು, ತಮಗೂ ಸಮಸ್ತ ದೇವಸಭೆಗೂ ಆತ್ಮಿಕ ಸಂಬಂಧ ಉಂ

ಟೆಂದು ತಿಳಿದು, ಅನ್ಯೋನ್ಯ ಪ್ರೀತಿಯಲ್ಲಿಯೂ ವೃದ್ಧಿಯಾಗುವ ಹಾಗೆ ಕರ್ತನ ಸಹಾಯದಿಂದ ಕಾರಣವಾಗ ಬಹುದು.

ನಮ್ಮ ಉಪದೇಶಿಗಳಲ್ಲಿ ಯಾರಾರೂ ಈ ಪತ್ರಕ್ಕೆ ತಕ್ಕ ಕಾಗದಗಳನ್ನು ಬರಿಯಲಿಕ್ಕೆ ಮನಸ್ಸಾಗಿದ್ದರೆ, ಅವುಗಳನ್ನು ಸಂತೋಷದಿಂದ ಶೇರಿಸುವೆವು.

ಸಭಾಪತ್ರದ ಕ್ರಯ ವರ್ಷಕ್ಕೆ ಅಂದರೆ ೧೨ ಅಂಕೆಗಳಿಗೆ ೧ ರೂಪಾಯಿ. ಆದರೂ ಚಂದಾದಾರರ ಲೆಖ್ಖವು ೧೦೦ಕ್ಕೆ ಕಡಿಮೆಯಾದರೆ, ಅದನ್ನು ಛಾಪಿಸಲಿಕ್ಕೆ ಆಗುವದಿಲ್ಲ. ಹೀಗಾಗಿ ನಮ್ಮ ಸಭೆಗಳಿಗೆ ಅಂಥಾ ಪತ್ರದಿಂದ ಪ್ರಯೋಜನವಾದೀತೆಂತ ತಿಳು ಕೊಳ್ಳುವವರು ತಕ್ಕಷ್ಟು ಚಂದಾದಾರರು ಶಿಕ್ಕುವ ಹಾಗೆ ಪ್ರಯತ್ನ ಮಾಡಲಿ. ಈ ಮೊದಲಿನ ಅಂಕೆ ಉಚಿತವಾಗಿ ಕೊಡಲಾಗುತ್ತದೆ. ಮುಂದಿನ ಅಂಕೆಗಳನ್ನು ಅಪೇಕ್ಷಿಸುವಂಥವರು ತಡ ಮಾಡದೆ, ಮಂಗಳೂರಿನವರು ಮಿಶ್ಯನ್ ಛಾಪಖಾನೆಯಲ್ಲಿ, ಬೇರೆ ಠಾಣ್ಯಾದವರು ತಮ್ಮ ತಮ್ಮ ಬೋಧಕರ ಹತ್ತರ ತಿಳಿಸಿ, ಈ ಪ್ರಕಾರವಾಗಿ ಹೊಂದ ಬಹುದು.

ಮತ್ತಾಯ ೭. ೧೩.

“ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ.”

ನಿಮಗೆ ರಕ್ಷಣೆಯಾಗುವ ಹಾಗೆ ಇದನ್ನು ನಿಮಗೆ ಹೇಳುತ್ತೇನೆಂದು ಯೇಸು ಯೆಹೂದ್ಯರಿಗೆ ಹೇಳಿದ ಮಾತು ಯೋಹಾನ್. ೫, ೩೪ನೇ ವಚನದಲ್ಲಿ ಬರೆದದೆ. ಈ ಮಾತು ಹೃದಯದ ಪ್ರೀತಿಯಿಂದ ಹುಟ್ಟಿ, ಮನುಷ್ಯರನ್ನು ರಕ್ಷಿಸಲಿಕ್ಕೆ ಲೋಕಕ್ಕೆ ಬಂದ ಮನುಷ್ಯನಾದ ರಕ್ಷಕನಾಗಿದ್ದಂಥಾ ಯೇಸುವಿಗೆ ಪೂರ್ಣ ಯೋಗ್ಯ ಮಾತೂ, ಕರುಣವೆಂಬ ಹಾಲಿನಲ್ಲಿಯೂ ಜೇನಿನಲ್ಲಿಯೂ ಅದ್ದಿದ ಮಾತಾಗಿಯೂ, ಯೇಸುವಿನ ಒಂದು ಉತ್ತಮ ಮಾತಾಗಿಯೂ ಅದೆ. ಆ ಸಂಧಿಯ ೧೬ನೇ ವಚನದಲ್ಲಿ ಯೆಹೂದ್ಯರು ಆತನನ್ನು ಹಿಂಸಿಸಿ, ಆತನನ್ನು ಕೊಲ್ಲ ಹುಡುಕಿದರೆಂದು, ಬರೆದದೆ. ಮತ್ತು ಶಾಂತನಾದ ಯೇಸುವು ಒಂದು ಮಾತಿನಿಂದ ಪ್ರತಿವಾದಿಸಲಿಕ್ಕೆ ಪ್ರಯತ್ನ ಮಾಡಿದಾಗ, ಯೆಹೂದ್ಯರು ಇನ್ನೂ ಹೆಚ್ಚಾಗಿ ಆತನನ್ನು ಕೊಲ್ಲ ಹುಡುಕಿದರು.

ನಮ್ಮ ಅತಿ ಪ್ರಿಯ ರಕ್ಷಕನು ಆ ಕಾಲದಲ್ಲಿ ನರಹತ್ಯ ಮಾಡುವ ಹಗೆಯಿಂದ ಶಿಟ್ಟು ಮಾಡಿ ಗುಣುಗುಟ್ಟುವ ಯೆಹೂದ್ಯರ ಸಂಗಡ ಅಷ್ಟು ಪ್ರೀತಿಯಿಂದ ಮಾತಾಡಿದನಾದರೆ, ಆತನ ಮೇಲೆ ಹಗೆ ಮಾಡದೆ, ಆತನನ್ನು ಹಿಂಸಿಸದೆ, ಆತನನ್ನು ಹಿಂಬಾಲಿಸಿ, ಆತನ ಮುಖವನ್ನು ನೋಡಿ, ಆತನ ಬಾಯಿಗೆ ಹತ್ತಿ ಕೊಂಡು, ಆತನಿಂದ ನಿತ್ಯಜೀವದ ವಾಕ್ಯಗಳನ್ನು ಕೇಳುವದಕ್ಕೂ ಆತನಿಂದ ನಿತ್ಯಜೀವದ ಆಹಾರವನ್ನುಣ್ಣಲೂ ನಿತ್ಯಜೀವದ ಪಾನವನ್ನು ಕುಡಿಯಲೂ ಆಶೆ ಮಾಡಿ, ಆತನ ಬಳಿಗೆ ಶೇರುವವರ ಜೀವಾತ್ಮಗಳಿಗೆ ಎಷ್ಟೋ ಪ್ರೀತಿಯಿಂದ ವಾಕ್ಯಗಳನ್ನು ಹೇಳಿ, ಅವ

ರ ಹಶಿವೆ ದಾಹಗಳನ್ನು ತೀರಿಸಿ ಸಹಾಯ ಮಾಡುವನು! ನಿಮಗೆ ರಕ್ಷಣೆಯಾಗುವ ಹಾಗೆ ಇದನ್ನು ಹೇಳಿದನೆಂಬುವದು ಸಮಸ್ತ ಸುವರ್ತಮಾನದ ಸ್ವಾರಸ್ಯವಾಗಿದೆ.

ವಿಶೇಷವಾಗಿ ಯೇಸು ಪರ್ವತದ ಮೇಲೆ ಸಾರಿದ ಮಹಾ ಸ್ತುತಿಗೆ ಅತಿ ಯೋಗ್ಯವಾದ ಉತ್ತಮ ಪ್ರಸಂಗದ ವಿಷಯದಲ್ಲಿ ಈ ಪ್ರಕಾರ ಆಲೋಚನೆ ಮಾಡುವದು ತಕ್ಕದ್ದಾಗಿದೆ. ಆ ಪ್ರಸಂಗವು ನೆಲೆ ಇಲ್ಲದ ಸಮುದ್ರದಂತೆ ಇರುತ್ತದೆ. ಅದರ ಅಂತ್ಯದಲ್ಲಿ ಬರದ ವಚನಗಳಲ್ಲಿ ಯೇಸು ತನ್ನ ಆಸಕ್ತಿಯನ್ನೂ ತನ್ನ ಪ್ರೀತಿಯನ್ನೂ ಹೊಸತಾಗಿ ಎಬ್ಬಿಸಿ, ತಾನು ನಮ್ಮ ರಕ್ಷಣೆಯನ್ನು ಪೂರ್ಣ ಹೃದಯದಿಂದ ಅಪೇಕ್ಷಿಸಿ ಹುಡುಕಿ ಇರುತ್ತೇನೆಂದು ಅತಿ ನಿಶ್ಚಯವಾಗಿಯೂ ಸ್ಪಷ್ಟವಾಗಿಯೂ ತೋರಿಸುವ ವಾಕ್ಯವನ್ನು ನಮಗೆ ಹೇಳುತ್ತಾನೆ. ಈ ಮಾತು ಇಬ್ಬಾಯಿಯ ಕತ್ತಿಯಂತೆ, ಆತನ ಬಾಯೊಳಗಿಂದ ಹೊರಟು, ಎಡಬಲಕ್ಕೂ ಕಡಿಯುತ್ತದೆ. ಅದು ಮುಕ್ತಿಯ ಆಶೆಯನ್ನು ಮಾತ್ರವಲ್ಲ, ನಾಶದ ನಿರ್ಣಯವನ್ನು ನಮಗೆ ತೋರಿಸಿ, ಪರಲೋಕವನ್ನೂ ನರಕವನ್ನೂ ನಮ್ಮ ದೃಷ್ಟಿಯ ಮುಂದೆ ಇಡುತ್ತದೆ. ಆದರೆ ಆತನು ಬಹಳ ಪ್ರೀತಿ ನಮ್ಮ ಮೇಲೆ ಇಡುವದರಿಂದ ನಮಗೆ ಭಯ ಪಡಿಸಿದ್ದಾನೆ. ಅಯ್ಯೋ ಬಹಳ ಬೇಸರಿಕೆಯೂ ಉದಾಸೀನವೂ ದಡ್ಡತನವೂ ಅವಿಧೇಯತ್ವವೂ ಅವಿವೇಕವೂ ಕಪಟವೂ ನಮ್ಮಲ್ಲಿರುವದನ್ನು ಆತನು ನೋಡಿ ಕೊಂಡಿರುತ್ತಾನಲ್ಲವೇ? ವಿಶೇಷವಾಗಿ, ನಿತ್ಯನಾಶನಕ್ಕೆ ವೈಯ್ಯುವ ಮಾರ್ಗದಲ್ಲಿ ಬಹು ಮಂದಿ ನಡದು ಕೊಂಡು, ತಾವು ಮುಕ್ತಿ ಪಥದಲ್ಲಿರುತ್ತೇವೆಂದು ನೆನಸಿ ಕೊಂಡು, ಮೋಸ ಹೋಗುವದರಿಂದ ಆತನ ಹೃದಯದಲ್ಲಿ ದುಃಖ ಉಂಟಾಗುತ್ತದೆ. ಅಹುದು ನಿಜವೇ, ನಮ್ಮ ಕರ್ತನಾದ ಯೇಸುವಿನ ಮನಸ್ಸು ಹೀಗೆಯೇ ಉಂಟೆಂದು ನಾವು ತಿಳಿದು ಕೊಳ್ಳ ಬೇಕು. ಕ್ರೈಸ್ತ ಮಾರ್ಗದಲ್ಲಿ ಹೆಚು ಕಷ್ಟವನ್ನೂ ಪರಲೋಕದ ಪ್ರಯಾಣದಲ್ಲಿ ಹೆಚ್ಚು ಭಂಗವನ್ನೂ ಆತನು ನಮಗೆ ಕೊಡುತ್ತಾನೆಂದು, ನಂಬಿಗೆ ಇಲ್ಲದ ಕಪಟವುಳ್ಳ ಜೀವಾತ್ಮಕ್ಕೆ ಒಂದು ವೇಳ್ಯ ಕಾಣುವದು. ಇದಲ್ಲದೆ, ಬಾಗಲು ಇಷ್ಟು ಇಕ್ಕಟ್ಟಾಗಿಯೂ, ಹಾದಿ ಸಣ್ಣದಾಗಿಯೂ, ಜೀವದೊಳಗೆ ಪ್ರವೇಶಿಸುವವರು ಎಷ್ಟೋ ಕೊಂಚ ಜನರಾಗಿಯೂ, ನಾಶನಕ್ಕೆ ಹೋಗುವವರು ಬಹು ಮಂದಿಯಾಗಿಯೂ ಇದ್ದಾರಾದರೆ, ಯಾರಿಗೆ ರಕ್ಷಣೆಯಾಗುವದು ಎಂದು, ಧೈರ್ಯವಿಲ್ಲದ ನಾಚಿಕೆ ಪಡುವ ಜೀವಾತ್ಮವು ಭ್ರಮೆ ಪಟ್ಟು ಹೇಳುವದು. ಆದರೆ ಇದೆಲ್ಲಾನ್ನು ಕರ್ತನಾದ ಯೇಸುವು ನಮಗೆ ರಕ್ಷಣೆಯಾಗುವ ಹಾಗೆ ಮಾತ್ರ ಹೇಳುತ್ತಾನೆ. ಹೀಗಿರುವದರಿಂದ ನಾವು ಯೆಹೂದ್ಯರ ಹಾಗೆ ಗುಣುಗುಟ್ಟದೆ, ನಮಗೆ ಬೇಕಾಗಿ ಇಷ್ಟು ಪ್ರೀತಿಯುಳ್ಳ ಕರ್ತನಾದ ಯೇಸು ಕ್ರಿಸ್ತನನ್ನು ವಿಶ್ವಾಸದಿಂದ ಸ್ತೋತ್ರ ಮಾಡುವ! ಆತನು ಹೇಳಿದ ಮಾತುಗಳನ್ನೆಲ್ಲಾ ನಮ್ಮ ರಕ್ಷಣೆಗಾಗಿಯೂ, ಬಿಡುಗಡೆಗಾಗಿಯೂ, ನಾವು ಪರಿಶುದ್ಧರಾಗುವದಕ್ಕಾಗಿಯೂ, ಮುಕ್ತಿ ಪಡಿಯುವದಕ್ಕಾಗಿಯೂ ನಮಗೆ ಹೇಳುತ್ತಾನೆ. ಅದು ಕಾರಣ ಪ್ರಿಯರೇ! ನಮ್ಮ ಜೀವಾತ್ಮಗಳನ್ನು ಬದುಕಿಸಿ, ನಮಗೆ ರಕ್ಷಣೆಯಾಗ ಬೇಕೆಂದು ಯೇಸು ಮಾತಾಡುವದರಿಂದ ಆತನ ವಾಕ್ಯದ ಮುಖಾಂತರ ತಪ್ಪದೆ, ನಿಶ್ಚಯವಾಗಿ ರಕ್ಷಣೆ ಪಡಿಯುವದಕ್ಕೆ ಅಪೇಕ್ಷೆ ಮಾಡಿ ಹುಡುಕ ಬೇಕೆಂದು, ತಿಳು ಕೊಳ್ಳಿರಿ. ನಮ್ಮ ಹೃದಯಗಳನ್ನು ಸಿದ್ಧ ಪಡಿಸಿ, ಎಡೆ ಬಿಡದೆ ಎಚ್ಚರವಾಗಿದ್ದು, ನಮಗೆ ರಕ್ಷಣೆಯಾಗುವ ಹಾಗೆ, ಯೇಸು ಹೇಳಿದ ಮಾತುಗಳನ್ನು ವಿಚಾರಿಸಿ, ಧ್ಯಾನ ಮಾಡೋಣ!

ರಕ್ಷಣೆ ಹೊಂದ ಬೇಕನ್ನುವವರಿಗೆ ಯೇಸು ಇಲ್ಲಿ ಬುದ್ಧಿ ಹೇಳುವದನ್ನು ನೋಡಿ ಕೊಳ್ಳೋಣ.

ಓ ಕರ್ತನಾದ ಯೇಸುವೇ, ನೀನು ಮಾತಾಡ ತೊಡಗಿ, ನಮಗೆ ರಕ್ಷಣೆಯಾಗುವ ಹಾಗೆ, ಹೇಳಿದ ಒಂದೊಂದು ಮಾತನ್ನು ನಮ್ಮಲ್ಲಿ ನೆರವೇರಿಸು. ಓ ಕರ್ತನಾದ ಯೇಸುವೇ, ನಿನಗೆ ನಮ್ಮ ವಿಷಯದಲ್ಲಿ ಸ್ಥಿರ ಮನಸ್ಸು ಉಂಟು. ಅಯ್ಯೋ ನಮ್ಮ ರಕ್ಷಣೆಯಾಗ ಬೇಕೆಂದು ನಿನ್ನಲ್ಲಿ ಎಷ್ಟು ಸ್ಥಿರ ಮನಸ್ಸು ಉಂಟೊ ಅಷ್ಟು ಸ್ಥಿರ ಮನಸ್ಸು ಇಲ್ಲವೇ ಅರೆವಾಶಿ ಮಾತ್ರ ನಮ್ಮಲ್ಲಿ ಇದ್ದದ್ದಾದರೆ, ನಿಶ್ಚಯವಾಗಿ ಈಗಲೂ ಇನ್ನು ಮೇಲೆಯೂ ಭಾಗ್ಯವುಳ್ಳ ಮನುಷ್ಯರಾಗಿರುವೆವು. ಹಾಗಾದರೆ ನಿನ್ನ ಉತ್ತಮ ಚಿತ್ತವೂ, ನಮ್ಮ ಮೇಲೆ ಇರುವ ನಿನ್ನ ಹೃದಯದ ಮೆಚ್ಚಿಗೆಯೂ, ಉಂಟಾಗಿರಲಿ. ಆಮೆನ್.

ಪ್ರಿಯರೇ, ನನ್ನ ಮೇಲೆ ಅಲ್ಲ, ನಮಗೆ ರಕ್ಷಣೆಯಾಗುವ ಹಾಗೆ, ನಮ್ಮ ಸಂಗಡ ಮಾತಾಡುವವನ ಮೇಲೆ ನೋಡಿರಿ; ಯಾಕಂದರೆ, ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ ಎಂದು, ನಮ್ಮ ವಚನದಲ್ಲಿ ಬರದ ವಾಕ್ಯಗಳ ಅಭಿಪ್ರಾಯವು ಇದೇ. ಕರ್ತನಾದ ಯೇಸು ಪರ್ವತಪ್ರಸಂಗದಲ್ಲಿ ಮೊದಲು ನಮ್ಮನ್ನು ನ್ಯಾಯಪ್ರಮಾಣದ ಬಳಿಗೂ, ಅದರ ವಿವರವನ್ನು ಹೇಳುವ ಪ್ರವಾದಿಗಳ ಬಳಿಗೂ, ತಕ್ಕೊಂಡು ಹೋಗುತ್ತಿದ್ದನು. ಆದರೆ ಅವರ ಮಾತುಗಳ ಪ್ರಕಾರ ನಾವು ಮಾಡುವ ಹಂಗಿನಲ್ಲಿರುವಂಥಾದ್ದೆಲ್ಲಾನ್ನೂ ಮಾಡಿ ಕೊಂಡು ಇದ್ದರೆ, ಅದರಿಂದ ನಮಗೆ ಮುಕ್ತಿ ಶಿಕ್ಕೀತು. ಹೀಗಿರುವದರಿಂದ ನಮ್ಮ ಕರ್ತನಾದ ಯೇಸುವು, ನಾವು ತನ್ನಲ್ಲೇ ಮುಕ್ತಿಯನ್ನೂ ನಿಜವಾದ ಪರಿಶುದ್ಧತ್ವವನ್ನೂ ಹುಡುಕುವ ಹಾಗೆ, ನಮ್ಮನ್ನು ಬೇಗ ತಿರಿಗಿ ತನ್ನ ಹತ್ತರಕ್ಕೆ ಕರೆಯುತ್ತಾನೆ. ಹಾಗಾದರೆ ಪ್ರಿಯ ಜೀವಾತ್ಮನೆ, ನಿನ್ನ ರಕ್ಷಕನು ಬಯಸುವದು ಇದೇ; ಯಾವದಂದರೆ: ನೀನು ಯಾವದರಲ್ಲಿಯಾದರೂ ವಿಶ್ರಾಂತಿ ಪಡೆಯದೆ, ಮೋಶೆಯಲ್ಲಿಯಾದರೂ, ಪ್ರವಾದಿಗಳಲ್ಲಿಯಾದರೂ, ಯಾರಲ್ಲಿಯಾದರೂ, ಯಾವದರಲ್ಲಿಯಾದರೂ ನಿಲ್ಲದೆ, ಎಲ್ಲಾನ್ನು ದಾಟಿ ತನ್ನಿಂದ ನಿತ್ಯಜೀವಕ್ಕೆ ಬರ ಬೇಕೆಂಬುವದೇ.

ಆದ್ದರಿಂದ ಕರ್ತನಾದ ಯೇಸುವು ನಮಗೆ ರಕ್ಷಣೆಯಾಗುವ ಹಾಗೆ, ಎಲ್ಲಾನ್ನು ಮಾತಾಡುವದರಿಂದ, ಒಂದು ಸಣ್ಣ ಮಾತಾದರೂ ಸುಮ್ಮನೆ ಹೇಳಲಿಲ್ಲವೆಂದು ತಿಳಿದು ಕೊಂಡು, ನಮ್ಮ ವಚನದ ಮೂರು ಮಾತುಗಳನ್ನು ಪ್ರತ್ಯಪ್ರತ್ಯೇಕವಾಗಿ ಧ್ಯಾನ ಮಾಡೋಣ.

ಮೊದಲನೇದು ಬಾಗಲಿನ ವಿಷಯದಲ್ಲಿ,
ಆ ಮೇಲೆ ಬಾಗಲಿನ ಇಕ್ಕಟ್ಟಿನ ವಿಷಯದಲ್ಲಿ,
ಕಡೆಯಲ್ಲಿ ಅದರ ಒಳಗೆ ಪ್ರವೇಶಿಸುವ ವಿಷಯದಲ್ಲಿ ಮಾತಾಡುವ.

೧.) ಬಾಗಲಿನಿಂದ ಪ್ರವೇಶಿಸಿರಿ ಎಂದು ಹೇಳಿ, ಕರ್ತನಾದ ಯೇಸುವು, ನಾವು ತನ್ನಿಂದ ಮುಕ್ತಿಯನ್ನು ಪಡೆಯುವ ಹಾಗೆ, ನಿಜ ಬಾಗಲಾದ ತನ್ನ ಬಳಿಗೆ ಬರ ಬೇಕೆಂತ ನಮ್ಮನ್ನು ಕರೆಯುತ್ತಾನೆಂದು ನನಗೆ ಕಾಣುತ್ತದೆ. ಯೋಹಾ. ೧೦. ೯ನೇ ವಚನದಲ್ಲಿ ಆತನು ತಾನು ಬಾಗಲು ಆ

ಗಿದ್ಧೇನೆ, ತನ್ನಿಂದ ಪ್ರವೇಶಿಸುವವನಿಗೆ ರಕ್ಷಣೆಯಾಗುವದೆಂದು ಹೇಳುತ್ತಾನಲ್ಲವೇ. ಮತ್ತು ಯೋಹಾ. ೧೪. ೬ನೇ ವಚನದಲ್ಲಿ ಆತನು, ತಾನು ಮಾರ್ಗವೂ ಸತ್ಯವೂ ಜೀವವೂ ಆಗಿದ್ಧೇನೆ; ತನ್ನ ಹೊರತು ಯಾರಾದರೂ ತಂದೆಯ ಬಳಿಗೆ ಬರುವದಿಲ್ಲವೆಂದು ಹೇಳುತ್ತಾನೆ. ಆತನೇ ನಾವು ಪರಲೋಕಕ್ಕೆ ಏರಿ ಹೋಗುವ ಯಾಕೋಬನ ಏಣಿಯಾಗಿದ್ಧಾನೆ. ಆತನ ವಿಷಯದಲ್ಲೇ ೧ ಮೋಶೆ ೧೮. ೧೨, ೧೭ನೇ ವಚನಗಳಲ್ಲಿ ಇಲ್ಲಿ ಪರಲೋಕದ ಬಾಗಲು ಅದೆ ಎಂದು ಬರದದೆ. ಇಗೋ ಪ್ರಿಯನೇ, ಹೀಗೆಯೇ ಬರಹದಲ್ಲಿ ಬರದದ್ದು ಎಲ್ಲಾ ನಿನ್ನನ್ನು ನಿನ್ನ ಯೇಸುವಿನ ಬಳಿಗೆ ಕರ ಕೊಂಡು ಹೋಗುತ್ತದೆ. ಯಾಕಂದರೆ, ಅವನು ಎಲ್ಲಾ ಆಗಿದ್ಧಾನೆ. ಆತನು ಮಾರ್ಗ ತೋರಿಸುವವನು; ಆತನು ಜೀವದ ಮಾರ್ಗ, ಆತನು ತಾನು ಜೀವವಾಗಿದ್ಧಾನೆ. ಈ ಸಾರಿ ಆತನು ಜೀವಕ್ಕೆ ಕೊಂಡು ಹೋಗುವ ಬಾಗಲು ಆಗಿ, ತನ್ನನ್ನು ನಿನಗೆ ತೋರಿಸುತ್ತಾನೆ. ಆತನು ನಿಜವಾಗಿ ಬೇರೆ ಬೇರೆ ಪ್ರಕಾರ ಜೀವದ ಬಾಗಲಾಗಿದ್ಧಾನೆ. ೧, ತನ್ನ ದಯೆಯ ಪ್ರಕಾರ; ಯಾಕಂದರೆ ಯೇಸು ಕ್ರಿಸ್ತನ ದಯೆಯಿಂದ ನಾವೂ ನಮ್ಮ ತಂದೆಗಳೂ ರಕ್ಷಣೆ ಪಡಿಯ ಬೇಕು. (ಪ್ರೆಷ್. ೧೫. ೧೧.) ೨, ತನ್ನ ಬೋಧನೆಯ ಪ್ರಕಾರ; ಯಾಕಂದರೆ ಆತನಿಗೆ ನಿತ್ಯಜೀವದ ವಾಕ್ಯಗಳು ಉಂಟು. (ಯೋಹಾ. ೬. ೬೮.) ಆತನು ಹೇಳುವಂಥಾದ್ದು ನಮಗೆ ರಕ್ಷಣೆಯಾಗುವ ಹಾಗೆ ನಮಗೆ ಹೇಳುತ್ತಾನೆ. ೩, ತನ್ನ ಪುಣ್ಯದ ಪ್ರಕಾರ; ಯಾಕಂದರೆ ಆತನಲ್ಲದೆ ಬೇರೊಬ್ಬ ರಕ್ಷಕನಿಲ್ಲ. ಮತ್ತು ರಕ್ಷಣೆ ಪಡಿಯುವ ಹಾಗೆ, ಯೇಸುವಿನ ಹೆಸರಲ್ಲದೆ, ಬೇರೊಂದು ಹೆಸರು ಮನುಷ್ಯರಿಗೆ ಕೊಡಲ್ಪಡಲಿಲ್ಲ. (ಅ. ಕ್ರಿ. ೪. ೧೨.) ೪, ತನ್ನ ನಡತೆಯ ಮಾದ್ರಿಯ ಪ್ರಕಾರ; ಯಾತಕ್ಕಂದರೆ, ತಾನು ನಡದ ಪ್ರಕಾರ ನಾವು ಸಹ ನಡಿಯುವ ಹಾಗೆ ಆತನು ನಮಗೆ ಒಂದು ಮಾದ್ರಿಯನ್ನು ಬಿಟ್ಟು ಕೊಟ್ಟಿದ್ಧಾನೆ. (ಯೋಹಾ. ೮. ೧೧.) ಮತ್ತು ಆತನು ವಿಶ್ವಾಸವನ್ನು ತೊಡಗಿಸುವವನೂ ತೀರಿಸುವವನೂ (ಹೆಬ. ೧೨. ೨.) ಆಗಿದ್ದು, ಪರಲೋಕದ ಬಾಗಲು ತೆರಿಯುವವನೂ ಮುಚ್ಚುವವನೂ ಆಗಿದ್ಧಾನೆ. ಆತನು ಆದಿಯಿಂದ ಅಂತ್ಯದ ವರೆಗೆ ಎಲ್ಲಾನ್ನು ನಮ್ಮಲ್ಲಿ ಎತ್ನೈಸುವವನಾಗಿದ್ಧಾನೆ. ಬಾಗಲು ಇಲ್ಲದೆ ಬಂದೋಬಸ್ತು ಮಾಡಿದ ಮನೆಯ ಒಳಗೂ, ಆನೆಬಾಗಲು ಇಲ್ಲದೆ ಘಟ್ಟಿಯಾಗಿ ಮುಚ್ಚಿದ ಕೋಟೆಯ ಒಳಗೂ ಯಾವ ಪ್ರಕಾರ ಹೋಗಲಿಕ್ಕೆ ಕೂಡದೋ, ಅದೇ ಪ್ರಕಾರ ಆತನ ಹೊರ್ತು ನಾವು ಪರಲೋಕ ರಾಜ್ಯದಲ್ಲಿ ಶೇರಲಾರೆವು.

ಪ್ರಿಯರೇ, ಇದನ್ನು ನಾನು ನಿಮಗೆ ವಿವರಿಸಿ ಹೇಳಿದ್ದು ವ್ಯರ್ಥವಾಗದೆ ಇರಲಿ. ಯೆಸು ಕ್ರಿಸ್ತನು ಪರಲೋಕಕ್ಕೆ ಹೋಗುವ ಬಾಗಲು ಆಗಿದ್ಧಾನೆಂಬುವದಕ್ಕೆ ಮೆಚ್ಚಿ, ಅದರಿಂದ ಮುಕ್ತಿ ಪಡಿಯ ಬೇಕು. ಪರಲೋಕಕ್ಕೆ ಹೋಗುವ ಬಾಗಲಿನ ಸುದ್ದಿಯನ್ನು ಕೇಳುವದರಿಂದ, ನಾವು ದೇವರಿಗೆ ಸ್ತುತಿಯನ್ನೂ ಸ್ತೋತ್ರವನ್ನೂ ಕೊಡ ಬೇಕು. ಮತ್ತು ಯೇಸು ಕ್ರಿಸ್ತನು ಈ ಬಾಗಲು ಆಗಿರುವದರಿಂದ ಇನ್ನು ಹೆಚ್ಚಾಗಿ ದೇವರಿಗೆ ಸ್ತುತಿಯನ್ನೂ ಸ್ತೋತ್ರವನ್ನೂ ಅರ್ಪಿಸ ಬೇಕು. ಯಾಕಂದರೆ ಆತನಿಗಿಂತ ನಮಗೆ ಹೆಚ್ಚು ಹಿತದವನು ಯಾರು? ಯಾರ ಮೇಲೆ ನಾವು ಹೆಚ್ಚು ನಂಬಿಕೆ ಇಡ ಬಹುದು? ಮತ್ತು ಯೇಸು ತನ್ನನ್ನು ನಾನಾ ವಿಧದಿಂದ ಬಾಗಲಾಗಿ ಕೊಟ್ಟನೆಂಬ ಬೋಧನೆಯಿಂದಲೂ ಹೆಚ್ಚು ರಮ್ಯವಾಗಿ ಹತ್ತರ ಬಂದು ಶೇರುವ ಹಾಗೆ ಅಂಕೆ ಮಾಡುವದು ಏನು? ಐಯ್ಯೋ ಕಷ್ಟ, ಪಾಪದಲ್ಲಿ ಬಿದ್ದ ಮನುಷ್ಯನಿಗೆ ಪರಲೋಕವು ಎಷ್ಟು ಘಟ್ಟಿಯಾಗಿ ಮುಚ್ಚಿತ್ತು! ಬಡ ಮ

ನುಷ್ಯ ಪರದೈಸದಿಂದ ಹೊರಡಿಸಲ್ಪಟ್ಟು ಶಪಿತವಾದ ಭೂಲೋಕದಲ್ಲಿ ಬಿದ್ದ ಮೇಲೆ, ಪರದೈಸವು ಅವನ ಹಿಂದೆ ಮುಚ್ಚಲ್ಪಟ್ಟಿತು. ಮಿಂಚಿನ ಖಡ್ಗವನ್ನು ಹಿಡಿದ ಬಲವುಳ್ಳ ದೂತನು ಅದರ ದ್ವಾರದ ಮುಂದೆ ನಿಲ್ಲ ಬೇಕು ಎಂದು ಅಪ್ಪಣೆಯಾದದ್ದು ಎಷ್ಟು ದುಃಖ ಕೊಡುವ ಸಂಗತಿಯು. ಪರದೈಸದೊಳಗೆ ಬಡ ಮನುಷ್ಯನು ಪ್ರವೇಶಿಸ ಕೂಡದೆ ಹೋದ ಮೇಲೆ ಅವನನ್ನು ಪರಲೋಕದಲ್ಲಿ ಶೇರಿಸುವವನು ಎಲ್ಲಿ? ಕರ್ತನಾದ ಯೇಸುವು ಮರಣವನ್ನು ನಮಗೋಸ್ಕರವಾಗಿ ತಾಳದೆಯೂ ಪರಲೋಕದ ಬಾಗಲನ್ನು ತೆರೆಯದೆಯೂ ಜೀವವನ್ನು ತಿರಿಗಿ ತಕ್ಕೊಂಡು ಬಾರದೆಯೂ ಇದ್ದದ್ದಾದರೆ, ನಾವು ಎಂದೆಂದಿಗೂ ಹೊರಗಾಗಿ ಇರ ಬೇಕಾಗಿತ್ತು.

ಆದರೆ ಇದನ್ನು ಸಾಧನೆ ಮಾಡುವದಕ್ಕೆ ನನ್ನ ರಕ್ಷಕನು ಎಷ್ಟೋ ಕೊಡ ಬೇಕಾಗಿತ್ತು! ಪರಲೋಕವನ್ನು ಮಾತ್ರವಲ್ಲ, ತಂದೆಯ ಎದೆಯನ್ನು ಮಾತ್ರವಲ್ಲ, ದೂತರ ಸಹವಾಸವನ್ನು ಮಾತ್ರವಲ್ಲ, ತನಗೆ ಇದ್ದ ಆನಂದವನ್ನು ಮಾತ್ರವಲ್ಲ, ತನ್ನ ರಕ್ತವನ್ನೂ ತನ್ನ ಶರೀರವನ್ನೂ ತನ್ನ ಜೀವವನ್ನೂ ಕೊಡ ಬೇಕಾಗಿತ್ತು. ಆತನ ಮಾಂಸವು ಎಳೆ ಮಾಂಸವು ಅಡ್ಡ ಇರುವ ತೆರೆಯ ಪ್ರಕಾರ ಶೀಳಿಹೋಗ ಬೇಕಾಗಿತ್ತು ಎಂದು ಅಪೊಸ್ತಲನು ಹೇಳುತ್ತಾನೆ. ಈ ಪ್ರಕಾರ ಮಾತ್ರ ಯೇಸು ತನ್ನ ಮಾಂಸ ರಕ್ತಗಳಿಂದ ಪರಿಶುದ್ಧ ಸ್ಥಳದ ಪ್ರವೇಶಕ್ಕೆ ಜೀವವುಳ್ಳ ಹೊಸ ಮಾರ್ಗವು ನಮಗೆ ಸಿದ್ಧವಾಗಿರ ಬಹುದಾಗಿತ್ತು. (ಇಬ್ರಿ. ೧೦. ೧೯, ೨೦.) ಈಗ ಪರಲೋಕದೊಳಗೆ ಹೋಗುವ ಬಾಗಲು ಹಿಂದೆ ಉಂಟು. ಹ್ಯಾಗಂದರೆ ನಮ್ಮ ಕರ್ತನಾದ ಯೇಸುವು ತನ್ನ ಮಾಂಸವನ್ನು ತೆರೆಯಂತೆ ಶೀಳಿಸಿ ಕೊಂಡು, ರಕ್ತ ಹರಿಯ ಮಾಡಿದ ಐದು ಘಾಯಗಳನ್ನು ಬಾಗಲುಗಳ ಹಾಗೆಯೇ ತನ್ನ ಶರೀರದಲ್ಲಿ ತೆರೆಯ ಮಾಡಿ, ತನಗೆ ತಾನೇ ಬಾಗಲಾಗಿ ಮಾಡಿ ಕೊಂಡನು. ಇದಲ್ಲದೆ, ರಕ್ತದ ಬೆವರು ಎಲ್ಲೆಲ್ಲಿಯೂ ಸೋರುವ ಹಾಗೆ ತನ್ನ ಶರೀರದಲ್ಲಿಯಣ ರೋಮಕೂಪಗಳನ್ನೆಲ್ಲಾ ತೆರದು, ತನ್ನಿಂದ ಪರಲೋಕಕ್ಕೆ ಹೋಗುವ ಬಾಗಲನ್ನು ನಮಗೆ ತೆರದಿದ್ದಾನೆ.

ಏನು? ಸಂತೋಷಿಸ ತಕ್ಕದ್ದಲ್ಲವೋ? ಆತನಿಗೆ ಸ್ತುತಿಯನ್ನೂ ಸ್ತೋತ್ರವನ್ನೂ ಅರ್ಪಿಸ ಬೇಡವೋ? ಬಾಗಲನ್ನು ಹುಡುಕ ಬಾರದೋ? ಮತ್ತು ಅವನು ಘಟ್ಟಿಯಾಗಿ ಕರದು: ಬಾಗಲು ಇಲ್ಲಿ! ಪರಲೋಕಕ್ಕೆ ಹೋಗುವ ಬಾಗಲು ಇಲ್ಲಿ! ಇಲ್ಲಿ ಅದು ನಿಮಗೋಸ್ಕರ ಇರುತ್ತದೆ! ಅದು ಇಲ್ಲಿ ತೆರದದೆ! ನೀವು ಶೇರುವ ಹಾಗೆ ಅದು ಇಲ್ಲಿ ಅಗಲವಾಗಿರುತ್ತದೆ! ಎಂದು ಆತನು ಹೇಳಿದ ಮೇಲೆ ಅಕಟಾ ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಲೇ ಪ್ರವೇಶಿಸಿರಿ. ಏನು ಪ್ರವೇಶಿಸಲಿಕ್ಕೆ ಮನಸ್ಸಿಲ್ಲದವರಾಗಿರ ಬಹುದೋ? ಕರ್ತನಾದ ಯೇಸುವು ತಂದೆಯ ಬಳಿಗೆ ಇಂಥಾ ಪ್ರವೇಶವನ್ನು ನಮಗೆ ಸಿದ್ಧ ಮಾಡಿದ್ದಾನೆಂಬದರ ಸಂತೋಷವಿಲ್ಲದೆ ಇರ ಬಹುದೋ? ಆನಂದದಿಂದಲೂ ಸತ್ಯ ಹೃದಯದಿಂದಲೂ ಪೂರ್ಣ ವಿಶ್ವಾಸದಿಂದಲೂ ಅದರ ಕಡೆಗೆ ತಿರುಗಿ, ಅದರಲ್ಲಿ ಪ್ರವೇಶಿಸ ಪ್ರಯತ್ನ ಮಾಡದೆ ಇರ ಬಹುದೋ?

ನೋಡಿರಿ, ಈಗ ಬಾಗಲು ಹೀಗೆಯೇ ನನಗೆ ಕಾಣುತ್ತದೆ. ಬಾಗಲಿನಿಂದ ಜೀವದಲ್ಲಿ ಶೇರಿರಿ ಎಂದು ಹೇಳುವದಕ್ಕೆ ಯೇಸುವಿಗೆ ಕೂಡುವ ವರೆಗೆ ಇಷ್ಟು ಕಷ್ಟ ತಾಳ ಬೇಕಾಗಿತ್ತೋ? ನಾವು ಕರೆಯಲ್ಪಟ್ಟವರಾಗಿರುವದು ಎಷ್ಟೋ ಕರುಣವೂ ದಯೆಯೂ ಆಗಿದೆ! ಆದ್ದರಿಂದ ನನ್ನ ಹೃದಯದಲ್ಲಿ ಹೋಗುವ ಆಶೆ ಹುಟ್ಟಿ ಸ್ತುತಿಸಿ ಹರ್ಷದಿಂದ ಕೀರ್ತನೆ ಹಾಡುವದಕ್ಕೆ ತಕ್ಕದ್ದಾಗಿರು

ವದು. ನಾನಾದರೆ ನನ್ನ ಹೃದಯವನ್ನು ಅದು ಅದರಲ್ಲಿ ಪ್ರವೇಶಿಸ ಮನಸ್ಸಾಗಿರುವ ಹಾಗೆಯೂ, ಬಾಗಲಿನ ಸುದ್ದಿ ಕೇಳುವದರಲ್ಲಿ ಸಂತೋಷವಾಗಿರುವ ಹಾಗೆಯೂ ಸಿದ್ಧ ಮಾಡುತ್ತೇನೆ. ಬಾಗಲು ಇಕ್ಕಟ್ಟು ಎಂದು ಬರದಿದ್ದಾಗ್ಯೂ, ನಾನು ಬೇಸರ ಮಾಡಲಾರೆನು, ಧೈರ್ಯ ಗುಂದಲಿಕ್ಕಿಲ್ಲ. ನನಗೆ ಬಾಗಲು ಉಂಟೆಂದು ಕೇಳಿ, ದೇವರನ್ನು ಸ್ತುತಿಸುತ್ತೇನೆ. ಅದು ಎಷ್ಟು ಇಕ್ಕಟ್ಟಾಗಿದ್ದಾಗ್ಯೂ ಅದರಲ್ಲಿ ಶೇರುವದಕ್ಕೆ ಸಾಕಷ್ಟು ಅಗಲವಾಗಿದೆ. ಹ್ಯಾಗಾದರೂ ಬಗ್ಗಿ ಹೋರಾಡಿ ಹೋಗ ಬೇಕಾದಾಗ್ಯೂ ಚಿಂತೆ ಇಲ್ಲ. ನೆಲದ ಮೇಲೆ ಬಿದ್ದು ಹುಳದಂತೆ ದೇಕಿ ದಾಟ ಬೇಕಾಗಿದ್ದಾಗ್ಯೂ ಸಂತೋಷದಿಂದ ಪ್ರವೇಶಿಸುತ್ತೇನೆ. ಯೇಸುವಿಗೆ ಸಂಭವಿಸಿದ ಪ್ರಕಾರವೇ ರಕ್ತ ಬಂದು ಚರ್ಮ ಪರಚಲ್ಪಟ್ಟಾಗ್ಯೂ ಅದು ಕಷ್ಟವೆಂದು ಹೇಳ ಕೂಡದು, ಹೇಳ ಬಾರದು; ಯಾಕಂದರೆ ಭ್ರಷ್ಟ ಕಳ್ಳನಾದ ಗಡಿ ದಾಟಿಸಲ್ಪಟ್ಟ ಲಾಚಾರಿ ಪರದೇಶಿಯಾದ ನನಗೆ ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ ಎಂದು ಯೇಸು ಕೂಗಿ ಹೇಳುತ್ತಾನೆ. ಪರಲೋಕಕ್ಕೆ ಹೋಗುವ ಬಾಗಲು ಸಿದ್ಧವಾಗಿರುವದು ನನಗೆ ಸಾಕು.

೨.) ಇಕ್ಕಟ್ಟಿನ ಬಾಗಲು ಎಂಬದು ಏನೆಂದು ಹೇಳುವದಕ್ಕೆ ಈಗ ಸಿದ್ಧವಾಗಿದ್ದೇನೆ. ಈ ಬಾಗಲು ತನ್ನಲ್ಲಿ ಇಕ್ಕಟ್ಟಾಗಿರುವಂಥಾದ್ದಲ್ಲ, ಕೆಲವು ಜನ ಪ್ರವೇಶಿಸ ಬೇಕೆಂತಲೂ ಮಿಕ್ಕಾದವರು ಹೊರಗೆ ಇರ ಬೇಕೆಂತಲೂ ಕರ್ತನಾದ ಯೇಸುವಿಗೆ ಮನಸ್ಸಿಲ್ಲ. ಯಾತಕ್ಕಂದರೆ ತನ್ನ ಮನೆ ತುಂಬಾಗ ಬೇಕೆಂದು ಎಲ್ಲಾ ಮನುಷ್ಯರನ್ನು ತನ್ನ ಕಡೆಗೆ ಆತನು ಕರೆಯುತ್ತಾನೆ. ನನ್ನ ಕಡೆಗೆ ತಿರುಗಿ ಮುಕ್ತಿ ಪಡ ಕೊಳ್ಳಿರಿ, ಲೋಕದ ಎಲ್ಲಾ ಎಲ್ಲೆಗಳಲ್ಲಿರುವವರೇ, ಎಂದು ಹೇಳುತ್ತಾನೆ. ಆದರೆ ಆತನು ತನ್ನನ್ನು ತಗ್ಗಿಸಿ ಕೊಂಡ ಸ್ಥಿತಿಯಲ್ಲಿ ಅಲ್ಪನೂ ಹೀನನೂ ಮಾನರೂಪಗಳು ಇಲ್ಲದವನೂ ಆಗಿದ್ದು, ಇಂಥಾ ನೀಚತ್ವದಲ್ಲಿಯೂ ದೈನ್ಯಭಾವದಲ್ಲಿಯೂ ಎಲ್ಲಾನ್ನು ಬಿಟ್ಟು ಬಿಡುವ ಮನಸ್ಸಿನಿಂದಲೂ, ಪರಲೋಕದೊಳಗೆ ಶೇರ ಬೇಕೆಂಬವರುಗಳೆಲ್ಲರಿಗೂ ಅಗತ್ಯವಾಗಿ ತಪ್ಪದೆ ಕೈಕೊಂಡು ನಡ ಕೊಳ್ಳ ಬೇಕಾದ ಮಾದ್ರಿ ಆಗಿರುವದರಿಂದ ಕರ್ತನಾದ ಯೇಸು ತಾನು ಇಕ್ಕಟ್ಟಾದ ಬಾಗಲೆಂದು ಹೇಳುತ್ತಾನೆ. ನಾವು ಸ್ವಾಭಾವಿಕವಾಗಿ ಉನ್ನತ ಮನಸ್ಸಿನ ಉಬ್ಬಿದ ಗರ್ವಿಗಳಾದ ತರ್ಕವಾದಿಗಳಾಗಿರುವದರಿಂದ, ಯೇಸುವಿನ ನಡತೆ ನಮಗೆ ಬೇಗ ಅಸಹ್ಯವಾಗುತ್ತದೆ. ಉದ್ದವಾಗಿಯೂ ತೋರವಾಗಿಯೂ ಇರುವ ದೊಡ್ಡ ಮನುಷ್ಯನು ಸಣ್ಣ ದ್ವಾರದಲ್ಲಿ ಶೇರ ಬೇಕಾದ ಸಮಯದಲ್ಲಿ ತಗ್ಗಿ ಬಗ್ಗದೆ ಇದ್ದರೆ ಮೈಗೆ ತಾಗಿ ಕುಟ್ಟುವ ಪ್ರಕಾರ ಕರ್ತನಾದ ಯೇಸುವು ಗುಣವೆಂಬ ಸಣ್ಣ ಬಾಗಲು ಮನುಷ್ಯನ ಹುಟ್ಟು ಗುಣವೆಂಬ ದಡ್ಡಿಗೆ ಸಮ ಬೀಳುವದಿಲ್ಲ. ನನ್ನ ಬಳಿಗೆ ಬಂದು ನನ್ನಿಂದ ಕಲಿತು ಕೊಳ್ಳಿರಿ; ಯಾಕಂದರೆ, ನಾನು ಸಾತ್ವಿಕನೂ ಹೃದಯದಲ್ಲಿ ತಗ್ಗಿದವನೂ ಆಗಿದ್ದೇನೆಂಬ ಶಬ್ದವನ್ನು ಕೇಳುವೆವಾದರೆ, ಇಲ್ಲವೇ ಒಬ್ಬೊಬ್ಬನು ಯೇಸು ಕ್ರಿಸ್ತನ ಹಾಗೆಯೇ ಮನಸ್ಸುಳ್ಳವನಾಗಿರಲಿ. ನಾವು ಕ್ರಿಸ್ತನ ಹೆಜ್ಜೆಗಳನ್ನು ಹಿಡಿದು ನಡೆಯ ಬೇಕೆಂದು ಪೌಲನು ಹೇಳುವ ಮಾತನ್ನು ಕೇಳುವೆವಾದರೆ, ಮಾನಸಾಂತರವಿಲ್ಲದ ಸ್ವಭಾವಿಕವಾದ ಮನುಷ್ಯನಿಗೆ ಅದು ಆಗದು. ಅವನು ಭ್ರಾಂತಿ ಹಿಡಿದವನೂ ಪ್ರಪಂಚದವನೂ ಸೊಕ್ಕಿದ ಹಂದಿಯ ಹಾಗೆ ಹೆಮ್ಮೆ ನಡಿಸುವವನೂ ಲೋಕದ ಅರ್ಥವನ್ನು ಸುಲಿಗೆಯ ಹಾಗೆ ಹೊತ್ತು ಕೊಂಡು ಇರುವವನೂ ಆಗಿದ್ದು, ಇವುಗಳನ್ನೆಲ್ಲಾ ಬಿಸಾಡಿ, ಕರ್ತನಾದ ಯೇಸುವಿನ ಹಾಗೆಯೇ ಸಾ

ತ್ವಿಕನಾಗಿಯೂ ದೀನನಾಗಿಯೂ ಎಥಾರ್ಥವಂತನಾಗಿಯೂ ದೇವರ ಮುಂದೆಯೂ ಮನುಷ್ಯರ ಮುಂದೆಯೂ ತನ್ನನ್ನು ತಾನೇ ಅಷ್ಟು ತಗ್ಗಿಸಿ ಕೊಂಡು, ತನ್ನನ್ನು ಅಂತರಂಗವಾಗಿಯೂ ಬಹಿರಂಗವಾಗಿಯೂ ಅಷ್ಟು ಅಲ್ಪನಾಗಿ ಮಾಡಿ ಕೊಂಡು, ಯೇಸು ಕ್ರಿಸ್ತನ ಮಾದ್ರಿಯ ಪ್ರಕಾರವೇ ತನ್ನನ್ನು ಅಷ್ಟು ಎಚ್ಚರಿಕೆಯಾಗಿ ಸಾಧನೆ ಮಾಡುವದು ಬಹು ಕಷ್ಟ, ಬಹಳ ಪ್ರಯಾಸವೆಂದು ನೆನಸುತ್ತಾನೆ. ಆದ್ದರಿಂದ ಈ ಸಣ್ಣ ಬಾಗಲನ್ನು ಲಕ್ಷ ಮಾಡದೆ, ದಾಟುವದು ವಾಸಿ ಎಂದು ಹೆಚ್ಚು ಸುಲಭವಾಗಿರುವ ಕ್ರೈಸ್ತ ಮಾರ್ಗದಲ್ಲಿ ಕಾಣುವ ಅಗಲವಾದ ಬಾಗಲ ಕಡೆಗೆ ತಿರುಗುತ್ತಾನೆ. ಆದರೆ ಹೊರೆ ಹೊತ್ತ ಗೂನು ಇರುವ ಒಂಟೆಯು ಸೂಜಿಯ ರಂಧ್ರದಲ್ಲಿ ತೂರುವದಕ್ಕೆ ಕೂಡದ ಹಾಗೆಯೇ, ಲೋಭದಲ್ಲಿಯೂ ಬದುಕಿನ ಚಿಂತೆಯಲ್ಲಿಯೂ ಬಂಡುತನದಲ್ಲಿಯೂ ಹೊಟ್ಟೆಬಾಕತನದಲ್ಲಿಯೂ ಪ್ರಪಂಚದ ಮಮತೆಯಲ್ಲಿಯೂ ಪಾಪದ ಮೂಲದಲ್ಲಿಯೂ ಲೌಕಿಕ ವೈದಿಕ ಗರ್ವದಲ್ಲಿಯೂ ಮುಣುಗಿ ಹೋಗಿದ್ದ ಸಹಜ ಗುಣದ ಮನುಷ್ಯನಿಗೆ ಕ್ರಿಸ್ತನಲ್ಲಿ ಪಾಲು ಶಿಕ್ಕಲಾರದು. ಯಾಕಂದರೆ, ಇಂಥವನಿಗೆ ಕ್ರಿಸ್ತನೆಂಬ ಬಾಗಲು ಬಹಳ ಇಕ್ಕಟ್ಟಾಗಿರುತ್ತದೆ. ಅದರಲ್ಲಿ ಪ್ರವೇಶಿಸುವದಕ್ಕೆ ಮನಸ್ಸುಳ್ಳವನು ಕೂಸಿನ ಹಾಗೆ ಸಣ್ಣವನೂ ಬಡವನೂ ನಿರ್ವಾಣನೂ ದೀನನೂ ಆಗಿರ ಬೇಕು. ಇದು ಮಾಂಸದ ದಂಡಣೆಯ ಹೊರ್ತು ಆಗ ಕೂಡದು. ಇಕ್ಕಟ್ಟು ಬಾಗಲೊಳಗೆ ಹೋಗುವವನು ಅವುಕಲ್ಪಟ್ಟು ನೋವು ತಾಳಿ ಹೋಗ ಬೇಕಾಗಿರುವ ಪ್ರಕಾರ ಪರಲೋಕದ ಬಾಗಲಲ್ಲಿಯೂ ಮಾಂಸಕ್ಕೆ ಅಂಕೆಯಾಗ ಬೇಕು. ಮಾಂಸಮಯವಾದ ಹಳೇದಾದ ಸ್ವಭಾವವನ್ನು ಒತ್ತ ಬೇಕು, ಕ್ರೂಜೆಗೆ ಹಾಕ ಬೇಕು, ನೋಯಿಸ ಬೇಕು, ತುಳಿಯ ಬೇಕು. ಅಂದರೆ ರಕ್ತ ಮಾಂಸಕ್ಕೆ ಹುಳಿ ರುಚಿ ಹುಟ್ಟಿಸುವಂತೆ ಹೆಚ್ಚು ಪ್ರಯಾಸ ಪಟ್ಟು ಅನುಭವಿಸಿ ತಾಳಿ ಇರ ಬೇಕು.

ಎಲೇ ಪ್ರಿಯ ಜೀವಾತ್ಮರುಗಳಿರಾ, ಕರ್ತನಾದ ಯೇಸುವು ಪರಲೋಕದ ಬಾಗಲಲ್ಲಿ ಶೇರುವವರಿಗೆ ಮನಸ್ಸಾಕ್ಷಿಯನ್ನೂ ಬುದ್ಧಿಯನ್ನೂ ಇಚ್ಛೆಯನ್ನೂ ಮಾಂಸವನ್ನೂ ಎಷ್ಟೋ ಘಟ್ಟಿಯಾಗಿ ಹಿಡಿದು ಬಿಗಿಸುತ್ತಾನೆ! ಈ ಬಾಗಲನ್ನು ಕಾಯುವವನು ಎಷ್ಟೋ ಕಠಿಣವುಳ್ಳವನು! ಈ ಬಾಗಲು ನಮ್ಮ ವಿಷಯದಲ್ಲಿ ಎಷ್ಟೋ ಇಕ್ಕಟ್ಟು ಆದದ್ದು! ಯಾರಿಗಾದರೂ ಲಾಗ ಹಾಕಿ ನಾಟ್ಯ ವಾಡಿ ಇದರೊಳಗೆ ಓಡಿ ಹೋಗಲಿಕ್ಕೆ ಕೂಡುವದಿಲ್ಲ. ಯಾರಾದರೂ ಪಾಪವೆಂಬ ಕುದುರೆಯ ಮೇಲೆ ಕೂತು ಕೊಂಡು ಇದರೊಳಗೆ ಓಡಿಸಲಿಕ್ಕೆ ಕೂಡದು. ಮೊದಲು ಪಾಪವನ್ನು ಬಿಸಾಡಿ, ಹೆಮ್ಮು ಬಿಟ್ಟು, ಮನಸ್ಸಿನಲ್ಲಿ ಬಡವನಾಗಿಯೂ ಬತ್ತಲೆಯಾಗಿಯೂ ದೀನನಾಗಿಯೂ ತಗ್ಗಿಸಿ ಕೊಂಡು, ಇಕ್ಕಟ್ಟಿನ ಬಾಗಲಿಗೆ ಬಂದು, ಯೇಸು ಕ್ರಿಸ್ತನಿಗೆ ವಶವಾಗ ಬೇಕು. ಅದು ಬಡ ಮನುಷ್ಯರು ನಡಿಸ ನೆನಸುವಷ್ಟು ಸುಲಭವಲ್ಲ. ಉಪರಾಳಿಯೂ ಕಷ್ಟವೂ ಕಣ್ಣೀರು ಸುರಿಯುವದೂ ಪೇಚಾಟವೂ ಹೆದರಿಕೆಯೂ ಅದರಲ್ಲಿ ಬಹಳವಾಗುವದು.

೩.) ಈಗ ಈ ಇಕ್ಕಟ್ಟಿನ ಬಾಗಲಿನಲ್ಲಿ ಪ್ರವೇಶಿಸಿರಿ ಎಂಬದು ಏನು ಎಂದು ಕೇಳಿರಿ! ನಮ್ಮ ರಕ್ಷಕನು ಒಳಗೆ ಹೋಗಿರಿ ಎಂಬಬನ್ನು ಮಾತ್ರ ಹೇಳುತ್ತಾನೆ. ಆದರೆ ಆತನ ಹೃದಯವು ಬಹಳ ಸ್ತೋತ್ರದ ಆಸಕ್ತಿಯಿಂದ ಉಕ್ಕಿ ಇರುವದರಿಂದ ಬಹಳ ಮಾತಾಡದೆ ಮುಖ್ಯ ಕಾರ್ಯವನ್ನು ಮಾತ್ರ ಆಲೋಚಿಸಿ, ಇಕ್ಕಟ್ಟಾದ ಬಾಗಲಿನಿಂದ (ಅಂದರೆ ನನ್ನಿಂದ) ಒಳಗೆ ಪ್ರವೇಶಿಸಿರಿ

ಎಂದು ಹೇಳುತ್ತಾನೆ. ತಡವಾಗದ ಹಾಗೆ, ಎಲ್ಲಿಂದ ಬರ ಬೇಕು ಎಲ್ಲಿಗೆ ಹೋಗ ಬೇಕು ಎಂದು ಹೇಳುವದಿಲ್ಲ. ಇದನ್ನು ನಾವು ನಾವೆ ಧ್ಯಾನಿಸಿ ತಿಳು ಕೊಳ್ಳುವ: ಏನಂದರೆ ಒಂದು ಬಾಗಲಿನಿಂದ ಯಾವ ಜಾಗೆಯ ಒಳಗಾದರೂ ಹೋದರೆ, ಮೊದಲು ಇದ್ದ ಸ್ಥಳವನ್ನು ಬಿಟ್ಟು, ಮೊದಲು ಇಲ್ಲದ ಜಾಗೆಗೆ ಹೋಗುವದಾಗಿದೆ. ಇದರಿಂದ ನಮ್ಮ ಪ್ರಿಯ ರಕ್ಷಕನು, ನಮ್ಮ ಸ್ಥಿತಿಯು ಪೂರ್ಣವಾಗಿ (ಅಂದರೆ ಒಳಗಿಂದ ಹೃದಯದ ನೆಲೆಯಿಂದ), ಬೇರೆಯಾಗ ಬೇಕೆಂದು ಮನಸ್ಸಾಗಿರುವದನ್ನು ತಿಳು ಕೊಳ್ಳ ಬಹುದು. ಯಾಕಂದರೆ, ಮನುಷ್ಯರು ಆತನನ್ನು ಬುದ್ಧಿಯಿಂದ ತಿಳು ಕೊಂಡು, ಆತನ ಹೆಸರನ್ನು ಬಾಯಿಯಿಂದ ಅರಿಕೆ ಮಾಡಿ, ಅವನ ವಾಕ್ಯದಲ್ಲಿ ಹೆಚ್ಚಳ ಪಟ್ಟು ಬಹಿರಂಗವಾಗಿ ಬೇರೆ ಬೇರೆ ಸತ್ಕ್ರಿಯೆಗಳನ್ನು ಮಾಡಿದರಾದರೆ, ಅವರು ಕರ್ತನಾದ ಯೇಸು ಕ್ರಿಸ್ತನ ಬಳಿಗೆ ಬಂದಿದ್ದಾರೆಂದು ಹೇಳ ಕೂಡದು. ಆದ್ದರಿಂದ ಆತನು—ಕರ್ತನೇ ಕರ್ತನೇ ಎಂದು ನನ್ನ ಸಂಗಡ ಹೇಳುವವರೆಲ್ಲರು ಅಲ್ಲ, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವರೇ ಪರಲೋಕ ರಾಜ್ಯದಲ್ಲಿ ಪ್ರವೇಶಿಸುವರೆಂದು ಹೇಳುತ್ತಾನೆ. ಅದರಲ್ಲಿ ಶೇರುವದಕ್ಕೆ ಮತ್ತು ಹೆಚ್ಚಾಗಿದ್ದದ್ದು ಬೇಕಾಗುತ್ತದೆ. ಈ ವಿಷಯದಲ್ಲಿ ಮೂರು ತರ ಉಂಟು.

ಮಾನಸಾಂತರವೆಂಬ ಹೆಜ್ಜೆ ಮೊದಲನೇದು. ಅದೇನಂದರೆ: ಮೊದಲು ಇದ್ದ ಸ್ಥಿತಿಯನ್ನು ಬಿಟ್ಟು ಬೇರೊಂದರ ಕಡೆಗೆ ತಿರುಗ ಬೇಕು. ಕರ್ತನಾದ ಯೇಸು ಒಳಗೆ ಇರ ಬೇಕೆಂದು ಹೇಳುವದರ ಅರ್ಥವೇನಂದರೆ: ಎಲೇ ಮನುಷ್ಯನೇ, ನಿನ್ನಿಂದಲೂ, ನಿನ್ನ ಕುಟುಂಬದಿಂದಲೂ, ನಿನ್ನ ತಂದೆಯ ಮನೆಯಿಂದಲೂ, ಪಾಪದಿಂದಲೂ, ಲೋಕದ ಪ್ರೀತಿಯಿಂದಲೂ, ನಿನಗೆ ವಾಡಿಕೆಯಾದ ದುಷ್ಕರ್ಮಗಳಿಂದಲೂ, ನಿನ್ನ ಕಪಟದಿಂದಲೂ, ನಾನು ಒಳ್ಳೆ ಕ್ರೈಸ್ತನಾಗಿದ್ದೇನೆಂಬ ಭ್ರಮೆಯಿಂದಲೂ, ಕೆಟ್ಟ ಜನರ ಸಹವಾಸದಿಂದಲೂ, ದುಷ್ಟ ಅನ್ಯಾಯಗಳ ಗುಂಪಿನಿಂದಲೂ ಹೊರಟು, ಬೇರೆ ನಡತೆಗೆ ತಿರುಗು ಎಂಬುವದೆ.

ವಿಶ್ವಾಸದ ಹೆಜ್ಜೆ ಎರಡನೇದು. ಅದೇನಂದರೆ: ಒಂದು ಬಾಗಲಿನ ನಡುವೆ ದಾಟುವ ಹಾಗೆಯಾಗಲಿ, ಇಸ್ರಯೇಲಿನವರು ಕೆಂಪು ಸಮುದ್ರವನ್ನು ದಾಟಿದ ಹಾಗೆಯಾಗಲಿ, ಹೊಸ ಜನ್ಮವನ್ನು ಹೊಂದುವವರು ಯೇಸುವಿನೊಳಗೆ ಶೇರ ಬೇಕು. ಯೇಸು ಭಕ್ತನನ್ನು ನಾಲ್ಕು ಕಡೆಯಿಂದಲೂ ಸುತ್ತು ಹಾಕ ಬೇಕು. ಮತ್ತು ಭಕ್ತನು ತನ್ನ ರಕ್ಷಕನ ಸಂಗಡ ಪೂರ್ಣ ಸಾಯುಜ್ಯವಾಗ ಬೇಕು. ಯಾಕಂದರೆ ಯೇಸುವು ನಿಮ್ಮ ಬಾಗಲಾಗಿರುವ ನನ್ನಲ್ಲಿ ಶೇರಿರಿ ಎಂದು ನಮಗೆ ಹೇಳುವದರಿಂದ ನಮ್ಮಿಂದಲೂ, ನಾವು ನಮ್ಮ ನೀತಿಯಿಂದಲೂ, ನಮ್ಮ ತ್ರಾಣದಲ್ಲಿಯೂ ಇಡುವ ನಂಬಿಗೆಗೆ ನಮ್ಮನ್ನು ತಪ್ಪಿಸಿ, ನ್ಯಾಯಪ್ರಮಾಣವನ್ನೂ ಆಗದವುಗಳೆಲ್ಲಾನ್ನೂ ತಾನು ದಾಟಿಸಿ, ನಮ್ಮನ್ನು ತನ್ನಿಂದಲೇ ತನ್ನ ಅನ್ಯೋನ್ಯದಿಂದಲೇ ತನ್ನ ತ್ರಾಣದಿಂದಲೇ ಜೀವದಲ್ಲಿ ಶೇರಿಸಲಿಕ್ಕೆ ಮನಸ್ಸಾಗಿದ್ದಾನೆ. ಇದು ವಿಶ್ವಾಸದ ಕೆಲಸ; ಇದರ ವಿಷಯದಲ್ಲಿ ಲುಥರನು ಬಹಳ ಚನ್ನಾಗಿ ಬರದಿರುವದೇನಂದರೆ: ಇಕ್ಕಟ್ಟಿನ ಬಾಗಲು ಏನೆಂದು ತರ್ಕವಾದಿಗಳಿಗೆ ತಿಳಿಯುವದಿಲ್ಲ. ಅದು ವಿಶ್ವಾಸವೇ. ಇದರಿಂದ, ಮನುಷ್ಯನು ತಾನು ಪಡ ಕೊಂಡ ಪುಣ್ಯವು ವ್ಯರ್ಥವೆಂದು, ಎಲ್ಲಾನ್ನು ಬಿಟ್ಟು ದೇವರ ದಯ ಮಾತ್ರ ಹಿಡು ಕೊಳ್ಳುವ ಹಾಗೆ, ಬಹಳ ಬಡವನೂ ಏನೂ ಇಲ್ಲದವನೂ ಆಗುತ್ತಾನೆ.

ಪರಿಶುದ್ಧತ್ವದ ಸಾಧನೆಯು ಹೆಜ್ಜೆ ಮೂರನೇದು. ಹ್ಯಾಗೆ ಒಳಗೆ ಹೋಗ ಬೇಕೆಂದು ನಾವು ತಿಳು ಕೊಳ್ಳುವ ಹಾಗೆ ಆತನು—ಇಕ್ಕಟ್ಟಿನ ಬಾಗಲೊಳಗೆ ಹೋಗುವದಕ್ಕೆ ಹೋರಾಡಿರಿ! ಎಂದು ಹೇಳುತ್ತಾನೆ. (ಲೂಕ. ೧೩. ೨೪.) ಶತ್ರುಗಳು ಬಹಳ ಜನ, ನೋಡಿದೆಯೋ? ಅಡ್ಡಿಗಳು ಲೆಖ್ಖವಿಲ್ಲದವುಗಳು. ಉಗುರುಬೆಚ್ಚಗೆ ನೀರಿನಂತೆಯೇ ಇರುವ ಆಲಸ್ಯದ ಮನಸ್ಸಿನ ಪ್ರಯತ್ನ ಸಾಲದು. ಪರಲೋಕ ಸಂಪಾದನೆಗೋಸ್ಕರ ಹೋರಾಡುವವರು ಪ್ರಾಣಸಂಕಟದಲ್ಲಿ ಬಿದ್ದಿರುವ ಪ್ರಕಾರ ಹೋರಾಡ ಬೇಕು. ಕೆಟ್ಟ ಅವಗುಣಗಳನ್ನು ಜೈಸುವದಕ್ಕೆ ದಿನಾಲು ಹೋರಾಡ ಬೇಕು. ಲೋಕವನ್ನು ಅಲ್ಲಗಳೆಯುವದಕ್ಕೆ ಹೋರಾಡ ಬೇಕು. ಇತರರಿಗೆ ಶಕ್ತಿಯೂ ಮನಸ್ಸೂ ಇರುವದಕ್ಕಿಂತ ಹೆಚ್ಚಾದದ್ದನ್ನು ಮಾಡುವದಕ್ಕೆ ಹೋರಾಡ ಬೇಕು. ಇಂದ್ರಿಯ ನಿಗ್ರಹದಿಂದಲೂ ಮಿತಾನುಭವದಿಂದಲೂ ಮಾಂಸದ ವಿಷಯಗಳನ್ನು ತಗ್ಗಿಸುವದಕ್ಕೆ ಹೋರಾಡ ಬೇಕು; ಪ್ರಾರ್ಥನೆಯಿಂದಲೂ ಬೇಡಿ ಕೊಂಡು ತಟ್ಟಿ ದಣಿಯದೆ ಇರುವದಕ್ಕೆ ಹೋರಾಡ ಬೇಕು. ಇಂಥಾ ಇಕ್ಕಟ್ಟಿನ ಬಾಗಲೊಳಗೆ ಹೋಗುವದಕ್ಕೆ ಬಹಳ ಜಾಗ್ರತೆ ಮಾಡಿ, ಹೋರಾಡ ಬೇಕು. ಆದರೆ ಎಲ್ಲಿಗೆ ಹೋಗ ಬೇಕು? ಇದನ್ನು ಕ್ರಿಸ್ತನು ಸ್ಪಷ್ಟವಾಗಿ ಹೇಳುವದಿಲ್ಲ ಸರಿ, ಆದಾಗ್ಯೂ ನೀನು ಆತನಿಂದ ಪ್ರವೇಶಿಸು! ಪ್ರವೇಶಿಸುವಿಯಾದರೆ, ತಿಳು ಕೊಳ್ಳುವಿ. ಆತನಿಂದ ಕೆಟ್ಟ ಸ್ಥಳಕ್ಕೆ ಶೇರುವದಕ್ಕೆ ಕೂಡದು. ಆತನಿಂದ ಪ್ರವೇಶಿಸುವಿಯಾದರೆ, ಜೀವದಲ್ಲಿಯೂ ದೇವರ ರಾಜ್ಯದಲ್ಲಿಯೂ ದೇವರ ದಯೆಯ ಅನುಭವದಲ್ಲಿಯೂ ನೀನು ಹುಟ್ಟಿದ ದೇವರನ್ನುವ ಮೂಲ ಆದಿಯಲ್ಲಿಯೂ ಬೇರೆ ಬೇರೆ ವಿಶ್ರಾಂತಿಯಲ್ಲಿಯೂ ಬೇರೆ ಬೇರೆ ಕ್ಷೇತ್ರದಲ್ಲಿಯೂ ದೇವಾಲಯದಲ್ಲಿಯೂ ಮರ್ಮದಲ್ಲಿಯೂ ಬೇರೆ ಬೇರೆ ಮುಕ್ತಿಯಲ್ಲಿಯೂ ಬೇರೆ ಬೇರೆ ವಿಸ್ತಾರ ಜಾಗೆಯಲ್ಲಿಯೂ ಹೊಕ್ಕು, ಹೊಸ ಒಡಂಬಡಿಕೆಯ ಸಭೆಯಲ್ಲಿಯೂ ದೇವರ ಪಟ್ಟಣದಲ್ಲಿಯೂ ಪರಲೋಕದ ಯೆರೂಸಲೇಮಿನಲ್ಲಿಯೂ, ದೇವರು ಕುರಿಮರಿಯು ಇವರ ದೇವಾಲಯದಲ್ಲಿಯೂ ನಿಜ ಕಾನಾನದಲ್ಲಿಯೂ ತೆರದ ಪರದೈಸದಲ್ಲಿಯೂ ಬಹಳ ಸಾವಿರ ದೂತರ ಸಮೂಹದಲ್ಲಿಯೂ ಚೊಚ್ಚಿಲ ಮಕ್ಕಳ ಕೂಟದಲ್ಲಿಯೂ ಪೂರ್ಣ ನೀತಿಯುಳ್ಳ ಆತ್ಮಗಳ ಸಂಸರ್ಗದಲ್ಲಿಯೂ ಶೇರು!

ಐಯ್ಯೊ ಪ್ರಿಯ ಆತ್ಮಗಳೇ ಪರಲೋಕ ಮುಚ್ಚಲ್ಪಟ್ಟಿತೆಂದು ಒಂದು ಸಾರಿಯಾದರೂ ಕಂಗಾಲಾದವರು ಎಲ್ಲಿ? ತಾನು ಮುಕ್ತಿ ಪಡಿಯುವೆನೇನೋ ಎಂದು ಒಮ್ಮೆಯಾದರೂ ಪೂರ್ಣ ಹೃದಯದಲ್ಲಿ ಭಯಗೊಂಡವರು ಎಲ್ಲಿ? ಈ ಇಕ್ಕಟ್ಟಿನ ಬಾಗಲಿನೊಳಗೆ ಹೋಗುವದು ಬಹಳ ಪ್ರಯಾಸವೆಂತಾ ನೋಡಿ, ದಯೆಯ ವಾಕ್ಯವು ನನಗಾಗಿ ಹೇಳಿದ್ದು ಉಂಟೋ ಏನೋ ಎಂದು ಯಾರು ಹೇಳುವನು? ನನಗೆ ಇನ್ನೂ ಸಮಯ ಉಂಟೋ ಏನೋ? ಆ ಐವರು ಬುದ್ಧಿಯಿಲ್ಲದ ಕನ್ನಿಕೆಯರಿಗೆ ಆದ ಹಾಗೆಯೇ ಬಾಗಲು ನನ್ನ ಮುಖದ ಮುಂದೆ ಮುಚ್ಚಲ್ಪಡುವದೇನೋ? ಎಂದು ತನ್ನಲ್ಲಿ ಹೇಳಿ ಕೊಂಡವನೆಲ್ಲಿ? ಈ ಪ್ರಕಾರ ಮನಸ್ಸಿನಲ್ಲಿ ವ್ಯಥೆ ಪಟ್ಟು, ಪರಲೋಕದ ಬಾಗಲನ್ನು ಪೂರ್ಣ ಎಚ್ಚರಿಕೆಯಿಂದ ಹುಡುಕಿದವನು ಎಲ್ಲಿ? ಯೇಸುವಿನಲ್ಲಿ ಪೂರ್ಣ ಹೃದಯದಿಂದ ಸಂತೋಷಿಸಿದವನೆಲ್ಲಿ? ವಿಶ್ವಾಸದ ವಿಧೇಯತ್ವದಿಂದ ಹೋಗಿ, ಯೇಸುವನ್ನು ಕೂಡಿ ಕೊಂಡವನು ಎಲ್ಲಿ? ಬಹಳ ಪ್ರಯಾಸವಾದರೂ ಚಿಂತೆ ಇಲ್ಲವೆಂದು, ಪ್ರಯತ್ನ ಮಾಡಿದವನು ಎಲ್ಲಿ? ಈ ಇಕ್ಕಟ್ಟಿನ ಬಾಗಲು ದೇಹವನ್ನು ಔಕುವದರಿಂದ ಹಿಂದಣ ಗರ್ವವನ್ನೂ ಅಮಸಾಣಿಯನ್ನೂ ವಸ್ತ್ರಾಭರಣದ

ಡಂಭವನ್ನೂ ಚಿಂತೆಗಳೂ ವಿಷಯಗಳೂ ಬಹಳವಾಗಿ ತುಂಬಿದ ಕಡುಕಗಳನ್ನೂ ಬಿಸಾಡಿದವರೂ ವ್ಯರ್ಥ ಆಟಗಳನ್ನೂ ಭೋಗಗಳನ್ನೂ ವಿಸರ್ಜಿಸಿದವರೂ ಎಲ್ಲಿ? ಹೊರಟು, ದಾಟಿ, ಹೊಕ್ಕು, ಹೊಸ ಜೀವವನ್ನು ಪಡದು, ಪೂರ್ಣವಾಗಿ ಹೊಸ ಲೋಕಕ್ಕೆ ಬರುವದು ಏನೆಂದು ಅನುಭವದಿಂದ ತಿಳು ಕೊಂಡವರು ಎಷ್ಟು ಮಂದಿ? ಎಷ್ಟೋ ಕಡಿಮೆ ಜನರು ಅಮಸಾಣಿಯನ್ನೂ ಪ್ರಪಂಚ ಪ್ರೀತಿಯನ್ನೂ ದುರಾಶೆಯನ್ನೂ ಒತ್ತುತ್ತಾರೆ? ಹುಳಿಯಾಗಿ ಕಾಣುವದನ್ನೂ ಆಯಾಸವಾದದ್ದನ್ನೂ ಇವೆಲ್ಲಾನ್ನೂ ಬೇಗ ಬಿಟ್ಟು ಬಿಡುವ ಪದ್ಧತಿ ಇರುತ್ತದಲ್ಲವೋ? ಯೇಸುವಿನ ವಾಕ್ಯದ ಪ್ರಕಾರ ಇಕ್ಕಟ್ಟಿನ ಬಾಗಲೊಳಗೆ ಪ್ರವೇಶಿಸುವದಕ್ಕೆ ಚನ್ನಾಗಿ ಹೋರಾಡುವವರೆಷ್ಟು ಮಂದಿ?

ಆದ್ದರಿಂದ ಕರ್ತನು ಹೇಳಿದ ಈ ವಾಕ್ಯವು ನಮ್ಮನ್ನು ಎಚ್ಚರ ಮಾಡಲಿ! ನಮಗೆ ರಕ್ಷಣೆಯಾಗುವ ಹಾಗೆ ಆತನು ಹೇಳಿದ ಈ ವಾಕ್ಯವನ್ನು ನಮ್ಮ ಮನಸ್ಸಿನಲ್ಲಿ ತಕ್ಕೊಂಡು, ಅದರಿಂದ ರಕ್ಷಣೆಯನ್ನೂ ಮುಕ್ತಿಯನ್ನೂ ಪಡ ಕೊಳ್ಳುವದಕ್ಕೆ ದೇವರು ದಯ ಮಾಡಲಿ! ಎಲೇ ಪ್ರಿಯ ಜೀವಾತ್ಮರುಗಳೇ, ಒಂದು ವೇಳ್ಯ ನೀವು ಸಾದು ಸಜ್ಜನರಾಗಿ, ಪ್ರಪಂಚದ ಮಿತಿ ಮಿೂರುವ ಕೆಟ್ಟ ನಡತೆಗೆ ಓಡದವರಾಗುತ್ತೀರಿ. ಕರ್ತನಾದ ಯೇಸುವಿನ ಹಿಂದೆ ಛಲ ಹಿಡಿದು ಹೋಗುವದಿಲ್ಲ. ಆತನನ್ನು ಮೆಚ್ಚಿ ಕಿವಿ ಕೊಡುತ್ತೀರಿ; ಬೇರೆ ಬೇರೆ ಕಾರ್ಯಾದಿಗಳಲ್ಲಿ ಆತನ ವಾಕ್ಯವನ್ನು ಕೇಳುತ್ತೀರಿ. ಆತನ ನಾಮವನ್ನು ಅರಿಕೆ ಮಾಡುತ್ತೀರಿ. ಸಭೆ ಕೂಡಿದರೆ ಸಂತೋಷದಿಂದ ಬರುತ್ತೀರಿ. ರಾತ್ರಿ ಭೋಜನವಾದರೆ, ಭಕ್ತಿಭಾವದಿಂದ ಅದನ್ನು ಆಚರಿಸುತ್ತೀರಿ. ನಿಮಗೆ ಒಳ್ಳೇ ಗುಣಗಳು ಉಂಟು. ದೇವರ ರಾಜ್ಯಕ್ಕೆ ಇನ್ನು ಬಹಳ ದೂರವಾಗಿರುವವರಲ್ಲ. ಯೇಸು ನಿಮ್ಮನ್ನು ಪ್ರೀತಿ ಮಾಡುತ್ತಾನೆ. ಆತನು ಶಬ್ದವನ್ನೆತ್ತಿ ದೂತರು ಲೋತನಿಗೆ ಮಾಡಿದ ಹಾಗೆಯೇ ನಿಮ್ಮನ್ನು ಬಾಗಲೊಳಗಿಂದ ಪೂರ್ಣವಾಗಿ ಎಳ ಕೊಳ್ಳುವದಕ್ಕೆ ಕೈ ನೀಡುತ್ತಾನೆ. ಆದರೆ ನೋಡಿ ಕೊಳ್ಳಿರಿ! ಈ ಆರಂಭ ಸಾಕೆಂದು ನೆನಸಿ ಕೊಳ್ಳದೆ, ಯಾವದರಲ್ಲಾದರೂ ವಿಶ್ರಮಿಸಿ ಕೊಳ್ಳದೆ, ಯೇಸು ಕ್ರಿಸ್ತನ ಹತ್ರ ಹೋಗಿ ಅವನಿಂದ ಪ್ರವೇಶಿಸಿ ಪೂರ್ಣ ಮಾನಸಾಂತರದಿಂದ ಎಥಾ ಸ್ಥಿತಿಯಾಗಿ ಎಲ್ಲಾ ಪಾಪಗಳನ್ನು ಅಲ್ಲಗಳದು ಆತನ ಅಂತರ್ಯವಾದ ಸ್ನೇಹದಲ್ಲಿಯೂ ಪೂರ್ಣ ಮಮತೆಯಲ್ಲಿಯೂ ಶೇರಿರಿ. ನಿಮ್ಮ ಸಕಲ ಕ್ರಿಯೆಗಳೂ ಪ್ರಾರ್ಥನೆಗಳೂ ಆತನ ಮುಖಾಂತ್ರವಾಗಿ ತಂದೆಯ ಸನ್ನಿಧಿಯಲ್ಲಿ ಶೇರಲಿ!

ಒಬ್ಬನು ಬಾಗಲ ಹತ್ತರ ಸಹ ಬಂದ ಮೇಲೆ ಗಡಿ ದಾಟಸಲ್ಪಡುವದುಂಟು! ಐಯೊ ಹೊರಗೆ ನಿಲ್ಲುವದು ಏನು? ಕೃಪೆಯ ದ್ವಾರವು ತೆರದಿರುವ ಪರಿಯಂತ, ಹಗಲು ಇರುವನಕ, ಕತ್ತಲೆಯಲ್ಲಿ ಬಾಗಲು ಮುಚ್ಚುವ ಮೊದಲು ಪೂರ್ಣವಾಗಿ ಪ್ರವೇಶ ಮಾಡಿರಿ! ಆಮೆನ್.

೭ನೇ ಕೀರ್ತನೆ.

Jesus shall reign where'er the sun.

೧. ಕ್ರಿಸ್ತೇಸುರಾಜನಾಳುವ ಚಂದ್ರಾರ್ಕರಿರ್ವ ತನಕ
ಸಮುದ್ರದಿಂ ಸಮುದ್ರಕೂ, ಈ ರಾಜ್ಯಕ್ಕಂತ್ಯವಿರದು.

೨. ಸುಮಂಗಳಾಶೀರ್ವಾದವು ಈ ಧನಿಗಾಗಿ ಏಳ್ವದು,
ಈ ಬಾಲ ತುಟಿ ಸಹಿತ ಹಾಡೋದು ಘನ ಸ್ತೋತ್ರವ.

೩. ಭೂಲೋಕ ಕುಲದವರು ಆತಂಗೆ ಸೇವಿಸೋಣವು,
ಭೂರಾಜಸಂಘವೆಲ್ಲವು ಹೇಮಾದಿ ದಾನ ತರೊದು.

೪. ಗುಲಾಮ ಬಂಧ ಹರಿದು ದರಿದ್ರರಿಂಗೆ ತೃಪ್ತಿಯು,
ಸಂಕಷ್ಟರಿಂಗೆ ಮೋಕ್ಷವು ಕಟಾಕ್ಷದಿಂದಲೀವನು.

೫. ಭೂಸ್ವರ್ಗ ಲೋಕದೊಳಗೆ ಕ್ರಿಸ್ತೇಸು ಘನ ನಾಮಕೆ
ಕೊಂಡಾಟ, ಸ್ತೋತ್ರ ಮಾನವೂ ಇಂಪಾಗಿ ಏಳಲೆಂದಿಗೂ! *A. G.*

ಕೂಟದ ಗೀತ.

Es kann ja nicht immer.

೧. ಈ ಮಾರ್ಪಡೊ ಚಂದ್ರನಡೀಲಿ
ಯಾವಾಗಲು ಒಂದಿರದು;
ಪ್ರವರ್ಧಿಸೊದೆಲ್ಲ ಭೂಮಿಲಿ
ಹೂ ಬಿಡಲೆ ಬಾಡುವದು.

೨. ಅನೇಕರು ಆನಂದವನ್ನು
ಮುಂಬದುಕಿ ಪಟ್ಟರೆಲ!
ಸಮಾಧಿಯಲಿರೊವರನ್ನು
ನಾವೊಲಿದು ನೆನೆಯುವ!

೩. ಅನೇಕರು ಆನಂದವನ್ನು
ಹಿಂಬದುಕಿ ಪಡುವರು;
ಸಮಾಧಿಯಲಿರೊ ನಮನ್ನು
ಆಗೊಲಿದು ನೆನೆಯೊರು.

೪. ಸಂತೋಷದಿ ಕೂಡಿರುತೇವೆ;
ಸಹೋದ್ರರ ಪ್ರೀತಿಯಲಿ
ನಮನ್ನು ಸಂತೈಸುತಿದ್ದೇವೆ:
ಹೀಗೆಂದಿಗು ನಡೆಯಲಿ!

೫. ಹೀಗೆಂದಿಗು ಇರ್ದದರಿಂದ
ಸಂತೋಷಕೆ ಅಂಟುವಣ!
ಎಂದಾದರು ಇತ್ತಲಿನಿಂದ
ದಿಗ್ದಿಕ್ಕಿಗೆ ಚದರೆವಾ?

೬. ವಿಯೋಗದಿ ಹೃತುಗಳನ್ನು
ಅನ್ಯೋನ್ಯವು ತ್ಯಜಿಸದು;
ನಮೊಬ್ಬನಿಗಾಗುವದನ್ನು
ನಾವೆಲ್ಲರು ಪಡುವೆವು.

೭. ಹೀಗಿರಲು ಆಶ್ಚರ್ಯದಿಂದ
ನಾಂ ತಿರಿಗಿ ಕೂಡುವಣ,
ಸಂತೋಷದ ತೀರಿಕೆಯಿಂದ
ಸಂತೋಷದಿ ತೊಡಗುವ! *M.*

Printed by Plebst & Stolz, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. **AUGUST 1868.** ಅಂಕೆ ೨.

ಚಂದಾದಾರರಿಗೆ.

ನಮಗೆ ಸಭಾಪತ್ರದ ವಿಷಯದಲ್ಲಿ ಬೇರೆ ಬೇರೆ ಅಪೇಕ್ಷೆಗಳು ತಿಳಿಸಲಾದವು. ಮೊದಲು ಅದರ ಕ್ರಯವು ಬಹಳವೆಂದು ಕೆಲವರು ನೆನಸುತ್ತಾರೆ. ಇದಕ್ಕೆ ಹೇಳುವದೇನಂದರೆ—ಒಂದು ರೂಪಾಯಿ ಕ್ರಯ ಮಾಡಿದ್ದರೂ ಲಾಭ ಇಲ್ಲದೆ ಲುಕ್ಸಾನು ಉಂಟು. ಇದರಲ್ಲಿ ಲಾಭ ಮಾಡಲಿಕ್ಕೆ ಏನೂ ಮನಸ್ಸಿಲ್ಲದಿದ್ದರೂ ಸಭೆಯವರು ತಮ್ಮ ಪ್ರಯೋಜನಕ್ಕಾಗಿ ಮಾತ್ರವೇ ಛಾಪಿಸುವ ಈ ಪತ್ರದ ಕ್ರಯ ಸಂತೋಷದಿಂದ ಕೊಡುವರೆಂತ ಭರವಸ ಉಂಟು. ಅದನ್ನು ಕೊಂಡುಕೊಳ್ಳುವದು ಒಬ್ಬನಿಗೆ ಕಷ್ಟವಾದರೆ, ಇಬ್ಬರು ಮೂವರು ಕೂಡಿದರೆ, ಸುಲಭವಾದೀತು. ಮತ್ತು ಚಂದಾದಾರರ ಲೆಖ್ಖ ಹೆಚ್ಚಿದರೆ, ಅದರ ಕ್ರಯ ಕಡಿಮೆ ಮಾಡಲಿಕ್ಕೆ ಸಿದ್ಧರಾಗಿದ್ಧೇವೆ.

ಇದಲ್ಲದೆ ಪತ್ರದ ಮುಖ್ಯ ಉದ್ದೇಶವನ್ನು ಎಲ್ಲರು ತಿಳಕೊಳ್ಳಲಿಲ್ಲವೆಂತಾ ನೆನಸಲಿಕ್ಕೆ ಕಾರಣವಾಯಿತು. ಉದ್ದವಾದ ಪ್ರಸಂಗಗಳು ಕೆಲವರಿಗೆ ಬೇಡವಂತೆ. ಇದರ ಬದಲಾಗಿ ಕಥೆ ಗೀತ ಸಮಾಚಾರಗಳನ್ನು ಅಪೇಕ್ಷಿಸುತ್ತಾರೆ. ನಮ್ಮ ಆಲೋಚನೆ ಯಾವದಂದರೆ—ಇದನ್ನು ಮಾಡಿ, ಅದನ್ನು ಬಿಡದೆ ಇರ ಬೇಕು. ದೇವರ ವಾಕ್ಯದ ತಿಳುವಿಕೆ ವಿಶೇಷವಾದದ್ದು. ದೇವಾಲಯದಲ್ಲಿ ಕೇಳಿದ ಪ್ರಸಂಗವು ಒಂದು ವೇಳೆ ನೆನಪಿಗೆ ಹತ್ತದೆ, ಅದರ ತಾತ್ಪರ್ಯವು ಪೂರ್ಣವಾಗಿ ಬಾರದೆ ಇದ್ದಲ್ಲಿ ಛಾಪಿಸಿದ ಪ್ರಸಂಗವನ್ನು ಬೇಕಾದಷ್ಟು ಸರ್ತಿ ಓದಿ, ಧ್ಯಾನಿಸ ಬಹುದಲ್ಲ? ಆದರೂ ಓದುವವರಿಗೆ ಬೇಸರಾಗದ ಹಾಗೆ, ನಾವು ಒಂದು ಅಂಕೆಯಲ್ಲಿ ಒಂದು ಪ್ರಸಂಗವನ್ನೂ ಮತ್ತೊಂದರಲ್ಲಿ ವರ್ತಮಾನ ಮುಂತಾದದ್ದನ್ನೂ ಕೊಡಲಿಕ್ಕೆ ಇದ್ಧೇವೆ. ಆದರೆ ಎಲ್ಲಾದರ ಉದ್ದೇಶವು ಒಂದೇ, ಓದುವವನಿಗೆ ತನ್ನ ಆತ್ಮೀಯ ಜೀವದಲ್ಲಿ ಸಹಾಯವಾಗ ಬೇಕೆಂಬದು.

ಕಡೆಗೆ ಒಂದು ದುಃಖದ ಮಾತು ಹೇಳಲಿಕ್ಕೆ ಉಂಟು. ಅನೇಕರು ಕರ್ತನ ದಿನವಾದ ಆದಿತ್ಯವಾರವನ್ನು ತಕ್ಕ ಪ್ರಕಾರ ಪ್ರಯೋಗಿಸುವವರಲ್ಲ. ತಮ್ಮ ಆತ್ಮೀಯ ವೃದ್ಧಿಗೆ ನೇಮಿಸಿದ ಈ ಕಾಲವನ್ನು ವ್ಯರ್ಥವಾಗಿ ಕಳೆದು ಹೋಗುತ್ತಾರೆ. ಇವರು ಈ ದಿನದಲ್ಲಿ ಸುಮ್ಮನೆ ತಿರು

ಗಾಡಿ, ಅದನ್ನು ನಿಷ್ಪ್ರಯೋಜನವಾದ ಸಂಭಾಷಣೆಗಳಿಂದ ಅಪವಿತ್ರ ಮಾಡದೆ, ಅಂಥಾ ಉದ್ದವಾದ ಪ್ರಸಂಗವನ್ನು ಓದಿ ಗ್ರಹಿಸಿ, ಮನಸ್ಸಿಗೆ ತಂದರೆ, ಎಷ್ಟು ಒಳ್ಳೇದಾದೀತು. ಕ್ರೈಸ್ತರ ಆದಿತ್ಯವಾರ ಹ್ಯಾಗೋ, ಹಾಗೆಯೇ ಅವರ ಆತ್ಮೀಯ ಜೀವವಾಗಿದೆ ಎಂಬ ಮಾತು ಖರೆ. ಆದಿತ್ಯವಾರದಿಂದ ಹಪ್ತೆಯ ಉಳಿದ ದಿನಗಳಿಗೆ ಒಳ್ಳೇದಾಗಲಿ ಕೇಡಾಗಲಿ ಬರುವದು ನಿಶ್ಚಯ. ನಮ್ಮ ಸಭಾಪತ್ರ ಇದರಲ್ಲಿ ಸಹಾ ಅನೇಕರಿಗೆ ಆಶೀರ್ವಾದದ ಕಾರಣವಾಗ ಬೇಕೆಂದು ಕೋರುತ್ತೇವೆ.

ಹೇಬಿಕ್ ಧೊರೆ ತೀರಿ ಹೋದ ವರ್ತಮಾನವು ಸುಮಾರು ಎಲ್ಲರಿಗೆ ತಿಳಿದಿರ ಬಹುದು. ಅವರ ಕಡೇ ದಿನಗಳ ವಿಷಯವಾದ ವೃತ್ತಾಂತ ವೊನ್ನೆ ಬಂದದರಿಂದ ಅದನ್ನು ಕನ್ನಡಿಸಿ, ಸಭಾಪತ್ರದ ಮುಂದಿನ ಅಂಕೆಗಳಲ್ಲಿ ಪ್ರಸಿದ್ಧಿ ಮಾಡಲಿಕ್ಕೆ ಮನಸ್ಸಾಗಿದ್ದೇವೆ.

ಮಕ್ಕಳ ಗೀತವು.

Mel: Ohne Sang und ohne Klang.

೧. ಮಕ್ಕಳೆಲ್ಲ ಹರ್ಷದಿ
ಒಳ್ಳೆ ಗೀತ ಹಾಡಿ!
ದೇವರೊಲ್ಮೆ ಧ್ಯಾನಿಸಿ
ಮಾನಸ್ತೋತ್ರ ಮಾಡಿ!
ಇಂಥ ಗಾನ ಸುಖವು
ಜೀವವ್ಯಥೆಯಲ್ಲಿ
ಇಂಥ ಹರ್ಷ ತೀರದು
ಪರಮೋಕ್ಷದಲ್ಲಿ.

೨. ಕಾರಗತ್ತಲೊಡನೆ
ಶೋಕ ಬರುವಾಗ
ಹಾಡಿ ಕೊಂಬ ಶೀಘ್ರವೆ
ಗೆಲು ಒಳ್ಳೆ ರಾಗ;
ಪುಷ್ಪವರಳುತ್ತದೆ
ಪೊಳುಮಂಜಿನಿಂದ,
ಪ್ರಾಣ ಗುಣವಾಗುತೆ
ಹರ್ಷಗೀತದಿಂದ.

೩. ಮಧುಸ್ವರ ಕೋಗಿಲೆ
ವನವೃಕ್ಷದಲ್ಲಿ
ಪಕ್ಷಿರಾಶಿ ಬಿಡದೆ
ಬಾಣೆ ಊರ್ಗಳಲ್ಲಿ
ಹಾಡುತ್ತಿಪ್ಪ ಹಾಗೆಯೇ
ದೇವಸ್ತೋತ್ರಕಾಗಿ,
ನೀವು ಕೂಡ ಮಕ್ಕಳೇ,
ಹಾಡಿ ಸುಖವಾಗಿ!

A. G.

ಕ್ರೈಸ್ತರ ಮರಣಗೀತ.

Mel: Aller Gläub'gen Sammelplatz.

೧. ಯೇಸು ಕ್ರಿಸ್ತ ನಮಗೆ
ಕೊಟ್ಟ ಸ್ವರ್ಗದಲ್ಲಿಯೆ
ನಮ್ಮ ಪಟ್ಟವಾಸವು
ನಮ್ಮ ಹೃದದಾಶೆಯು.

೨. ಇಲ್ಲಿ ಅಲ್ಲಿ ಒಬ್ಬನು
ನಿತ್ಯ ಮನೆಗೋಡೊದು;
ಆಗ ಮಿತ್ರನೆಂಟರು
ದುಃಖಗೊಂಡು ಅಳೊದು.

೩. ಆದರೆಮ್ಮ ದೇವರು
ತಪ್ಪು ಮಾಡ ಕೂಡದು;
ಅದಕ್ಕೆಮ್ಮ ಹೃದವು
ಶಾಂತವಾಗ ತಕ್ಕದು.

೪. ಅತಿಪ್ರಿಯವಾದದು
ಒಂದು ಹೃತ್ತು ಸತ್ತರು
ಸ್ವಂತ ಜೀವ ಹೋದರು
ಯೇಸು ಪ್ರೀತಿ ಬಿಡದು.

೫. ನಿನ್ನ ನಿದ್ರೆಯೆಡೆಯ
ನೋಡಿ ಧೈರ್ಯಗೊಂಬುವ!
ಸ್ವರ್ಗದೊಳಗೆಂದಿಗು
ಮಿತ್ರರೈಕ್ಯವಹುದು.

A. G.

ಅಫ್ರಿಕದ ಭಂಗಾರತೀರವು.

ನಾವು ಒಂದೊಂದು ಸಮಯದಲ್ಲಿ ಆಫ್ರಿಕ ಖಂಡದಲ್ಲಿಯೂ ಚೀನ ಮಹಾರಾಷ್ಟ್ರದಲ್ಲಿಯೂ ನಡಿಯುವ ಸುವಾರ್ತಾಕಾರ್ಯವನ್ನು ಕುರಿತು ಈ ಪತ್ರಿಕೆಯಲ್ಲಿ ವರ್ತಮಾನ ಕೊಡಲಿಕ್ಕೆ ಮನಸ್ಸಾಗಿರುವದರಿಂದ ಪ್ರಥಮತಾ ಅದರ ಹಿಂದಿನ ಚರಿತ್ರೆಯನ್ನು ಸ್ವಲ್ಪ ವಿವರಿಸುವದು ಯುಕ್ತವೆಂದು ನೆನಸುತ್ತೇವೆ. ಇದರಲ್ಲಿ ನಮ್ಮ ಬಾಸೆಲ್ ಮಿಶ್ಯನ್ ಸಂಘವು ಭಂಗಾರತೀರವೆಂಬ ಪಶ್ಚಿಮ ಅಫ್ರಿಕದ ಒಂದು ಭಾಗದಲ್ಲಿ ನಡಿಸುವ ಕಾರ್ಯದ ವಿಶೇಷವಾದ ಸಂಗತಿಗಳು ಸಂಗ್ರಹಿಸಿ ಅವೆ.

೧. ದೇಶವೂ ಅದರ ನಿವಾಸಿಗಳೂ.

ಭಂಗಾರತೀರವು ಮೇಲೆ ಹೇಳಿದ ಪ್ರಕಾರ ಅಫ್ರಿಕದ ಪಶ್ಚಿಮ ಪಾರ್ಶ್ವದಲ್ಲಿ ಅದೆ. ಅಲ್ಲಿ ನೀಗರುಗಳೆಂಬ ಬರೇ ಕಪ್ಪು ಜನರು ಇದ್ದಾರೆ. ೧೫ನೇ ಶತಮಾನದಲ್ಲಿ ವಿಲಾಯತಿಯಿಂದ ಪೊರ್ತುಗೀಸರು ಮೊದಲು ಅಲ್ಲಿಗೆ ಬಂದರು. ಆದರೂ ಅವರು ಬಹು ಕ್ರೂರತನ ನಡಿಸಿದ್ದರಿಂದ, ಬಂದವರೆಲ್ಲರು ಒಂದು ಕಾಟಕಾಯಿಯಲ್ಲಿ ನಾಶವಾದರು. ಇವರ ಮೇಲೆ ಹೊಲಾಂದಿನವರೂ ದೇನಿಷರೂ ಬ್ರಿತಿಷರೂ ಬಂದು, ವ್ಯಾಪಾರ ನಡಿಸಿ, ತೀರದಲ್ಲಿ ಕೋಟೆಗಳನ್ನು ಕಟ್ಟಿಸಿದರು. ೧೮೫೦ ನೇ ಇಸವಿಯಲ್ಲಿ ದೇನಿಷರು ತಮ್ಮ ಆಸ್ತಿಯೆಲ್ಲ ಬ್ರಿತಿಷರಿಗೆ ಮಾರಿ ಬಿಟ್ಟು, ಹೋದರು. ಅಂದಿನಿಂದ ಇವರಿಗೆ ರಾಜ್ಯಾಧಿಕಾರ ಉಂಟಾಗಿದೆ. ಆದರೆ ಸರಕಾರದ ಕಾರ್ಯ ಸ್ವತಹಾ ಅವರೇ ನಡಿಸುವದಿಲ್ಲವಾದರೂ ಆಯಾ ಶೀಮೆಗಳ ರಾಜರ ಮೇಲೆ ಶ್ರೇಷ್ಠಾಧಿಕಾರವುಳ್ಳವರಾಗಿದ್ದಾರೆ.

ಭಂಗಾರತೀರದ ಸ್ವರೂಪಕ್ಕೂ ಈ ನಮ್ಮ ಪಶ್ಚಿಮ ತೀರಕ್ಕೂ ಅಷ್ಟು ಹೆಚ್ಚು ಕಡಿಮೆ ಇಲ್ಲ. ಅಲ್ಲಿ ಸಹಾ ಇಲ್ಲಿ ಇರುವಂತೆಯೇ ಬೇಸಿಗೆಕಾಲವೂ ಮಳೆಗಾಲವೂ ಉಂಟು; ಅಲ್ಲಿ ಬೆಳಿಯುವ ವೃಕ್ಷಾದಿಗಳು ಸುಮಾರು ಇಲ್ಲಿಯಂಥವುಗಳೇ; ಅಕ್ಕಿ ಮಾತ್ರ ಅಲ್ಲಿ ಅಷ್ಟು ವ್ಯವಸಾಯ ಮಾಡುವದಿಲ್ಲ. ಈ ಊರಲ್ಲಿ ಅನ್ನವು ಹ್ಯಾಗೆ ಆಹಾರದ ಮುಖ್ಯ ಪದಾರ್ಥವಾಗಿದೆಯೋ, ತದೋಪಾದಿ ಆ ಊರಲ್ಲಿ ಒಂದು ತರದ ಗೆಣಸೂ ಮೆಣಸಿನ ನೀರೂ ಮುಖ್ಯವಾದ ಆಹಾರವಾಗಿವೆ.

ಇದಲ್ಲದೆ ಅಲ್ಲಿಯವರು, ತಾವು ಹೆಚ್ಚಾಗಿ ಬೆಳಿಸುವ ಒಂದು ತರದ ಜೋಳದ ಕಡುಬು ಮಾಡಿ ತಿನ್ನುತ್ತಾರೆ.

ಭೂಮಿಯು ಸುಲಭವಾಗಿ ತನ್ನ ಬೆಳೆಯನ್ನು ಇಕ್ಕುವ ಕಾರಣ, ಅಲ್ಲಿಯ ಜನರು ಹೆಚ್ಚು ಕಷ್ಟ ಕೃಷಿ ಮಾಡದೆ ಮೈಗಳ್ಳರಾಗಿದ್ದಾರೆ. ಹೊಟ್ಟೆ ತುಂಬಿದರೆ ಸಾಕು ಎಂಬದೇ ಅವರ ಅಭಿಲಾಷೆಯಾಗಿರುವದರಿಂದ ಮುಂದಿನ ಕಾಲಕ್ಷೇಪಕ್ಕಾಗಿ ಚಿಂತೆ ಪಡುವದೂ ಅದಕ್ಕಾಗಿ ಕೆಲಸ ಮಾಡುವದೂ ಅವರಿಗೆ ಅವಶ್ಯವೆಂದು ತೋರುವದಿಲ್ಲ. ಅವರು ಮುಖ್ಯವಾಗಿ ತಮ್ಮ ದೇಶದಲ್ಲಿ ಉಂಟಾಗುವ ಅರಳೆ, ಎಣ್ಣೆ ಮತ್ತು ಅಲ್ಲಿ ಶಿಕ್ಕುವ ಭಂಗಾರದ ಪುಡಿ, ಇವುಗಳಲ್ಲಿ ವ್ಯಾಪಾರ ಮಾಡುತ್ತಾರೆ. ಅವರು ಮಲಕ್ಕ ಲಕ್ಷ ದ್ವೀಪಗಳಿಂದ ಬರುವಂಥ ಕೌರಿ ಎಂಬ ಕವಡೆಗಳನ್ನು ಹಣದ ಬದಲಾಗಿ ಪ್ರಯೋಗಿಸುತ್ತಾರೆ.

ಒಬ್ಬನು ಸ್ಥಿತಿವಂತನಾಗಿದ್ದರೆ, ಅವನ ಆಸ್ತಿಯು ೧೦, ೨೦ ಅಥವಾ ೫೦ ಗುಲಾಮರಾಗಿರುವರು. ಇವರನ್ನು ಅವನು ತನ್ನ ಮನಸ್ಸಿಗೆ ಬಂದ ಹಾಗೆ ಮಾರಿ ಬಿಡಲೂ, ಅವರಿಂದ ಯಾವ ಕೆಲಸವನ್ನಾದರೂ ಮಾಡಿಸಲೂ ಬಹುದು. ಇಂಥಾ ದುರಾಚಾರವು ಅನೇಕ ಕೇಡುಗಳಿಗೆ ಮೂಲವಾಗಿದೆ ಎಂಬದು ಪ್ರತ್ಯಕ್ಷವು. ದೇಶದ ಬೇರೆ ಬೇರೆ ರಾಜರು ಒಮ್ಮಿಂದೊಮ್ಮೆ ತಮ್ಮೊಳಗೆ ಕಲಹವೆಬ್ಬಿಸಿ, ಸದಾ ಯುದ್ಧ ಮಾಡುವದರಿಂದ ಉಪದ್ರವೂ ಅಪಾಯವೂ ಇರಲೇ ಇರುವದು. ಹ್ಯಾಗೂ ಇಷ್ಟು ಸುಕ್ರಮದಲ್ಲಿ ನಡಿಯುವ ಈ ರಾಜ್ಯದ ಪರಿಪಾಲನೆಯಂತೆ ಆ ಸರಕಾರದಲ್ಲಿ ಒಂದಾದರೂ ಇರುವದಿಲ್ಲ.

ರಾಜ್ಯದ ಇತರ ಸ್ಥಿತಿಯನ್ನು ಕುರಿತು ಇಷ್ಟು ಹೇಳಿದ ಮೇಲೆ, ಈಗ ನಾವು ಆ ದೇಶದ ನಿವಾಸಿಗಳಾದ ನೀಗರುಗಳ ಮತವನ್ನು ಸಹಾ ಸ್ವಲ್ಪ ನೋಡ ಬೇಕು. ಇದರಲ್ಲಿ ಹಿಂದು ಜನರಿಗೂ ಇವರಿಗೂ ವಿಪರೀತವಾದ ಭೇದವುಂಟು. ಹಿಂದು ಜನರು ಲಕ್ಷಾಂತರ ದೇವತೆಗಳನ್ನೂ ಅವುಗಳನ್ನು ಕುರಿತು ಲೆಖ್ಖವಿಲ್ಲದ ಶಾಸ್ತ್ರ ಪುರಾಣಗಳನ್ನೂ ಕಲ್ಪಿಸಿದ್ಧಾರೆ. ಆದರೆ ನೀಗರುಗಳಿಗೆ ಅಂಥಾದ್ದೇನಾದರೂ ಇಲ್ಲದಿದ್ದರೂ, ದೇವರ ವಿಷಯದಲ್ಲಿ ಕೆಲವು ಕಥೆಗಳು ಮಾತ್ರ ತಿಳದು ಕೊಂಡಿದ್ಧಾರೆ. ಅವರು ಬರಹವರಿಯದ ಜನರಾದ ಕಾರಣ, ಆ ಕಥೆಗಳನ್ನು ಬಾಯಿಮಾತಿನಿಂದಲೇ ಹಿರಿಯರಿಂದ ಪಾರಂಪರ್ಯವಾಗಿ ಕಲಿತು ಕೊಂಡು ಬಂದರು. ಅವುಗಳ ಸಾರಾಂಶವು ಸುಮಾರು ಇದೇ:—

ಆದಿಯಲ್ಲಿ ದೇವರು ಲೋಕದ ನಿರ್ಮಾಣವನ್ನು ಆದಿತ್ಯವಾರದಲ್ಲಿ ಪ್ರಾರಂಭ ಮಾಡಿ, ಶುಕ್ರವಾರದಲ್ಲಿ ತೀರಿಸಿದನು. ಶನಿವಾರ ಆತನು ಏನೂ ಸೃಷ್ಟಿಸದೆ ಮನುಷ್ಯರಿಗೆ ಕಟ್ಟಳೆಗಳನ್ನು ಕೊಟ್ಟನು. ದೇವರು ಎಲ್ಲಾದರ ಮುಂಚೆ ಮನುಷ್ಯರನ್ನು, ಅವರಲ್ಲಿ ಸ್ತ್ರೀಯನ್ನು ಮೊದಲು ಉಂಟು ಮಾಡಿ, ಮೃಗ ವೃಕ್ಷಾದಿಗಳನ್ನೂ ಜೀವವಿಲ್ಲದ ಇತರ ವಸ್ತುಗಳನ್ನೂ ಸೃಷ್ಟಿಸಿದನಂತರ ಮಾತ್ರ, ಅವರನ್ನು ಭೂಮಿೂ ಮೇಲೆ ತಂದಿರಿಸಿದನು. ಲೋಕಸೃಷ್ಟಿ ಎಲ್ಲಾ ತೀರಿದ ಬಳಿಕ ದೇವರು ಭೂತಗಳನ್ನು ತನ್ನ ಯಾಜಕರಾಗಿಯೂ ಸಹಾಯಾಧಿಪತಿಗಳಾಗಿಯೂ ನೇಮಿಸಿ, ಅವರಿಗೆ ಮನುಷ್ಯರ ಜೀವದ ಮೇಲೂ ಅಧಿಕಾರ ಕೊಟ್ಟನು. ಒಬ್ಬನು ಪಾಪ ಮಾಡಿದರೆ, ಅವನನ್ನು ಅವುಗಳು ದೇವರ ಸ್ಥಳದಲ್ಲಿ ಕೊಂದು ಹಾಕುತ್ತವೆ; ಆದರೆ ಆ ಪಾಪಿಯು ಕೂ

ಡಲೇ ಕ್ಷಮೆ ಬೇಡಿ, ಬಲಿಯನ್ನರ್ಪಿಸಿದರೆ, ಅವುಗಳು ದೇವರ ಹತ್ತರ ಅವನಿಗಾಗಿ ಕ್ಷಮೆ ಕೇಳ ಬಹುದು.

ಬೇರೊಂದು ಕಥೆಯ ಪ್ರಕಾರ, ಇಬ್ಬರು ದೇವರುಗಳೂ ಇಬ್ಬರು ಮನುಷ್ಯರೂ ಪರಲೋಕದಲ್ಲಿ ಇದ್ದರು. ಆ ಮನುಷ್ಯರಲ್ಲಿ ಒಬ್ಬನು ಕಪ್ಪಾಗಿಯೂ, ಇನ್ನೊಬ್ಬನು ಬಿಳುಪಾಗಿಯೂ ಇದ್ದರು. ಆ ಇಬ್ಬರು ದೇವರುಗಳೂ ಆ ಕಪ್ಪು ಮನುಷ್ಯನ ಮೇಲೆ ಮನಸ್ಸಿಟ್ಟದರಿಂದ ಅವರೊಳಗೆ ಜಗಳ ಹುಟ್ಟಿತು. ಆಗ ಪರಲೋಕದ ಸೈನ್ಯದಲ್ಲಿ ಒಬ್ಬನು ಆ ಇಬ್ಬರು ಮನುಷ್ಯರನ್ನು ಭೂಲೋಕಕ್ಕೆ ಕರ ಕೊಂಡು ಬಂದನು. ಅಲ್ಲಿ ಒಂದು ಮಹಾ ದೊಡ್ಡ ಗುಣಿಯನ್ನು ಅಗದನು. ಅದು ಮಳೆನೀರಿನಿಂದ ತುಂಬಿ, ಸಮುದ್ರವಾಯಿತು.

ಆ ಇಬ್ಬರು ಮನುಷ್ಯರು ತಮ್ಮೊಳಗೆ ಜಗಳಾಡದ ಹಾಗೆ ಅವರಲ್ಲಿ ಒಬ್ಬನನ್ನು ನೀರಿನ ಈ ಚೆಯಲ್ಲಿಯೂ ಇನ್ನೊಬ್ಬನನ್ನು ಆಚೆಯಲ್ಲಿಯೂ ಇರಿಸಿ, ಆ ದೂತನು ತಿರಿಗಿ ಪರಲೋಕಕ್ಕೇರಿ ಹೋಗುವದಕ್ಕೆ ಮನಸ್ಸು ಮಾಡಿದಾಗ, ತನಗಿರುವ ಜ್ಞಾನವೆಲ್ಲ ಒಂದು ಗುಡುಸಿನಿಂದ ಒಟ್ಟು ಮಾಡಿ, ಅದನ್ನು ಒಂದು ಪಾತ್ರೆಯಲ್ಲಿ ಹಾಕಿ, ತನ್ನ ತಲೆಯ ಮೇಲೆ ಇಟ್ಟು ಕೊಂಡು, ಮೇಲೆ ಏರುತ್ತಿದ್ದನು. ಆದರೆ ಏರುವ ಸಮಯದಲ್ಲಿ ಆ ಪಾತ್ರೆಯನ್ನು ಕಟ್ಟದೆ ಇದ್ದದರಿಂದ ಅದು ಕೆಳಗೆ ಬಿದ್ದು, ಬಿಳೀ ಮನುಷ್ಯನಿಗೆ ಶಿಕ್ಕಿತು. ಆದ ಕಾರಣ ಬಿಳೀ ಜನರಿಗೆ ಹೆಚ್ಚು ಜ್ಞಾನ ಪ್ರಾಪ್ತಿಯಾಯಿತು. ಈ ತರದ ಹುಚ್ಚು ಕಥೆಗಳು ಹೊರ್ತು ನೀಗರುಗಳಿಗೆ ದೇವರ ವಿಷಯದಲ್ಲಿ ಅನ್ಯಥಾ ಗೊತ್ತು ಇಲ್ಲ. ಸಾಧಾರಣವಾಗಿ ಜನರು, ದೇವರು ಒಬ್ಬ ರಾಕ್ಷಸನೆಂತಲೂ ಆಕಾಶವು ಅವನ ಮುಖವೆಂತಲೂ ನೆನಸುತ್ತಾರೆ.

ದೇವರು ದೂರವಾಗಿದ್ದಾನೆಂತ ನೆನಸುವದರಿಂದ, ಜನರು ಆತನ ಪ್ರತಿನಿಧಿಗಳೆಂದು ತಾವು ಊಹಿಸುವ ಭೂತಗಳನ್ನು ಮಾತ್ರ ಭಯ ಪಟ್ಟು, ಸೇವಿಸುತ್ತಾರೆ. ಭೂತದ ಇಚ್ಛೇ ಪ್ರಕಾರ ಒಳ್ಳೆದಾಗಲೀ ಕೆಟ್ಟದಾಗಲೀ ಸಂಭವಿಸುತ್ತದೆ. ಒಬ್ಬನ ಮೇಲೆ ಇನ್ನೊಬ್ಬನು ಹೊಟ್ಟೆಕಿಚ್ಚಾಗಲೀ ದ್ವೇಷವಾಗಲೀ ಪಟ್ಟರೆ, ಭೂತದ ಮುಖಾಂತರ ಅವನನ್ನು ಕೊಲ್ಲಿಸಿ, ತನ್ನ ಮನಸ್ಸಾಭಿಷ್ಟವನ್ನು ಪೂರೈಸಿ ಕೊಳ್ಳ ಬಹುದು. ಅವುಗಳಿಗೆ ಬಲಿಯನ್ನರ್ಪಿಸಿದರೆ ಸಾಕು; ತನ್ನ ಶತ್ರುವಿನ ಕೇಡನ್ನು ಬಗೆದರೆ ಹಾಗೆಯೆ ಆಗುವದು, ಏನಾದರೂ ಒಂದು ಕಾರ್ಯವನ್ನು ನೆನಸಿದರೆ ಸಾಧ್ಯವಾಗುವದು. ಈ ಭೂತಗಳು ಮನುಷ್ಯರನ್ನು ರೋಗಗಳಿಂದ ಪೀಡಿಸಲೂ, ಸರ್ಪ ಹುಲಿ ಮುಂತಾದ ರೂಪದಿಂದ ಬಂದು ಕೊಲ್ಲಲೂ ಬಲ್ಲವು. ಅವುಗಳಲ್ಲಿ ಕೆಲವು ಮಾತ್ರ ಮನುಷ್ಯನಿಗೆ ಉಪದ್ರ ಕೊಡುವಂಥವುಗಳಲ್ಲ. ಒಂದೊಂದು ಸಾರಿ ಅವುಗಳು ಮನುಷ್ಯರೊಳಗೆ ಹೊಕ್ಕು, ಅವರಿಂದ ಮಾತಾಡಿಸುತ್ತವೆ. ಆದರೆ ಸಾಧಾರಣವಾಗಿ ಪೂಜಾರಿಗಳು ಮಾತ್ರ ಅವುಗಳನ್ನು ಕಂಡು, ಅವುಗಳ ಮಾತುಗಳನ್ನು ಕೇಳುತ್ತಾರೆ.

ಇದನ್ನು ಕುರಿತು ವಿಚಾರಿಸಿದರೆ, ಬುದ್ಧಿಹೀನವಾದ ಈ ಕಲ್ಪನೆಗಳನ್ನು ವಿಶ್ವಾಸಿಸುವ ಜನರು ಪೂಜಾರಿಗಳ ತಂತ್ರಕ್ಕೆ ಬಹಳ ಸುಲಭವಾಗಿ ಮೋಸ ಹೋಗುತ್ತಾರೆ ಎಂಬದು ಸಹಜವಾಗಿ ತೋರುತ್ತದೆ. ಅವರು ಮನಸ್ಸಿಗೆ ಬಂದ ಹಾಗೆ, ಭೂತ ಆಡಿದ ಮಾತೆಂದು ಏನಾದರೂ ಹೇಳಿ,

ಜನರಿಗೆ ಭಯ ಭೀತಿ ತೋರಿಸಿ, ಮೋಸ ಮಾಡಿ, ತಮ್ಮ ಸ್ವಂತ ಲಭ್ಯವನ್ನೇ ಹುಡುಕುವರು. ಹೀಗೆ ನೀಗರುಗಳಲ್ಲಿ ಅನ್ಯಾಯವೂ ಹಗೆಯೂ ನರಹಿಂಸೆಯೂ ಪ್ರಬಲವಾಗಿವೆ.

ಆದರೆ ಸೈತಾನನ ಪಾಶಗಳಿಂದ ಬಂಧಿಸಲ್ಪಟ್ಟಂಥಾ, ಮರಣದ ಭಯದಿಂದ ತಿವಿಯಲ್ಪಟ್ಟಂಥಾ ಈ ಜನಾಂಗವನ್ನು ಸಹಾ ದೇವರು ಕರುಣಿಸಿ, ಅವರಿಗೆ ದಯೆಯನ್ನು ತೋರಿಸುವ ಮನಸ್ಸು ಮಾಡಿದನು. ಕ್ರಿಸ್ತಾಬ್ದ ೧೭೩೬ನೇ ವರುಷದಲ್ಲಿ ಮೊರೇವಿಯನ್ ಎಂಬ ಸಂಘದವರು ಮಿಶ್ಯನ್ ಕಾರ್ಯವನ್ನು ಆರಂಭಿಸಿ, ಸುವಾರ್ತೆಯನ್ನು ಪ್ರಸಂಗಿಸುವಂತೆ ೧೧ ಮಿಶ್ಯನೆರಿಗಳನ್ನು ಭಂಗಾರತೀರಕ್ಕೆ ಕಳುಹಿಸಿದರು. ಆದರೆ ಅವರೆಲ್ಲರು ಕಠಿಣ ಜ್ವರದಿಂದ ಸತ್ತ ಕಾರಣ ಮಿಶ್ಯನ್ ಕಾರ್ಯವು ಪ್ರವರ್ತಿಸಲಾಗಲಿಲ್ಲ. ಪಶ್ಚಿಮ ತೀರದ ಇನ್ನೊಂದು ಕಡೆಯಲ್ಲಿ ಮಾತ್ರ ಕೆಲವು ಠಾಣ್ಯಾಗಳು ಸ್ಥಾಪನೆಯಾದವು. ಆದರೆ ಮುಂಚೆ ದೇನಿಷರ ವಶದಲ್ಲಿದ್ದ ಭಾಗದಲ್ಲಿ ನಮ್ಮ ಬಾಸೆಲ್ ಮಿಶ್ಯನ್ ಸಂಘದವರು ೧೮೨೮ನೇ ವರುಷದಲ್ಲಿ ಬಂದು, ಒಂದು ಹೊಸ ಆರಂಭ ಮಾಡಿದರು. ಆ ಸಮಯದಲ್ಲಿ ಬಂದ ೪ ಮಿಶ್ಯನೆರಿಗಳು ಸತ್ತು ಹೋದರು. ತರುವಾಯ ೧೮೩೧ರಲ್ಲಿ ಬಂದ ಮೂವರೊಳಗೆ ಇಬ್ಬರು, ಮತ್ತು ೧೮೩೬ರಲ್ಲಿ ಬಂದ ಇಬ್ಬರು ಸಹಾ ಅದೇ ಪ್ರಕಾರ ತೀರಿ ಹೋದರು. ಬಳಿಕ ನಮ್ಮ ಕಮ್ಮಿಟಿಯವರು ವೆಸ್ಟಿಂದಿಯವೆಂಬ ದ್ವೀಪಗಳಿಂದ ಕ್ರೈಸ್ತರಾದ ೨೪ ನೀಗರುಗಳನ್ನು ಅಫ್ರಿಕದ ಆ ಭಂಗಾರತೀರಕ್ಕೆ ತರಿಸಿ, ಅಕ್ರೊಪೊಂಗ್ ಮತ್ತು ಉಸು ಎಂಬ ಊರುಗಳಲ್ಲಿ ಠಾಣ್ಯಾಗಳನ್ನು ಸ್ಥಾಪಿಸಿ, ಅಲ್ಲಿ ಅವರನ್ನು ಒಂದು ಸಭೆಯ ಆರಂಭವಾಗಿ ಇರಿಸೋಣಾಯಿತು. ಕ್ರಮೇಣವಾಗಿ ಮಿಶ್ಯನ್ ಕಾರ್ಯವು ಅಲ್ಲಿ ನೆಲೆಗೊಂಡಿತು. ಆದರೆ ಆ ತೀರದ ಪ್ರದೇಶವು ಬಹಳ ಅಸೌಖ್ಯವಾಗಿರುವದರಿಂದ, ಅಲ್ಲಿಗೆ ಹೋದ ಮಿಶ್ಯನೆರಿಗಳಲ್ಲಿ ಅನೇಕರು ಸತ್ತು ಹೋದರು. ಈ ವಿಷಯವನ್ನರಿತು, ವಿಲಾಯತಿಯಲ್ಲಿ ಮಿಶ್ಯನ್ ಕಾರ್ಯಕ್ಕೆ ಕೈಕೊಡುವ ಸ್ನೇಹಿತರು ಬಹಳ ಚಿಂತೆ ಪಟ್ಟು, ಮಿಶ್ಯನೆರಿಗಳನ್ನು ಅಲ್ಲಿಗೆ ಕಳುಹಿಸಿ, ಈ ಪ್ರಕಾರ ಅವರನ್ನ ಮರಣಕ್ಕೆ ಒಪ್ಪಿಸುವದು ವಿಹಿತವೋ, ಭಂಗಾರತೀರದಲ್ಲಿ ಸುವಾರ್ತಾಕಾರ್ಯವನ್ನು ನಡಿಸುವದು ದೇವರ ಚಿತ್ತಕ್ಕೆ ಸಮ್ಮತವೊ, ಅಲ್ಲವೊ, ಎಂತ ತಮ್ಮೊಳಗೆ ವಿಚಾರ ಮಾಡಿದರು. ಆದರೆ ಕಮ್ಮಿಟಿಯವರ ಧೈರ್ಯ ಕುಂದಲಿಲ್ಲ. ದೇವರ ಮೇಲೆ ಭರವಸವಿಟ್ಟು, ಅಲ್ಲಿಗೆ ಹೋದ ಮಿಶ್ಯನೆರಿಗಳು ಮಾಡಿದ ಸಾಹಸವೂ, ಅವರು ಪಟ್ಟ ಕಷ್ಟವೂ ಶ್ರಮವೂ ನಿರರ್ಥಕವಾಗಲಿಕ್ಕಿಲ್ಲ; ದೇವರು ಆ ಬಡ ನೀಗರುಗಳನ್ನು ಕರುಣಿಸಿ, ಆತನ ವಾಕ್ಯವನ್ನು ಅವರಲ್ಲಿ ಪ್ರಕಟಿಸಿ, ಅವರನ್ನು ಆತನ ಬಳಿಗೆ ತರಿಸುವಂತೆ ಪ್ರಯತ್ನಿಸುವ ನಮಗೆ ಎಂದೂ ಸಹಾಯ ಮಾಡದೆ ಇರನು ಎಂದು ಹೇಳಿ, ಇನ್ನು ಬೇರೆ ಕೆಲವು ಮಿಶ್ಯನೆರಿಗಳನ್ನು ಅಲ್ಲಿಗೆ ಕಳುಹಿಸಿದರು. ಇವರ ಮತ್ತು ಮಿಶ್ಯನೆರಿಗಳ ವಿಶ್ವಾಸವು ಸಫಲವಾಗಿದೆ. ಈಗ ಅಲ್ಲಿ ೭ ಮಿಶ್ಯನ್‌ಠಾಣ್ಯಾಗಳಿವೆ. ಯಾವವಂದರೆ: ಅಕ್ರಾ, ಅಥವಾ ಗಾ ಶೀಮೆಯಲ್ಲಿ ಕ್ರಿಸ್ಚನ್ಸಬೊರ್ಗ್ ಮತ್ತು ಅಬೋಕೊಬಿ ಎಂಬ ೨ ಠಾಣ್ಯಾಗಳೂ, ಅದಂಗ್ಮೆ ಅಥವಾ ಕ್ರೊಬೋ ಶೀಮೆಯಲ್ಲಿ ಒಡುಮಸೇ ಎಂಬದೊಂದು ಠಾಣ್ಯಾವೂ, ಅಕ್ವಪೆಮ್ ಅಥವಾ ಓಚಿ ಶೀಮೆಯಲ್ಲಿ ಅಕ್ರೊಪೊಂಗ್ ಮತ್ತು ಅಬುರಿ ಎಂಬ ೨ ಠಾಣ್ಯಾಗಳೂ, ಅಕೆಮ್ ಮತ್ತು ಅಕ್ವಂಬು ಎಂಬ ಶೀಮೆಗಳಲ್ಲಿ ಕ್ಯೇಬಿ ಮತ್ತು ಅನುಮ್ ಎಂಬ ಠಾಣ್ಯಾಗಳೂ ಸಾಹಾ ಇರುತ್ತವೆ. ಇವುಗಳಲ್ಲಿ ಒಂದು ಠಾಣ್ಯಾವು ಸಮುದ್ರತೀರದಲ್ಲಿಯೂ ಇನ್ನೊಂದು ಘಟ್ಟದ ಮಾರ್ಗದಲ್ಲಿಯೂ ಬೇರೆ ೫ ಘಟ್ಟದ ಮೇಲೆಯೂ ಆಚೆಯೂ ಇರುತ್ತವೆ. ಇವುಗಳಲ್ಲಿ ನಡಿ

ಯುವ ಮಿಶ್ಯನ್ ಕಾರ್ಯದ ವೃತ್ತಾಂತವನ್ನು ವಿವರವಾಗಿ ತಿಳಿಸುವಷ್ಟು ಸ್ಥಳವಿಲ್ಲ. ಇಷ್ಟು ಮಾತ್ರ ಇನ್ನು ಹೇಳ ಬಹುದು. ಈಗ ಸಭೆಯನ್ನು ಸೇರಿದ ಕ್ರೈಸ್ತ ನೀಗರುಗಳ ಸಂಖ್ಯೆಯು ೧೦೦೦ಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಇನ್ನು ಅನೇಕರು ಕ್ರೈಸ್ತ ವಿಶ್ವಾಸದಲ್ಲಿ ಮೃತವಾದರು. ಅಲ್ಲಿ ಸ್ಥಾಪನೆಯಾದ ಆಯಾ ಶಾಲೆಗಳಲ್ಲಿ ಸುಮಾರು ೧೦೦೦ ಮಕ್ಕಳು ಕಲಿಯುತ್ತಾರೆ. ಮುಲ್ಕಿ, ಉಡ್ಪಿ, ಹುಬ್ಬಳ್ಳಿ ಈ ಠಾಣ್ಯಗಳಲ್ಲಿರುವಂತೆಯೇ ದಿಕ್ಕಿಲ್ಲದ ಹುಡುಗರಿಗೂ ಹುಡುಗಿಯರಿಗೂ ಬೇರೆ ಬೇರೆ ಶಾಲೆಗಳಿರುತ್ತವೆ. ೨ ಮಧ್ಯಶಾಲೆಗಳಲ್ಲಿಯೂ ೧ ಮೇಲ್‌ಶಾಲೆಯಲ್ಲಿಯೂ ೬೩ ಹುಡುಗರೂ ಯೌವನಸ್ಥರೂ ವಿದ್ಯಾಭ್ಯಾಸ ಮಾಡುತ್ತಾರೆ. ಕೆಲವು ವರುಷಗಳ ಮೇಲೆ ಅವರು ಮಿಶ್ಯನ್‌ಕೆಲಸದಲ್ಲಿ ಸಹಾಯಕರಾಗಿರುವರು. ಆ ದೇಶದಲ್ಲಿ ಕೈಗಾರಿಕೇ ಕೆಲಸಗಳ ವೃತ್ತಿಯು ಬಹಳ ಕಡಿಮೆಯಾಗಿರುವದರಿಂದ ನಮ್ಮ ಹಿರಿಯರು ಬಡಿಗೆಯವರು ಕಮ್ಮಾರರು ಮುಂತಾದ ಕೆಲಸದವರನ್ನು ಅಲ್ಲಿಗೆ ಕಳುಹಿಸಿ, ಯೌವನಸ್ಥರಿಗೆ ಆಯಾ ಉದ್ಯೋಗಗಳನ್ನು ಕಲಿಸುತ್ತಾರೆ. ಮುಂಚೆ ಅಲ್ಲಿ ದನಗಳು ಶಿಕ್ಕುತ್ತಿದ್ದಿಲ್ಲ. ಒಂದು ವೇಳೆ ದೂರದಿಂದ ತಂದರೆ, ಬದುಕುತ್ತಿದ್ದಿಲ್ಲ. ಅಲ್ಲಿ ಹೋದವರಲ್ಲಿ ಒಬ್ಬನು ಬಹು ಪ್ರಯತ್ನದಿಂದ ಸಾಹಸ ಮಾಡಿ, ಕಾರ್ಯವನ್ನು ಸಾಧಿಸಿದನು. ಇದಲ್ಲದೆ ಜನರನ್ನು ಕೆಲಸಕ್ಕೆ ಪ್ರೇರೇಪಿಸುವ ಹಾಗೆಯೂ, ಗುಲಾಮರ ವ್ಯಾಪಾರದ ಪ್ರಬಲತೆಯನ್ನು ಅಭ್ಯಂತರಿಸುವ ಹಾಗೆಯೂ ಮಿಶ್ಯನ್ ಸಂಘಕ್ಕೆ ಸಂಬಂಧವಾದ ಒಂದು ವ್ಯಾಪಾರ ಸಂಘವು ತನ್ನ ಸ್ವಂತ ಹಡಗದಲ್ಲಿ ದೇಶದ ಉತ್ಪನ್ನಗಳನ್ನು ವಿಲಾಯತಿಗೆ ತರಿಸಿ, ಅಲ್ಲಿಂದ ಬೇಕಾದ ಸಾಮಾನುಗಳನ್ನು ಕಳುಹಿಸುವದುಂಟು. ಈ ಪ್ರಕಾರ ಇತರ ಪ್ರಯೋಜನಕರವಾದ ಸರಕುಗಳು ಕಳುಹಿಸೋಣಾಗುತ್ತವೆ ಮಾತ್ರವಲ್ಲ, ಅವುಗಳಿಗಿಂತ ಅಧಿಕ ಮೌಲ್ಯವುಳ್ಳ ದೇವರ ವಾಕ್ಯವೂ ಬೇರೆ ಉಪಯೋಗಕರವಾದ ಪುಸ್ತಕಗಳೂ ೨ ಭಾಷೆಗಳಲ್ಲಿ ಛಾಪಿಸಲ್ಪಟ್ಟು, ಜನರೊಳಗೆ ಪ್ರಸರವಾಗಿವೆ.

ಈ ಪ್ರಕಾರ ಕರ್ತನ ಕಾರ್ಯವು ನೆಲೆಗೊಳ್ಳುತ್ತಾ ಪ್ರವರ್ತಿಸುತ್ತಾ ಇದೆ. ಬೇರೆ ಬೇರೆ ಸ್ಥಳಗಳ ನಿವಾಸಿಗಳು ತಮ್ಮ ಊರುಗಳಲ್ಲಿ ಬೋಧಕರನ್ನಿರಿಸಿ ಶಾಲೆಗಳನ್ನು ಸ್ಥಾಪಿಸ ಬೇಕೆಂದು ಅಪೇಕ್ಷಿತರಾಗಿದ್ದಾರೆ. ಮತ್ತು ಅವರಲ್ಲಿ ಭೂತಗಳ ಮೇಲಣ ವಿಶ್ವಾಸವೂ ಭಯವೂ ಅಲ್ಪ ಸ್ವಲ್ಪ ಕಡಿಮೆಯಾಗುತ್ತಾ ಬಂದದೆ.

ಕ್ರೈಸ್ತರೆಲ್ಲರೂ ದೇವರ ಸಮಸ್ತ ರಾಜ್ಯವೂ ಹ್ಯಾಗೆ ಅನೇಕ ಉಪದ್ರಗಳಿಂದ ಮಹಿಮೆಗೆ ಸೇರಬೇಕೋ, ಹಾಗೆಯೇ ಈ ರಕ್ಷಣೆಯ ಕಾರ್ಯವು ಸಹ ದೇವರಾಜ್ಯಮಾರ್ಗದಲ್ಲಿ ನಡಿಯ ಬೇಕಾಯಿತು; ದೇವರ ವಾಕ್ಯದ ಬೀಜವು ಕಷ್ಟದಿಂದ ಬಿತ್ತಲ್ಪಟ್ಟು, ಅದರಿಂದುಂಟಾದ ಸಮಾಧಾನದ ಫಲವು ಕಾಣ ಬಂದದೆ. ಅದು ಇನ್ನು ಶುಭವಾಗಿ ನಡೆದು, ಇನ್ನು ಅನೇಕ ಮಂದಿಗೆ ಮರಣದ ಭಯದಿಂದಲೂ ಸೈತಾನನ ಅಧಿಕಾರದಿಂದಲೂ ಬಿಡುಗಡೆ ಆಗ ಬೇಕೆಂದು ನಾವು ಪ್ರಾರ್ಥನೆ ಮಾಡಿ, ಕೈ ಕೊಡುವ.

ನುಮಿದಿಯದ ಹಿಪ್ಪೊ ಪಟ್ಟಣದ

ಅಧ್ಯಕ್ಷನಾದ ಔರೇಲಿಯ ಔಗುಸ್ತೀನನು.

ಅಫ್ರಿಕದ ಶೀಮೆಯಾದ ನುಮಿದಿಯದ ತಗಸ್ತೆ ಎಂಬ ಪಟ್ಟಣದಲ್ಲಿ ಪತ್ರಿಕಿಯನೆಂಬ ಒಬ್ಬ ಸ್ಥಿತಿವಂತ ಮಂತ್ರಿಗೆ ಕ್ರಿ. ಶ. ೩೫೪ನೇ ವರುಷದಲ್ಲಿ ಒಬ್ಬ ಕುಮಾರನು ಜನಿಸಿದನು; ಈ ಕುಮಾರನಿಗೆ, ಔರೇಲಿಯ ಔಗುಸ್ತೀನನೆಂತ ಹೆಸರಿಕ್ಕಿದರು. ಅವನ ತಂದೆಯು ವಿಗ್ರಹಾರಾಧಕನು; ಅವನು ಒಂದು ಪ್ರಕಾರದ ದಯೆಯುಳ್ಳ ಗೃಹಸ್ಥನಾಗಿದ್ದರೂ, ಕೋಪಕ್ಕೂ ವ್ಯಭಿಚಾರಕ್ಕೂ ಬೇಗ ಒಳಗಾಗುವಂಥವನು. ಔಗುಸ್ತೀನನ ತಾಯಿಯ ಹೆಸರು ಮೊನಿಕಳೆಂಬದು; ಅವಳು ದಿವಸಕ್ಕೆ ೨ ಸರ್ತಿ ದೇವಾಲಯಕ್ಕೆ ಹೋಗುತ್ತಿದ್ದು, ದಾನ ಧರ್ಮದಿಂದಲೂ ಅಮಲ ನೀತಿ ಚರ್ಯೆಯಿಂದಲೂ ಕರ್ತನನ್ನು ಕೊಂಡಾಡುತ್ತಿರುವಳು. ತನ್ನ ಗಂಡನ ದುರ್ಮಾರ್ಗತ್ವದಿಂದ ತನಗೆ ಯಾವಾಗಲೂ ಬಹಳ ಶೋಕ ಬರುತ್ತಿದ್ದರೂ, ಅವಳು ಅದನ್ನೆಲ್ಲಾ ಆಶ್ಚರ್ಯಕರವಾದ ತಾಳ್ಮೆಯಿಂದ ಸಹಿಸಿ ಕೊಳ್ಳುತ್ತಾ, ಅವನು ವ್ಯಸನಗಳ ಭ್ರಮೆ ಬಿಟ್ಟು ಶಾಂತನಾದಂಥ ಸಮಯದಲ್ಲಿ ಮಾತ್ರ ಅವನಿಗೆ ತಕ್ಕ ಬುದ್ಧಿ ಹೇಳುತ್ತಾ ಬಂದಳು; ಹೀಗಾಗುತ್ತಿರಲಿಕ್ಕಾಗಿ ಅವಳ ಗಂಡನು ತನ್ನ ಜೀವನದ ಅಂತ್ಯ ವರುಷದಲ್ಲಿ ಹೃತ್ಪರಿಣಾಮ ಪಟ್ಟು, ಕ್ರೈಸ್ತನಾದನು. ಅವನ ಹಿರೇ ಮಗನಾದ ಔಗುಸ್ತೀನನು ೧೭ ವರುಷದವನಾದಂದು ಅದಾಯಿತು. ಬೇರೆ ಬೇರೆ ಸ್ತ್ರೀಯರು ಸೌಮನಸ್ಯದ ಮೊನಿಕಳ ಹತ್ತರ ಬಂದು,— ನಮ್ಮ ಪತಿಗಳು ನಮಗೆ ಹೇರಳ ಉಪದ್ರವ ಕೊಡುತ್ತಿದ್ದಾರೆಂತ ದುಃಖಿಸುತ್ತಿರಲು, ಅವಳು,—ಅದು ನಿಮ್ಮ ನಾಲಿಗೆಯ ಕೆಟ್ಟತನದ ಫಲವೇ! ಎಂತ, ಹೇಳುತ್ತಿರುವಳು. ಪತ್ರಿಕಿಯನಿಗೆ ಔಗುಸ್ತೀನನಲ್ಲದೆ ಇನ್ನು ಒಬ್ಬ ಮಗನೂ ಒಬ್ಬ ಮಗಳೂ ಹುಟ್ಟಿದರು. ತನ್ನ ಈ ಮೂರು ಮಕ್ಕಳಲ್ಲಿ ದೇವರ ಭಯವನ್ನು ನಿರ್ಮಿಸುವದು ಮೊನಿಕಳ ಮುಖ್ಯ ಚಿಂತೆಯು. ಔಗುಸ್ತೀನನು ತನ್ನ ಜೀವಿತದ ೪೬ನೇ ವರುಷದಲ್ಲಿ ಬರಕೊಂಡ ತನ್ನ ಚರಿತ್ರದಲ್ಲಿ ಅವಳನ್ನು ಕುರಿತು ಹೇಳುವದೇನಂದರೆ— ನನ್ನ ತಾಯಿಯು ನನಗೆ ಭಾಷಾತೀತವಾದ ಪ್ರೀತಿ ಮಾಡುತ್ತಿದ್ದಳು. ನನ್ನನ್ನು ಹೆರಲಿಕ್ಕೆ ಬಹಳ ವೇದನೆ ಪಟ್ಟಿದ್ದಳು, ಸರಿ; ಆದರೆ ನನ್ನನ್ನು ಇನ್ನೊಮ್ಮೆ ಆತ್ಮಿಕ ರೀತಿಯಾಗಿ ಹೆರಲಿಕ್ಕೆ, ಅಂದರೆ ನನ್ನಲ್ಲಿ ದೇವರ ಭಯವುಳ್ಳ ಹೃದಯ ಹುಟ್ಟಿಸಲಿಕ್ಕೆ ಬಹಳ ಹೆಚ್ಚು ವೇದನೆ ಪಡುತ್ತಿದ್ದಳು; ಅದಲ್ಲದೆ ಅವಳು ತನ್ನ ಬಳಿಕೆಯವರೆಲ್ಲರಿಗೆ ತಾನು ತಾಯಿಯೆಂಬಂತೆ ಪ್ರೀತಿ ಸಲ್ಲಿಸುತ್ತಾ, ತಾನು ಮಗಳೆಂಬಂತೆ ವಿನಯವುಳ್ಳ ಸನ್ಮಾನ ತೋರಿಸುತ್ತಾ ಇದ್ದಳು.

ಔಗುಸ್ತೀನನು ತನ್ನ ಬಾಲ್ಯದ ವಿಷಯ ಬರದದ್ದೇನಂದರೆ: ಮನುಷ್ಯರನ್ನು ಮೆಚ್ಚಿಸಿ ಕೊಳ್ಳುವದು ನನಗೆ ಎಲ್ಲಕ್ಕಿಂತ ದೊಡ್ಡದೆನ್ನಿಸುತ್ತಿತ್ತು; ಆಟದ ದೆಸೆಯಿಂದ ನನ್ನ ಹೆತ್ತವರಿಗೂ ಉಪಾಧ್ಯಾಯರಿಗೂ ಸುಳ್ಳಾಡುವ ಅಸಹ್ಯ ಪಾಪಕ್ಕೆ ಹೆದರದಿರುತ್ತಿದ್ದೆನು; ಹೊಟ್ಟೆಬಾಕತನದಿಂದಲೂ ನನ್ನ ಜತೆಹುಡುಗರನ್ನು ಏನಾದರೂ ಕೊಟ್ಟು ಒಲಿಸ ಬೇಕೆಂಬ ಆಶೆಯಿಂದಲೂ ನನ್ನ ತಾಯಿಯ ಉಗ್ರಾಣ ಕೋಣೆಯಲ್ಲಿ ಆಗಿಂದಾಗ ಕಳ್ಳತನ ಮಾಡುತ್ತಿದ್ದೆನು; ಪಗಡೇ ಆಟದಲ್ಲಿ ಗೆಲ್ಲಬೇಕೆಂಬ ಅಭಿಮಾನದಿಂದ ಅನೇಕ ಸರ್ತಿ ಮೋಸ ನಡಿಸುತ್ತಿದ್ದೆನು; ಬೇರೊಬ್ಬರು ಆ ಆಟದಲ್ಲಿ ಮೋಸ ನಡಿಸಿದರೆ, ಹೊಟ್ಟೆಕಿಚ್ಚಿನಿಂದ ಬಹಳ ಶಿಟ್ಟು ಪಡುತ್ತಿದ್ದೆನು. ಹಾಗಾದರೆ ಔಗುಸ್ತೀನನು ತನ್ನ

ತಾಯಿಯ ಸುಶಿಕ್ಷೆಗೆ ಒಳ ಪಡಲೇ ಇಲ್ಲ. ಇದಕ್ಕೆ ಅವನ ತಂದೆಯಾದರೂ ಮೂಲ; ಹ್ಯಾಗಂದರೆ ತನ್ನ ಮಗನು ತೋರಿಸುತ್ತಿರುವ ಮಾನಾಭಿಲಾಷೆಯನ್ನು ಅವನು ಸಾಕುತ್ತಾ,—ಮತ್ತೇನೂ ಬೇಡ! ನನ್ನ ಕುಮಾರನು ಒಮ್ಮೆ ವಾಕ್ಚಾತುರ್ಯ ಪಂಡಿತನಾಗಿ ಪರಿಶೋಭಿಸ ಬೇಕೆಂಬದೀ ಒಂದೇ ಅಪೇಕ್ಷೆಯುಳ್ಳವನಾಗಿರುತ್ತಿದ್ದನು. ಔಗುಸ್ತೀನನು ತಗಸ್ತೆಯಲ್ಲಿಯೂ ಇದರ ಹತ್ತರ ಇರುವ ಒಂದು ಪಟ್ಣದಲ್ಲಿಯೂ ವಿದ್ಯಾಭ್ಯಾಸ ಮಾಡಿ, ೧೬ ವರುಷದ ಯೌವನಸ್ಥನಾಗಿ, ತನ್ನ ಹೆತ್ತವರ ಮನೆಗೆ ತಿರಿಗಿ ಬಂದು, ಒಂದು ವರುಷ ಅವರ ಸಂಗಡ ಇರುತ್ತಿರಲು, ತನ್ನ ತಾಯಿಯನ್ನು ತನ್ನ ದುರ್ನಡತೆಯಿಂದ ಅತ್ಯಾರ್ತಿ ಪಡಿಸುತ್ತಾ, ಅವಳ ವಿನಂತಿಗೂ ಕಣ್ಣೀರಿಗೂ ಹಾಸ್ಯ ಗೇಯುತ್ತಾ ಇದ್ದನು. ಆ ಸಮಯವನ್ನು ಕುರಿತು ಅವನು ಹಿಂದಗಡೆ ಬರದದ್ದೇನಂದರೆ: ನನ್ನ ದುಷ್ಟ ಜತೆಗಾರರು, ಔಗುಸ್ತೀನನು ದುಷ್ಟತ್ವದಲ್ಲಿ ನಮಗೆ ಈಡಾಗಲಿಕ್ಕಿಲ್ಲವೆಂತ, ಹೇಳುವದಕ್ಕೆ ನಾನು ಕಾರಣ ಕಂಡಿದ್ದರೆ, ಬಹಳ ನಾಚಿ ಕೊಳ್ಳುತ್ತಿದ್ದೆನು; ಆದ್ದರಿಂದ ನಾನು ಬೇರೆ ಬೇರೆ ದುಷ್ಕರ್ಮಗಳನ್ನು ಮನಸ್ಸಿನಲ್ಲಿ ಕಲ್ಪಿಸಿ ಕೊಂಡು, ಅವನ್ನು ನಡಿಸದಿದ್ದರೂ ನಡಿಸಿದ್ಧೇನೆಂತ ಸುಳ್ಳಾಡಿ, ನನ್ನನ್ನು ಹೊಗಳಿ ಕೊಳ್ಳುತ್ತಿದ್ದೆನು. ಓ ನನ್ನ ದೇವರೇ, ನಾನು ಅದನ್ನೆಲ್ಲಾ ನೆನಪು ಮಾಡಿ ಕೊಂಡು, ಅದರಿಂದ ನರಕದಲ್ಲಿ ಬೀಳುತ್ತೇನೆಂದು ಕ್ರಿಸ್ತನ ಹೆಸರಿನ ದೆಸೆಯಿಂದ ಅಂಜ ಬೇಕಾಗದ್ದಕ್ಕಾಗಿ ಕೃತಜ್ಞತೇ ಹಂಗನ್ನು ನಿನಗೆ ಹ್ಯಾಗೆ ಸಲ್ಲಿಸ್ಯೇನು? ನೀನು ಎಲ್ಲಕ್ಕೂ ನನಗೆ ಕ್ಷಮಿಸಿದ್ದರಿಂದ ನಿನಗೆ ಪ್ರೀತಿಸಿ, ನಿನ್ನನ್ನು ಸ್ತುತಿಸುತ್ತಲಿರುವೆನು!—ತದನಂತರ ತಂದೆಯು ಅವನನ್ನು ಅಧಿಕ ವಿದ್ಯಾಭ್ಯಾಸಕ್ಕೋಸ್ಕರ ಕರ್ಥಾಗೊ ಪಟ್ಣಕ್ಕೆ ಕಳುಹಿಸಿದನು. ಅಲ್ಲಿ ಅವನು ತನ್ನ ವಿದ್ಯಾಭಿವೃದ್ಧಿಗೂ ಇದಕ್ಕೆ ತನಗಾಗುವ ಕೀರ್ತಿಗೂ ಹೆಚ್ಚು ಸೊಕ್ಕಿ ಕೊಳ್ಳಲಿಕ್ಕೆ ಬಹಳ ಆಸ್ಪದವಾಯಿತು; ಅದಲ್ಲದೆ ಅವನು ಹೋಗುತ್ತಿರುವ ನಾಟಕದ ಆಟಗಳಿಂದಲೂ ಅವನಿಗಿರುವ ಪುಂಡುಗಾರರ ಸಂಗತಿಯಿಂದಲೂ ಅವನ ಸಂಭಾವಿತತನವು ಪೂರಾ ತಪ್ಪಿದ ಕಾರಣ, ತನ್ನ ೧೮ನೇ ವರುಷದಲ್ಲಿ ಒಬ್ಬ ಹೆಂಗಸನ್ನು ಇಟ್ಟು ಕೊಂಡನು; ಇವಳು ೧೩ ವರುಷ ಅವನ ಬಳಿಯಲ್ಲಿರುತ್ತಿದ್ದಳು. ಅಷ್ಟರಲ್ಲಿ ಅವನ ತಾಯಿಯು ಅವನಲ್ಲಿ ನೆಟ್ಟಿದ್ದ ಕ್ರಿಸ್ತನಾಮ ಸನ್ಮಾನವು ಬೇರು ಧರಿಸಲೇ ಕಿತ್ತು ಹೋಗಿದ್ದಿಲ್ಲ. ಇದಕ್ಕೊಂದು ದೃಷ್ಟಾಂತವೇನಂದರೆ—ಕಿಕೆರೋನನೆಂಬವನೊಬ್ಬ ದೊಡ್ಡ ಮೂರ್ತಿಪೂಜಕ ಪಂಡಿತನು ರಚಿಸಿದೊಂದು ನೀತಿಶಾಸ್ತ್ರವು ಅವನ ಕೈಗೆ ಶಿಕ್ಕಿದಾಗ, ಅವನು ಕೆಲವು ಕಾಲ ಅದಕ್ಕೆ ಚೋದ್ಯ ಪಟ್ಟರೂ—ದೇವರ ಮಗನಾದ ಯೇಸು ಕ್ರಿಸ್ತನ ಹೆಸರು ಅದರಲ್ಲಿಲ್ಲ, ಈ ಹೆಸರಿಲ್ಲದ ಪಾಂಡಿತ್ಯವೂ ವಾಗಲಂಕಾರವೂ ಸತ್ಯವೂ ನನಗೆ ಯಾತಕ್ಕೆ? ಎಂದು, ಅದನ್ನು ಬಿಟ್ಟು ಬಿಟ್ಟು, ಪರಿಶುದ್ಧ ಬರಹವನ್ನೋದಲಿಕ್ಕೆ ಹತ್ತಿದನು; ಆದರೂ ಅವನ ಗರ್ವಕ್ಕಾಗಿ ಇದರ ರಕ್ಷಣಾರ್ಥವು ಅವನಿಗೆ ತಿಳಿಯದೆ ಹೋಯಿತು. ಆ ಸಮಯ ಅವನ ತಂದೆಯು ತನ್ನ ಹೆಂಡತಿಯ ಪರಿಮುಖದಿಂದ ಕ್ರಿಸ್ತನ ಭಕ್ತನಾಗಿ, ತೀರಿ ಹೋದನು; ಆದರೆ ಔಗುಸ್ತೀನನು ಸತ್ಯದ ಬೆಳಕ್ಕೆಲ್ಲಾ ಆರಿದವನಾಗಿ, ಆ ವರೆಗೂ ಉಳಿದಿದ್ದ ಮಣಿಕೇಯರೆಂಬ ಪಾಷಾಂಡಿಗಳ ಉರುಲಿನಲ್ಲಿ ಶಿಕ್ಕಿ ಕೊಂಡನು.

ಅವನು ಕರ್ಥಾಗೊವಿನಲ್ಲಿ ತನ್ನ ವಿದ್ಯಾಭ್ಯಾಸ ತೀರಿಸಿ, ೨೧ ವರುಷದವನಾಗಿ, ಕ್ರಿ. ಶ. ೩೭೫ನೇ ವರುಷ ತನ್ನ ಸ್ವಪಟ್ಣವಾದ ತಗಸ್ತೆಗೆ ಮರಳಿ ಬಂದು, ವಾಕ್ಚಾತುರ್ಯ ಪಂಡಿತನಾದನು. ಮೊನಿಕಳು ತನ್ನ ಮಗನಿಗೆ ದೊರಕುವ ಮಾನ ನೋಡಿದರೂ ಏನೇನೂ ಸಂತೋಷಗೊಳ್ಳದೆ,

ಶೋಕದಿಂದ ಸವೆದು ಹೋಗುತ್ತಾ ಇದ್ದಳು; ಹ್ಯಾಗಂದರೆ ಅವನು ದುರ್ಮಾರ್ಗತನ ಕಳೆಯದಿರುತ್ತಿದ್ದನು. ಅವಳು ಹಗಲಿರುಳು ಅವನಿಗೋಸ್ಕರ ದೇವರಿಗೆ ಪ್ರಾರ್ಥಿಸುತ್ತಾ, ದುಃಖಾಶ್ರುವಿನಿಂದ ಅವನ ಬುದ್ಧಿ ತಿದ್ದಲಿಕ್ಕೆ ಪ್ರಯತ್ನಿಸುತ್ತಾ ಇರುವಷ್ಟರಲ್ಲಿ ದೇವರು ಒಂದು ರಾತ್ರಿ ಒಂದು ದರ್ಶನದಿಂದ ಅವಳಿಗೆ ಬಹಳ ಆದರಣೆ ಕೊಟ್ಟನು. ಹ್ಯಾಗಂದರೆ ಅವಳು ಒಂದು ತಕ್ಕಡಿಯ ದಂಡಿಗೆಯದೊಂದು ಕಡೆಯಲ್ಲಿ ನಿಂತು, ತನ್ನ ಮಗನಿಗೆ ಅತ್ತ ಹಾಗಾಯಿತು; ಆಗ ಒಬ್ಬ ಸಂತುಷ್ಟ ಮುಖವುಳ್ಳ ಯೌವನಸ್ಥನು ಅವಳ ಬಳಿಗೆ ಬಂದು,—ಯಾಕೆ ದುಃಖಿಸುತ್ತಿದ್ದೀ? ಎಂತ ಕೇಳಿದ್ದಕ್ಕೆ, ಅವಳು ತನ್ನ ದುಃಖವನ್ನೆಲ್ಲಾ ಅವನಿಗೆ ಹೇಳಿ ಕೊಂಡಳು. ಆ ಹೊತ್ತು ಆ ಯೌವನಸ್ಥನು,—ನೀನು ನಿಂತಿರುವಲ್ಲಿ ಅವನು ಸಹ ನಿಂತಿದ್ದಾನೆ! ಎಂದು ಹೇಳಿ ಹೋದನು. ಅವಳು ಈ ದರ್ಶನವನ್ನು ತನ್ನ ಮಗನಿಗೆ ತಿಳಿಸಿದಂದು ಇವನು—ಒಳ್ಳೇದು, ಹಾಗಾದರೆ ನೀನು ನನ್ನ ಮತಕ್ಕೆ ಬರುವಿ ಎಂದು ಹೇಳುತ್ತಲೇ, ಅವಳು ಬೇಗ ಅಂದದ್ದೇನು—ಅಲ್ಲಲ್ಲ! ಅವನು ನಿಂತಿರುವಲ್ಲಿ ನೀನು ಸಹ ನಿಂತಿದ್ದೀ ಎಂತ, ಅವನು ನನಗೆ ಹೇಳಲಿಲ್ಲ; ನೀನು ನಿಂತಿರುವಲ್ಲಿ ಅವನು ಸಹ ನಿಂತಿದ್ದಾನೆಂತ, ಹೇಳಿದನಷ್ಟೇ!—ಆಗ ಔಗುಸ್ತೀನನು ಅವಳ ಕಟ್ಟುತ್ತರಕ್ಕೆ ವಿಸ್ಮಯಪೂರಿತನಾದನು. ಅದೇ ಕಾಲ ಅವಳಿಗೆ ಮತ್ತೊಂದು ತಾಪೋಪಶಮನವಾಯಿತು. ಹ್ಯಾಗಂದರೆ ಅವಳು ಒಬ್ಬ ಅಧ್ಯಕ್ಷನಿಗೆ—ನನ್ನ ಮಗನಿರುವ ಮತವು ಸುಳ್ಳೆಂತ, ಅವನಿಗೆ ತಕ್ಕ ಕಾರಣ ಹೇಳಿ, ಸಿದ್ಧಾಂತ ಮಾಡಿ ಕೊಡಿರಿ! ಎಂದು, ಬೇಡಿ ಕೊಂಡಳು; ಅವನವಳಿಗೆ—ಅದು ವ್ಯರ್ಥವಾಗುವದು; ಆ ತರ್ಕಿಯೂ ಗರ್ವಿಯೂ ಆದ ಯೌವನಸ್ಥನು ಕಾರಣಗಳ ಮೇಲೆ ಲಕ್ಷ್ಯವಿಡಲಿಕ್ಕಿಲ್ಲ; ಆದರೆ ನೀವು ಮುಂಚಿನಂತೆ ದೇವರಿಗೆ ಪ್ರಾರ್ಥಿಸುತ್ತಲಿರ್ರಿ! ನಾನು ಸಹ ಮಣಿಕೇಯನಾಗಿದ್ದೆನು, ಮತ್ತು ತರ್ಕಶಾಸ್ತ್ರ ಬಲ್ಲವನೊಬ್ಬನು ನನ್ನನ್ನು ಒಡಂಬಡಿಸದಿದ್ದರೂ, ಅದು ಅಪಬೋಧನೆಯೆಂತ, ನಾನೇ ತಿಳು ಕೊಂಡೆನಲ್ಲ? ಎಂದು, ತಿಳಿಸಿದನು. ಆದರೆ ಆ ಮಮತೆಯುಳ್ಳ ತಾಯಿಗೆ ಆ ಮಾತಿನಿಂದ ಶಾಂತಿ ಬರಲಿಲ್ಲ; ಅವಳು ಬಹಳ ರಾಗದಿಂದ ತಿರಿಗಿ ಅದೇ ವಿನಂತಿ ಮಾಡಲು, ಆ ದೇವಭಕ್ತನು ಅವಳಿಗಂದದ್ದೇನು—ಈ ಆಲೋಚನೆ ಬಿಡಿರಿ! ಇಷ್ಟು ಕಣ್ಣೀರಿನ ಮಗನು ಕೆಟ್ಟು ಹೋಗುವದು ಅಸಾಧ್ಯವೇ, ನಿಶ್ಚಯ!—ಈ ಮಾತು ಅವಳಿಗೆ ಪರಲೋಕದಿಂದ ಬಂದ ಹಾಗೆಯೇ ತೋರಿಸಿತು.

ತನ್ಮಧ್ಯ ನಡೆದೊಂದು ಸಂಗತಿಯು ಔಗುಸ್ತೀನನ ಗರ್ವಕ್ಕೆ ಅತಿ ವಿರುದ್ಧವಾಯಿತು. ಏನಂದರೆ, ಅವನು ತನ್ನ ಪ್ರಾಣಗೆಳೆಯರಾದವರಲ್ಲಿ ಒಬ್ಬನನ್ನು ಕ್ರೈಸ್ತ ವಿಶ್ವಾಸದಿಂದ ಭ್ರಷ್ಟನಾಗ ಮಾಡಿದ್ದನು. ಇವನು ಫಕ್ಕನೆ ಪ್ರಚಂಡ ಜ್ವರದಲ್ಲಿ ಬಿದ್ದು, ಅರ್ಧಸ್ಮೃತಿಯವನಾಗಿರಲು, ಅವನ ಕುಟುಂಬದವರು ಅವನಿಗೆ ತ್ರಿಯೇಕ ದೇವರ ನಾಮದಲ್ಲಿ ಸ್ನಾನ ಕೊಡಿಸಿದರು. ಔಗುಸ್ತೀನನು ಆದರ ಸುದ್ದಿ ಕೇಳಿ, ಅಂಥಾ ಸ್ನಾನವು ತಾನು ಕೊಟ್ಟ ಬೋಧನೆಯನ್ನು ಹ್ಯಾಗೂ ಕಿತ್ತು ಹಾಕ ಕೂಡದೆಂದು, ನೆನಸಿದನು. ತರುವಾಯ ಎಲ್ಲರೂ ನಿರಾಶೆ ಪಟ್ಟಿರುವಲ್ಲಿ ಆ ರೋಗಿಷ್ಟನಿಗೆ ತಿರಿಗಿ ಕ್ಷೇಮವಾಗುತ್ತಲೇ ಔಗುಸ್ತೀನನು ಅವನೆಡೆಗೆ ಹೋಗಿ, ಅವನ ಸಂಗಡ ಸಂಭಾಷಿಸಿ, ಅವನಿಗಾದ ಸ್ನಾನಕ್ಕೆ ಹಾಸ್ಯ ಗೈಯ ತೊಡಗಿದನು. ತಕ್ಷಣವೇ ಇವನು, ನೀನು ಈ ತರದ ಗೋಷ್ಟಿ ಬಿಡದಿದ್ದರೆ, ಇನ್ನು ನನ್ನ ಗೆಳೆಯನಾಗಿರ ಕೂಡದೆಂದು, ಖಂಡಿತವಾಗಿ ನುಡಿದನು. ಔಗುಸ್ತೀನನು ಬಹಳ ಬೆರಗಾಗಿ,—ನಮ್ಮ ಸಂಭಾಷಣೆಯನ್ನೆಲ್ಲಾ ಬರಕೊಂಡು, ಕೆಲವು ದಿವಸದ ಮೇಲೆ ಅವನ ಮುಂ

ದೆ ಓದುವೆನೆಂತ, ಹೋಗಿ, ತಿರಿಗಿ ಬಾರದಕ್ಕಿಂತ ಮುಂಚೆಯೇ ಆ ಸ್ನೇಹಿತನು ಮತ್ತು ಜ್ವರದವನಾಗಿ, ಸತ್ತು, ಹೀಗೆ ಅವನ ಕುಯುಕ್ತಿಗೆ ತಪ್ಪಿಸಿ ಕೊಂಡು ಹೋದನು. ಈ ಅನುಭವವೂ ಅವನ ತಾಯಿಯ ಪ್ರಾರ್ಥನೆ ಹಿತೋಪದೇಶಗಳೂ ಅವನ ಪ್ರಾಣವನ್ನು ಬಹುಶಃ ಕಾಡಿಸುತ್ತಿದ್ದವು. ಹೀಗಿರಲಿಕ್ಕೆ ಅವನಿಗೆ ತಗಸ್ತೆಯಲ್ಲಿ ಇನ್ನು ಶಾಂತಿ ಇರಲಿಲ್ಲ.

ಅದರ ನಿಮಿತ್ತ ಅವನು ಆ ಪಟ್ಣ ಬಿಟ್ಟು, ಕರ್ಥಾಗೊವಿಗೆ ಹೋಗಿ, ಒಂದು ವಾಕ್ಚಾತುರ್ಯ ವಿದ್ಯಾಶಾಲೆ ಸ್ಥಾಪಿಸಿದನು. ಇತ್ತಲಾಗೆ ಅವನು ಆ ಮಣಿಕೇಯ ಮತದ ಕಟ್ಟಳೆಯ ಪ್ರಕಾರ ಸೂರ್ಯಚಂದ್ರರಿಗೆ ಪೂಜಿಸುತ್ತಾ, ಈ ಎರಡು ವಸ್ತುಗಳ ಹೆಸರಿನಲ್ಲಿ ಬಹಳ ಉಪವಾಸ ಮಾಡುತ್ತಾ, ಜ್ಯೋತಿಷವನ್ನು ನಡಿಸುತ್ತಾ ಇದ್ದರೂ ಮನಸ್ತೃಪ್ತಿ ಪಡದಿರುತ್ತಿದ್ದನು; ಅದಲ್ಲದೆ ತಾನಿರುವ ಮತದ ಮೇಲೆ ಅವನಿಗೆ ಸಂಶಯವು ಸಹ ಹುಟ್ಟಿತು. ಇದು ಬಹು ಹೆಚ್ಚಾದದ್ದು; ಹ್ಯಾಗಂದರೆ, ಇವನು ತನ್ನ ಹತ್ತರದ ಆ ಮಣಿಕೇಯ ವಿದ್ವಾಂಸರಿಗೆ ಅನೇಕ ಪ್ರಶ್ನೆಗಳನ್ನು ಹಾಕುತ್ತಿರಲು, ಇವರು ತಕ್ಕ ಉತ್ತರಗಳನ್ನು ಕೊಡಲರಿಯದೆ—ನಮಗೆ ಫೌಸ್ತನೆಂಬ ಗುರುವಿದ್ದಾನೆ, ಅವನು ನಿಮ್ಮ ಸಂಶಯವೆಲ್ಲಾ ಬಿಡಿಸುವನೆಂತ, ವದಿಸುತ್ತಿರುವಾಗಲೊಂದು ದಿನ ಆ ಗುರುವು ಕರ್ಥಾಗೊವಿಗೆ ಬಂದನು. ಬಳಿಕ ಔಗುಸ್ತೀನನು ಅವನ ಬಳಿಗೈದಿ, ವಿಚಾರಿಸುವಲ್ಲಿ—ಆ ಮನುಷ್ಯನು ಅಲ್ಪ ಸ್ವಲ್ಪ ವಿದ್ಯಾಭ್ಯಾಸಿ; ಅಪಂಡಿತಾನಾಂ ಮೌನಮೇವ ಭೂಷಣಂ, ಅಂದರೆ ಸುಮ್ಮಗಿರುವದೇ ಪಂಡಿತರಲ್ಲದವರಿಗೆ ಭೂಷಣವೆಂಬ ಗಾದೆಯು ಅವನಲ್ಲಿಯೂ ಒದಗಿತೆಂತ ತಿಳಿದು, ಮಣಿಕೇಯತ್ವಕ್ಕೆ ಬೆನ್ನು ಹಾಕುವವನಾದನು.

ದೇವರಿಲ್ಲದವರಿಗೆ ಸಮಾಧಾನವಿಲ್ಲ! ಎಂಬ ಪರಿಶುದ್ಧ ಬರಹದ ವಚನದ ಹಾಗೆ ಔಗುಸ್ತೀನನು ಹೆಚ್ಚು ಹೆಚ್ಚಿಗೆ ಅನುಭವಿಸಿ, ರೋಮಪುರದಲ್ಲಿ ತನಗೆ ಸೌಖ್ಯ ಬಂದೀತೆಂತ ನೆನಸಿ, ಅಲ್ಲಿಗೆ ಹೋಗುತ್ತೇನೆಂತ ತನ್ನ ತಾಯಿಗೆ ಹೇಳಲು, ಅವಳು ಅಲ್ಲಿಯ ಐಶ್ವರ್ಯಸಂಭ್ರಮಸ್ಥರಲ್ಲಿ ತನ್ನ ಮಗನು ಸೇರಿದರೆ ಪೂರಾ ಕೆಟ್ಟಾನೆಂತ ಅಂಜಿ, ಅತ್ತು,—ಕಂದಾ, ಅಲ್ಲಿಗೆ ಹೋಗ ಬೇಡವೆಂತ, ನಾನಾ ಪ್ರಕಾರ ಬೇಡಿ ಕೊಂಡರೂ ಅವನು ಒಪ್ಪಲಿಲ್ಲ. ಅದಕ್ಕವಳು,—ಹಾಗಾದರೆ ನಿನ್ನ ಸಂಗಡ ಬರುತ್ತೇನೆಂತ, ಹೇಳಿದಳು. ಅದು ಅವಳ ಬುದ್ಧ್ಯುಪದೇಶಕ್ಕೆ ಮೆಚ್ಚದ ಮಗನಿಗೆ ಬಹಳ ದುಃಖಕರವಾದ ಮಾತಾಯಿತು. ಕ್ರಿ. ಶ. ೩೮೩ನೇ ವರುಷ ಅವರಿಬ್ಬರು ಕೂಡಿ, ಬಂದರಸ್ಥಳಕ್ಕೆ ಬಂದ ಹಿಂದೆ ಅವನು—ಈಗ ಎದುರ್ಘಾಳಿ ಬೀಸುತ್ತದೆ, ಒಳ್ಳೇ ಘಾಳಿ ಬರುವನಕ ನೀವು ಈ ರಾತ್ರಿ ಸಮೀಪವಾದ ದೇವಾಲಯದೊಳಗೆ ಉಳುಕೊಳ್ಳಿರಿ; ಅಷ್ಟರಲ್ಲಿ ನಾನು ಒಬ್ಬ ಸ್ನೇಹಿತನನ್ನು ಕಂಡು ಬರುವೆನೆಂದು ಹೇಳಿ, ತನ್ನ ತಾಯಿಯನ್ನು ನಂಬಿಸಿದಾಗ, ಇವಳು ಆ ದೇವಾಲಯದೊಳಗೆ ಪ್ರವೇಶಿಸಿ, ಇರುಳೆಲ್ಲಾ ತನ್ನ ಮಗನಿಗೋಸ್ಕರ ಪ್ರಾರ್ಥಿಸುತ್ತಿರುವ ಸಮಯದಲ್ಲಿ ಅವನು ಹಡಗದ ಮೇಲೆ ಹತ್ತಿ, ಹೊರಟನು. ಅವನು ಈ ವಿಧವಾಗಿ ತನ್ನ ಪ್ರಿಯ ಮಾತೆಗೆ ಮೋಸ ಮಾಡಿದ್ದಕ್ಕಾಗಿ ಹಿಂದಗಡೆ ಬಹಳ ಮನಸ್ತಾಪ ಗೊಂಡಿರುತ್ತಿರುವನು. ಮೊನಿಕಳು ಹೊಂತುಂಟ್ಲೇ ಎದ್ದು ಬಂದು, ಆ ಹಡಗವು ಹೋಯಿತೆಂತ ಗೋಳಾಡಿ, ದುಃಖಿತಳಾಗಿ, ಕರ್ಥಾಗೊವಿಗೆ ತಿರುಗಿದಳು.

ಔಗುಸ್ತೀನನು ರೋಮಕ್ಕೆ ಮುಟ್ಟಿ ಸ್ವಲ್ಪ ಕಾಲ ಹೋದನಂತರ ಮರಣಕಂಟಕದ ರೋಗದವನಾದನು; ಆದರೂ ಕ್ಷೇಮವು ಬೇಗ ಅವನ ಕಡೆಗೆ ತಿರುಗಿತು. ಅದನ್ನು ಕುರಿತು ಅವನು

ತನ್ನ ಜೀವಚರಿತ್ರದಲ್ಲಿ ಬರೆದದ್ದೇನಂದರೆ: ನಾನು ಆಗ ನನ್ನ ಪಾಪಗಳಲ್ಲಿ ಸಾಯದ್ದು ನನ್ನ ಭಕ್ತಿವಂತಳಾದ ತಾಯಿಯ ಪ್ರಾರ್ಥನೆಗಳ ಫಲವೇ, ಸರಿ! ಅವನು ಗುಣ ಪಟ್ಟು ಬಹಳ ದಿವಸ ಕಳೆಯದ್ದಕ್ಕಿಂತ ಮುಂಚೆ, ಮಿಲಾನೊ ಪಟ್ಣಕ್ಕೆ ಬಂದು, ವಾಕ್ಚಾತುರ್ಯ ವೃತ್ತಿ ನಡಿಸ ಬೇಕೆಂತ, ಅವನಿಗೆ ನಿರ್ದೇಶವಾಯಿತು. ಆ ಸಮಯ ಅಂಬ್ರೊಸಿಯನೆಂಬವನು ಅಲ್ಲಿ ವೆಗ್ಗಳ ಆಶೀರ್ವಾದದೊಡನೆ ಸಭಾಧ್ಯಕ್ಷತೆಯಲ್ಲಿ ಪ್ರವರ್ತಿಸುತ್ತಿದ್ದನು. ಔಗುಸ್ತೀನನು ಅಲ್ಲಿಗೆ ಹೋಗಿ, ಅವನ ಕೀರ್ತಿಯ ಸುದ್ದಿ ಕೇಳಿ, ಅವನಿಗೆ ಭೇಟಿ ಕೊಟ್ಟನು; ಅಂಬ್ರೊಸಿಯನು ಅವನಿಗೆ ಬಹಳ ವಾತ್ಸಲ್ಯ ತೋರಿಸಿದನು. ಔಗುಸ್ತೀನನು ಇದಕ್ಕೆ ಮೆಚ್ಚಿದ್ದಲ್ಲದೆ—ಆ ಅಧ್ಯಕ್ಷನು ತನ್ನ ಪ್ರಸಂಗಗಳಿಂದ ಲೋಕಪ್ರಸಿದ್ಧನಾಗಿದ್ದಾನೆ; ಆದವನಿಗೆ ಯೋಗ್ಯವೋ? ಅಯೋಗ್ಯವೋ? ವಿಚಾರಿಸ ಬೇಕೆಂತ ದೇವಾಲಯಕ್ಕೈದಿ, ಅಂಬ್ರೊಸಿಯನ ಪ್ರಸಂಗದ ತರಕ್ಕೆ ಆಶ್ಚರ್ಯ ಪಟ್ಟು, ತದನಂತರ—ನಾನು ಸಹ ನನ್ನ ಉದ್ಯೋಗದಲ್ಲಿ ಅಂಥಾ ತರದಿಂದ ಕೀರ್ತಿಗೊಂಡೇನೆಂತ, ಅದನ್ನು ಕಲಿತು ಕೊಳ್ಳುವ ನಿಮಿತ್ತ ಅನೇಕಾವರ್ತಿ ಅವನ ದೇವಾಲಯಕ್ಕೆ ಗಮಿಸುತ್ತಿದ್ದನು. ಹೀಗಿರಲಾಗಿ ಅವನು ಕೇಳಿದ ಪರಿಶುದ್ಧ ಬರಹದ ಮಾತುಗಳಲ್ಲಿ ಹಲವು ಅವನ ಮನಸ್ಸಾಕ್ಷಿಗೆ ಹೊಕ್ಕವು; ಇವುಗಳ ದಿವ್ಯ ಬೆಳಕಿನ ಮೂಲವಾಗಿ ಅವನು ಮಣಿಕೇಯತ್ವವೆಂಬ ಪಾಷಂಡವನ್ನು ಪೂರಾ ವಿಸರ್ಜಿಸಿದನು. ದೇವರು ಅವನ ಹೃದಯ ಗೆಲ್ಲಲಿಕ್ಕೆ ಹಾಗೆ ಸ್ಪಷ್ಟ ಪ್ರಯತ್ನ ಗೈಯುವ ಆ ದಿವಸಗಳಲ್ಲಿ ದೇವರ ಪ್ರೇರಣೆಯಿಂದ ಸಹ ಔಗುಸ್ತೀನನ ತಾಯಿಯು ತನಗಿದ್ದ ಸಮುದ್ರಪ್ರಯಾಣದ ಭಯ ಕಳೆದು ಬಿಟ್ಟು, ಹಡಗವೇರಿ, ಮಹಾ ಬಿರುಘಾಳಿ ಎದ್ದಲ್ಲಿ ಧೈರ್ಯಗುಂದಿದ ಹಡಗದವರಿಗೆ ದೃಢ ಧೈರ್ಯ ಕೊಡಲಿಕ್ಕಾದರೂ ಸಮರ್ಥಳಾಗಿ, ಸುರಕ್ಷಿತಳಾಗಿ ಮಿಲಾನೊವಿಗೆ ಬಂದು ಮುಟ್ಟಿ, ತನ್ನ ಮಗನನ್ನು ಅಶ್ರುಧಾರೆಯೊಡನೆ ಅಪ್ಪಿ ಕೊಳ್ಳಲು, ಇವನು—ನಾನು ಇನ್ನು ಕ್ರೈಸ್ತನಾಗದಿದ್ದರೂ ಮಣಿಕೇಯನಲ್ಲದವನಾಗಿದ್ದೇನೆಂತ, ಅವಳಿಗೆ ಅರಿಕೆ ಮಾಡಿದನು. ಅಂಬ್ರೊಸಿಯನು ಮೊನಿಕಳ ದೇವಭಕ್ತಿಗೆ ವಿಸ್ಮಿತನಾಗಿ, ದೇವಾಲಯದಲ್ಲಿ ಅವಳನ್ನು ಕಾಣುವಾಗಿಂದಾಗ್ಯೆ ಸಭೆಯ ಮುಂದೆ ಅವಳನ್ನು ಕೊಂಡಾಡುವದು ಬಿಡಲಾರದಿರುವನು; ಆದರೆ ಮೊನಿಕಳಿಗೆ ಆ ಅಧ್ಯಕ್ಷನ ಸಲಿಗೆಯಿಂದ ಅಧಿಕ ಹೃದಾದರಣೆ ಪ್ರಾಪ್ತವಾಗುತ್ತಿರುವದು. ಔಗುಸ್ತೀನನ ಪ್ರಾಣಗೆಳೆಯರಲ್ಲಿಬ್ಬರು ಸಹ ಅವನ ಮೇಲಿನ ಸ್ನೇಹದಿಂದ ಮಿಲಾನೊವಿಗೆ ಬಂದರು; ಅವರು ಅವನಂಥಾ ಅನುಭವದವರೇ; ಅದೇ ಸಂಶಯತ್ವವೂ ಅದೇ ನಿರ್ಬಲತ್ವವೂ ಸತ್ಯ ಕಂಡು ಕೊಳ್ಳ ಬೇಕೆಂಬ ಅದೇ ಕಾಂಕ್ಷೆಯೂ ಅವರಿಬ್ಬರಿಗೂ ಇರುತ್ತಿದ್ದವು. ಆ ಮೇಲೆ ಔಗುಸ್ತೀನನು ಮೂವರಾದ ತಮ್ಮ ಆಗಿನ ಸ್ಥಿತಿ ನೆನಸಿ,—ನಾವು ಮೂವರು ಬಾಯ್ದೆರೆ ಹಶಿವೆ ಪಡುವವರಂತೆ ಒಬ್ಬರಿಗೊಬ್ಬರು ನಮ್ಮ ಸಂಕಟ ಹೇಳಿ ಕೊಳ್ಳುತ್ತಾ, ಓ ದೇವರೇ, ನೀನು ತಕ್ಕ ಕಾಲಕ್ಕೆ ಆಹಾರ ಕೊಡುವ ದಾರಿ ನೋಡಿ ಕೊಳ್ಳುತ್ತಾ ಇದ್ದೆವು! ಎಂತ ವರ್ಣಿಸಿದನು.

(ಉಳದ್ದು ಮುಂದಿನ ಪತ್ರಿಕೆಯಲ್ಲಿ ಬರುವದು.)

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. **SEPTEMBER 1868.** ಅಂಕೆ ೨.

ಮಾರ್ಕ. ೭, ೩೧—೩೭.

ಅವನು ತೂರ್ ಸೀದೋನ್ ಪ್ರಾಂತ್ಯಗಳಿಂದ ತಿರಿಗಿ ಹೊರಟು, ದೆಕಪೊಲಿಯ ಪ್ರಾಂತ್ಯಗಳ ಮಧ್ಯದಿಂದ ಗಲಿಲಾಯ ಸಮುದ್ರದ ಬಳಿಗೆ ಬಂದನು. ಆಗ ನತ್ತಿ ಮಾತಾಡುವ ಕಿವುಡನನ್ನು ಅವನ ಬಳಿಗೆ ತಂದು, ಅವನ ಮೇಲೆ ಕೈ ಇಡ ಬೇಕೆಂದು ಅವನನ್ನು ಬೇಡಿ ಕೊಂಡರು. ಅವನು ಅವನನ್ನು ಸಮೂಹದಿಂದ ಏಕಾಂತವಾಗಿ ಕರಕೊಂಡು ಹೋಗಿ, ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಹಾಕಿ, ಉಗುಳಿ, ಅವನ ನಾಲಿಗೆಯನ್ನು ಮುಟ್ಟಿ, ಆಕಾಶವನ್ನು ನೋಡಿ, ಮೂಲುಗಿ, ಎಫ್ಫಥಾ ಎಂದು ಅವನಿಗೆ ಹೇಳಿದನು. ಅದೇನಂದರೆ, ತೆರೆದಾಗು. ಸಂಗಡಲೇ ಅವನ ಕಿವಿಗಳು ತೆರೆಯಲ್ಪಟ್ಟು, ಅವನ ನಾಲಿಗೆಯ ನರವು ಬಿಚ್ಚಲ್ಪಟ್ಟು, ಅವನು ಚನ್ನಾಗಿ ಮಾತಾಡಿದನು. ಆಗ ಯಾರಿಗೂ ಹೇಳ ಬಾರದೆಂದು, ಅವರಿಗೆ ಆಜ್ಞಾಪಿಸಿದನು. ಆದರೆ ಅವನು ಅವರಿಗೆ ಎಷ್ಟು ಆಜ್ಞಾಪಿಸಿದನೋ, ಅಷ್ಟು ಅಧಿಕಾಧಿಕವಾಗಿ ಸಾರಿದರು: ಎಲ್ಲಾ ಚನ್ನಾಗಿ ಮಾಡಿದ್ದಾನೆ; ಕಿವುಡರು ಕೇಳುವ ಹಾಗೆಯೂ, ಮೂಕರು ಮಾತಾಡುವ ಹಾಗೆಯೂ ಮಾಡುತ್ತಾನೆಂದು ಹೇಳಿ, ಅತ್ಯಧಿಕವಾಗಿ ಆಶ್ಚರ್ಯ ಪಟ್ಟರು.

ಸುವಾರ್ತಿಕನಾದ ಮಾರ್ಕನ ಗ್ರಂಥದಲ್ಲಿ ಶೇರಿದ ಬೇರೆ ಕಥೆಗಳೆಲ್ಲಾ ಮತ್ತಾಯ ಲೂಕರ ಸುವಾರ್ತೆಗಳಲ್ಲಿಯೂ ಬರೆದವೆ; ಇದೊಂದನ್ನೇ ಮಾರ್ಕನು ಮಾತ್ರ ಹೇಳಿದನು. ಒಂದು ವೇಳೆ ಸುವಾರ್ತಿಕನಾದ ಮಾರ್ಕನು ಈ ಪ್ರಯಾಣದಲ್ಲಿ ಯೇಸು ಕ್ರಿಸ್ತನ ಜೊತೆಯಲ್ಲಿ ಇದ್ದು, ಕರ್ತನು ಆ ಬಡ ಮನುಷ್ಯನಿಗೆ ಕಿವಿ ಕೊಟ್ಟು, ನಾಲಿಗೆ ಸಡ್ಲಿಸಿದ ಆಶ್ಚರ್ಯ ಕ್ರಿಯೆಯನ್ನು ತಾನು ಕಂಡು, ವಿವರಿಸಿದನು. ಹ್ಯಾಗೂ ಈ ಕಾರ್ಯವು ವಿಶೇಷವಾದದ್ದೆಂದು ನೆನಸಿ ಕೊಂಡದರಿಂದ, ಅದನ್ನು ಪ್ರತ್ಯೇಕವಾಗಿ ಬರೆದನೆಂದು ತೋರುತ್ತದೆ. ಚನ್ನಾಗಿ ವಿಚಾರ ಮಾಡಿದರೆ, ಅದು ಸಾಧಾರಣವಾದ ಕೃಪೆಯ ಕೃತ್ಯವಲ್ಲ, ಮುಖ್ಯವಾದ ಕೆಲವು ರಕ್ಷಣೆಯ ಬೋಧನೆಗಳ ಉದಾಹರಣೆ ಎಂದು ಕಾಣುತ್ತದೆ.

ಮಾರ್ಕನು ನಡೆದ ಸಂಗತಿಯನ್ನೆಲ್ಲಾ ವಿವರವಾಗಿ ಬರೆಯದೆ, ಓದುವವರು ಪರಾಮರಿಸುವದಕ್ಕೆ ಹೆಚ್ಚಾಗಿ ತಕ್ಕ ಮಾತುಗಳನ್ನು ಮಾತ್ರ ಸೂಚಿಸಿದ್ದಾನೆ. ಆ ಬಡ ಮನುಷ್ಯನು ಪ್ರಾಯದವನೋ ಮುದುಕನೋ, ಅವನು ಯೆಹೂದ್ಯನೋ ಸುರ್ಯನೋ, ಗಲಿಲಾಯದವನೋ, ಅವನು ಹುಟ್ಟು ಕಿವುಡನೋ ಕಿವಿಯೂ ಬಾಯಿಯೂ ಇಲ್ಲದವನೋ, ಅದರು ವಾಯುವಿನಿಂದ ಕಿವುಡನಾದವನೋ, ಈ ಕಾರಣದಿಂದಲೇ ನತ್ತಿ ಮಾತಾಡುವವನೋ, ಅವನನ್ನು ಕರ್ತನ ಹತ್ತರ ಕರತಂದವರು ಮನೆಯವರೋ ಊರಿನವರೋ, ಕರ್ತನ ಬಳಿಯಲ್ಲಿ ಕೂಡಿ ಬಂದು, ಆತನ ಆಶ್ಚರ್ಯ ಕ್ರಿಯೆಗಳನ್ನು ನೋಡಿದ ಮೇಲೆ ಬೇಡುತ್ತಾ ತಿರುಗುವ ಕಿವುಡನನ್ನು ಕಂಡು ಕರುಣಿಸಿದ ಗುಂಪಿನವರೋ, ಆ ಮನುಷ್ಯನು ತಾನೇ ಕ್ರಿಸ್ತನು ಸ್ವಸ್ಥ ಮಾಡಿದವರನ್ನು ಕಂಡು ತನಗೂ ಗುಣವಾಗ ಬೇಕೆಂಬ ಅಪೇಕ್ಷೆಯಿಂದ ಗುಂಪಿನಲ್ಲಿ ಶೇರಿದನೋ, ಅಲ್ಲಿದ್ದ ಜನರು ಪ್ರೀತಿಯ ಆಲೋಚನೆಯಿಂದ ಅಂಕೆಯಿಂದ ಅವನನ್ನು ಹಿಡಿದು ಕರ್ತನ ಮುಂದೆ ನಿಲ್ಲಿಸಿದರೋ, ಈ ಮೊದಲಾದ ಪ್ರಶ್ನೆಗಳಿಗೆ ಮಾರ್ಕನ ಚರಿತ್ರೆಯಲ್ಲಿ ಉತ್ತರ ದೊರಕುವದಿಲ್ಲ; ಒಂದು ಮಾತ್ರ ನಿಶ್ಚಯವಾಗಿದೆ, ಅದೇನಂದರೆ: ಆ ಅನಾಥನಿಗೆ ಕಿವಿಯನ್ನೂ ಬಾಯಿಯನ್ನೂ ಕೊಡಲಿಕ್ಕೆ ಲೋಕದ ವೈದ್ಯರ ಚಮತ್ಕಾರವು ಸಾಕಾಗದೆ ಹೋಯಿತು. ಆದರೆ ಯೇಸು ಕ್ರಿಸ್ತನ ಕೃಪೆಗೆ ಅಸಾಧ್ಯವಾದದ್ದು ಒಂದೂ ಇಲ್ಲ. ಯೇಸು ಅವನನ್ನು ಕಂಡ ಕೂಡಲೇ ಅವನನ್ನು ಕರುಣಿಸಿ ಸಹಾಯ ಮಾಡ ಬೇಕೆಂದು ನಿರ್ಣಯಿಸಿ ಕೊಂಡನು. ಅಲ್ಲಿ ಬಂದ ಜನರು ಕರ್ತನ ಸಾಮರ್ಥ್ಯಕ್ಕೆ ಏನೂ ಸಂದೇಹ ಪಡದೆ, ಮುಂಚೆ ರೋಗಿಷ್ಟರ ಮೇಲೆ ಕೈ ಇಟ್ಟು ಅವರನ್ನು ಸ್ವಸ್ಥ ಮಾಡಿದ ಪ್ರಕಾರ ಇವನಿಗೂ ಮಾಡುವನೆಂದು ನೆನಸಿ, ಅವನ ಮೇಲೆ ಕೈ ಇಡ ಬೇಕೆಂದು ಬಿನ್ನೈಸಿದರು. ಕರ್ತನು ಸಹಾಯ ಮಾಡ ಬೇಕೆಂಬ ಪ್ರೀತಿಯ ಆಲೋಚನೆಯಿಂದ ಇದ್ದರೂ, ಜನರು ಹೇಳಿದ ಪ್ರಕಾರ ಮಾಡದೆ, ಮೂಕನನ್ನು ಸಮೂಹದಿಂದ ಏಕಾಂತವಾಗಿ ಕರ ಕೊಂಡು ಹೋದನು; ಕರ್ತನ ಹತ್ತರ ಹನ್ನೆರಡು ಮಂದಿ ಶಿಷ್ಯರೂ ಮೂಕನ ಬಳಿಯಲ್ಲಿ ಅವನನ್ನು ಕರತಂದವರೂ ನಿಂತರೆಂದು ಕಾಣುತ್ತದೆ. ಆದದರಿಂದ ಸ್ವಲ್ಪ ದೂರದಲ್ಲಿದ್ದ ಗುಂಪಿನವರಿಗೆ ಕರ್ತನು ಬಡವನಿಗೆ ಇಂಥಾದ್ದೇ ಮಾಡುತ್ತಾನೆಂದು ಗೋಚರವಾಗಲಿಲ್ಲ. ಆದದ್ದನ್ನು ಯಾರಿಗೂ ಹೇಳ ಬಾರದೆಂದು ಕರ್ತನು ಕೊಟ್ಟ ಅಪ್ಪಣೆಯಿಂದ ಇದು ಚನ್ನಾಗಿ ತೋರುತ್ತದೆ. ಹೀಗಿರಲಾಗಿ ಯೇಸು ಕ್ರಿಸ್ತನು ಅತ್ಯಂತವಾದ ತನ್ನ ಕೃಪೆಯನ್ನೂ ತನ್ನ ದಿವ್ಯ ಮಹಿಮೆಯನ್ನೂ ಪ್ರಕಟ ಮಾಡಿದ ರೀತಿ ಯಾವದೆಂದರೆ: ಈ ಮನುಷ್ಯನು ಯಾರೆಂದೂ ಎಂಥವನೆಂದೂ ವಿಚಾರಿಸದೆ, ಕ್ಷಣವೂ ತಡೆಯದೆ, ಕಿವುಡನ ಸಂಗಡ ಮಾತಾಡ ಕೂಡದೆ ಇದ್ದದರಿಂದ ತಾನು ಮಾಡುವ ಕೆಲಸದ ಅಭಿಪ್ರಾಯವನ್ನು ಸನ್ನೆಯಿಂದ ತಿಳಿಸುವದಕ್ಕಾಗಿ, ನೊಂದು ಅಳುವ ಕೂಸಿಗೆ ಮರುಗಿ ಚಪ್ಪಾಳೆ ಹಾಕುವ ತಾಯಿಯಂತೆ, ಬೆರಳುಗಳನ್ನು ಎದುರು ನಿಲ್ಲುವವನ ಕಿವಿಗಳಿಗೆ ಹಾಕಿ, ತನ್ನ ನಾಲಿಗೆಯನ್ನು ಒರಸಿದ ಬೆರಳಿನಿಂದ ಅವನ ನಾಲಿಗೆ ಒರಸಿ, ದೇವರಿಂದಲೇ ಸಹಾಯ ಬರ ಬೇಕೆಂದು, ಸೂಚಿಸುವದಕ್ಕೆ ಆಕಾಶವನ್ನು ನೋಡಿ, ಇವನ ಕಷ್ಟ ತನ್ನ ಕಷ್ಟವೆಂದು ಮೂಲುಗಿ, ಎಪ್ಫಥಾ ಎಂದು ಹೇಳಿದನು. ಸಂಗಡಲೇ ಕಿವುಡನು ಎಪ್ಫಥಾ ಎಂಬುವದನ್ನು ಕೇಳಿ, ಬಿಗಿ ತಪ್ಪಿದ ನಾಲಿಗೆಯಿಂದ ಚನ್ನಾಗಿ ಮಾತಾಡಿದನೆಂದು ಬರೆದದೆ. ಈ ಚರಿತ್ರೆಯಲ್ಲಿ

ಯೇಸು ಕ್ರಿಸ್ತನು ಮನುಷ್ಯರಲ್ಲಿ ನಡಿಸುವ ರಕ್ಷಣೆಯ ಕಾರ್ಯದ ವಿಶೇಷವಾದ ನಾಲ್ಕು ಕಟ್ಟಳೆಗಳ ಉದಾಹರಣೆಗಳು ದೊರಕುತ್ತವೆ.

೧. ಯೇಸು ಕ್ರಿಸ್ತನಿಂದ ರಕ್ಷಣೆಯನ್ನು ಪಡ ಕೊಳ್ಳ ಬೇಕೆಂದಿರುವವರು ತಾವು ಆತನ ಹತ್ತರ ಬರ ಬೇಕು. ಕರ್ತನು ಲೋಕದಲ್ಲಿ ಸಂಚಾರ ಮಾಡಿದ ಕಾಲದಲ್ಲಿ ಕಿವುಡತನ ಮೂಕತನ ಕುರುಡತನ ಇತ್ಯಾದಿ ಊನತೆಗಳಿಂದಲೂ ನಾನಾ ವಿಧವಾದ ರೋಗಗಳಿಂದಲೂ ಮೈ ಮೇಲೆ ಬಂದ ರೋಗಗಳಿಂದಲೂ ಬಿಡುಗಡೆಯಾದ ಸಾವಿರಾರು ಮಂದಿಯಲ್ಲಿ ಇಬ್ಬರ ಹೊರ್ತು ಒಬ್ಬನಾದರೂ ಯೇಸುವಿನ ಹತ್ತರ ಬಾರದೆ, ಗುಣ ಹೊಂದಲಿಲ್ಲ. ಅವರ್‍ಯಾರಂದರೆ: ಯೋಹಾನನ ೪ನೇ ಸಂಧಿಯಲ್ಲಿ ಬರೆದ ಪ್ರಧಾನಿಯ ಮಗನು, ಮತ್ತಾಯನ ೧೫ನೇಯಲ್ಲಿ ಬರೆದ ಕನಾನ್ಯಳಾದ ಸ್ತ್ರೀಯ ಮಗಳು. ಇವರು ತಮ್ಮ ಸ್ಥಳಗಳನ್ನು ಬಿಡಲಾರದೆ ಇದ್ದದರಿಂದ ಅವನ ತಂದೆಯೂ ಇವಳ ತಾಯಿಯೂ ಸಹಾಯ ಬೇಡುವದಕ್ಕೆ ಯೇಸುವಿನ ಬಳಿಗೆ ಬಂದು, ಇಷ್ಟಾರ್ಥವನ್ನು ಹೊಂದಿದರು. ಉಳಿದವರೆಲ್ಲರು ಯೇಸುವಿನ ಸನ್ನಿಧಿಗೆ ಬಂದು, ಆತನನ್ನು ಮುಟ್ಟಿ, ಅಥವಾ ಆತನಿಂದ ಮುಟ್ಟಿಸಿಕೊಂಡು, ಆತನ ಮುಖವನ್ನು ಕಂಡು, ಇಲ್ಲವೆ ಆತನ ಧ್ವನಿಯನ್ನು ಕಿವಿಯಿಂದ ಕೇಳಿ, ಬಾಯಿಯಲ್ಲಿ ಆತನಿಗೆ ಮೊರೆ ಇಟ್ಟು, ಸಹಾಯ ಹೊಂದಿದರು. ಅಪೊಸ್ತಲರು ಮೊದಲಾದ ಪ್ರಥಮ ಕಾಲದ ಶಿಷ್ಯರೆಲ್ಲರು ಯೇಸುವಿಗೆ ಪೂರ್ಣ ಬಳಿಕೆಯವರಾದ ಪರಿಚಿತರಾಗಿದ್ದರು. ಕರ್ತನು ಪರಲೋಕಕ್ಕೆ ಏರಿ ಹೋದನಂತರ ಅಪೊಸ್ತಲರ ಸಾಲಿನಲ್ಲಿ ಕಡೆಯವನಾಗಿ ಶೇರಿದ ಪೌಲನು ಸಹ ಯೇಸು ಕ್ರಿಸ್ತನನ್ನು ಮುಖಾಮುಖಿಯಾಗಿ ಕಂಡ ಮೇಲೆ, ಮಾನಸಾಂತರ ಪಟ್ಟು, ಆತನ ನಂಬಿಗಸ್ಥನಾದ ಆಳಾದನು. ಅವನು ಕರ್ತನನ್ನು ಪೂರ್ಣ ಹೃದಯದಿಂದ ಪ್ರೀತಿ ಮಾಡಿ, ಗಲಾತ್ಯರಿಗೆ ಬರೆದ ಪತ್ರಿಕೆಯ ೨ನೇ ಸಂಧಿಯ ೨೦ನೇ ವಚನದಲ್ಲಿ ಕರ್ತನಿಗೂ ತನಗೂ ಇರುವ ಅನ್ಯೋನ್ಯದ ವಿಷಯವಾಗಿ ಕೊಟ್ಟ ಸಾಕ್ಷಿ ಏನಂದರೆ: ಕ್ರಿಸ್ತನ ಸಂಗಡ ಕ್ರೂಜಿತನಾಗಿದ್ಧೇನೆ. ಆದರೆ ಬದುಕುತ್ತೇನೆ; ಇನ್ನು ನಾನಲ್ಲ, ಕ್ರಿಸ್ತನೇ ನನ್ನಲ್ಲಿ ಬದುಕುತ್ತಾನೆ; ಹೀಗಿರಲಾಗಿ ನಾನು ಈಗ ಮಾಂಸದಲ್ಲಿ ಬದುಕುವದು, ನನ್ನನ್ನು ಪ್ರೀತಿ ಮಾಡಿ, ತನ್ನನ್ನು ನನಗೋಸ್ಕರ ಕೊಟ್ಟ ದೇವರ ಮಗನ ಮೇಲಿರುವ ವಿಶ್ವಾಸದಲ್ಲಿ ಬದುಕುತ್ತೇನೆ. ಮತ್ತು ಕೊರಿಂಥದವರಿಗೆ, ಕರ್ತನಾದ ಯೇಸುವನ್ನು ಪ್ರೀತಿ ಮಾಡದೆ ಇರುವವನು ಶಾಪಗ್ರಸ್ಥನಾಗಲಿ ಎಂದು ಬರೆದನು. ಆ ಕಾಲದಿಂದ ಈ ವರಿಗೆ ಲೋಕದಲ್ಲಿದ್ದ ಯೇಸು ಕ್ರಿಸ್ತನ ನಿಜ ಶಿಷ್ಯರೆಲ್ಲರು ತಮ್ಮ ಕರ್ತನನ್ನು ಕಣ್ಣಾರೆ ಕಾಣದಿದ್ದರೂ ಆತನ ಬಳಿಕೆಯಲ್ಲಿಯೂ ಬಿನ್ನೈಸಿ ಪ್ರತ್ಯುತ್ತರ ಹೊಂದುವ ಸಲಿಗೆಯಲ್ಲಿಯೂ ಬೇಡಿ ಪಡೆಯುವ ಪರಿಚಯದಲ್ಲಿಯೂ ಸತ್ಯವಾದ ಆತ್ಮಾನ್ಯೋನ್ಯದಲ್ಲಿಯೂ ಜೀವಿಸುತ್ತಾ ಬಂದು, ಪ್ರಥಮ ಕಾಲದ ಶಿಷ್ಯರು ಹೇಳಿದ ಸಾಕ್ಷಿಗೆ ಒಪ್ಪಿತ ಹಾಕಿದರು. ಆದದರಿಂದ ಯೇಸು ಕ್ರಿಸ್ತನ ರಕ್ಷಣೆಯನ್ನು ಪಡ ಕೊಳ್ಳ ತಕ್ಕವರು ಆತನ ಹತ್ತರ ಬಂದು, ಆತನ ಗುರ್ತು ಕಂಡು, ಆತನ ಐಕ್ಯದಲ್ಲಿ ಶೇರುವದು ಎಂಬ ಕಟ್ಟಳೆಗೆ ಅಪವಾದವೇನೂ ಇಲ್ಲ.

ಸಂಪೂರ್ಣ ಅನ್ಯೋನ್ಯದ ಈ ಕಟ್ಟಳೆ ಯೇಸು ಕ್ರಿಸ್ತನ ರಕ್ಷಣೆಯ ಭಾಗಕ್ಕೂ ಆತನು ಕೊಟ್ಟ ರಕ್ಷಾಬೋಧನೆಗೂ ಚನ್ನಾಗಿ ಒಪ್ಪುತ್ತದೆ. ಹ್ಯಾಗಂದರೆ ನಿತ್ಯಜೀವಕ್ಕೆ ಬಾಧ್ಯಸ್ಥರಾದ

ವರಲ್ಲಿ ಒಬ್ಬೊಬ್ಬನು ಹೊಂದುವ ಪಾಪಪರಿಹಾರಕ್ಕೆ ಯೇಸು ಕ್ರಿಸ್ತನ ಮರಣವು ಏಕ ಕಾರಣವಾಗಿದೆ. ನಿಜವಾದ ಪುಣ್ಯವನ್ನು ಪಡ ಕೊಂಡವರಲ್ಲಿ ಒಬ್ಬೊಬ್ಬನ ಅಕ್ರಮಗಳು ಯೇಸು ಕ್ರಿಸ್ತನ ರಕ್ತದಿಂದ ತೊಳದು ಅಳಿದು ಹೋಗೆವೆ. ಪರಿಶುದ್ಧರಲ್ಲಿ ಒಬ್ಬೊಬ್ಬನಿಗೆ ತನ್ನ ಆತ್ಮವನ್ನು ದಯೆ ಮಾಡುತ್ತಾನೆ. ಆತನು ತನ್ನ ಶರೀರದ ಅಂಗಗಳಾದ ಭಕ್ತರನ್ನು ಅತ್ಯಂತವಾದ ಮಮತೆಯ ಮರ್ಮದ ಪ್ರಕಾರ ತನ್ನ ಮಾಂಸವೆಂಬ ಆಹಾರವನ್ನೂ ತನ್ನ ರಕ್ತವೆಂಬ ಪಾನವನ್ನೂ ಕೊಟ್ಟು ಸಾಕುತ್ತಾನೆ. ತನಗೂ ತನ್ನ ಶಿಷ್ಯರಿಗೂ ಇರುವ ಐಕ್ಯವನ್ನು ವರ್ಣಿಸುವದಕ್ಕೆ ಕರ್ತನು ಯೋಹಾನನ ೧೫ನೇ ಸಂಧಿಯಲ್ಲಿ ದ್ರಾಕ್ಷೇ ಬಳ್ಳಿ ಕುಡಿಗಳ ಸಾಮ್ಯವನ್ನು ಪ್ರಯೋಗಿಸಿ, ಹೇಳಿದ್ದೇನಂದರೆ: ನಾನು ದ್ರಾಕ್ಷೇ ಬಳ್ಳಿ, ನೀವು ಕುಡಿಗಳು; ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಯಾಗಿದ್ದರೆ, ಅವನು ಬಹಳ ಫಲ ಫಲಿಸುತ್ತಾನೆ; ಯಾಕಂದರೆ ನಾನಿಲ್ಲದೆ ಏನೂ ಮಾಡಲಾರಿರಿ. ಮತ್ತು ತನ್ನ ಪ್ರಿಯ ಶಿಷ್ಯರಿಗೆ ಆದರಿಕನಾದ ಪರಿಶುದ್ಧಾತ್ಮವನ್ನು ತಂದೆಯಾದ ದೇವರು ಕಳುಹಿಸಿ ಕೊಟ್ಟ ಮೇಲೆ ತನಗೂ ಶಿಷ್ಯರಿಗೂ ಪೂರ್ಣ ಪ್ರಾಣಾನ್ಯೋನ್ಯವು ಹುಟ್ಟುವದೆಂದು ಯೋಹಾನನ ೧೪ನೇ ಸಂಧಿಯಲ್ಲಿ ಸೂಚಿಸಿ, ಹೇಳಿದ್ದೇನಂದರೆ: ನಿಮ್ಮನ್ನು ದಿಕ್ಕಿಲ್ಲದವರಾಗಿ ಬಿಡೆನು; ನಿಮ್ಮ ಬಳಿಗೆ ಬರುತ್ತೇನೆ. ನೀವು ನನ್ನನ್ನು ನೋಡುತ್ತೀರಿ. ನಾನು ಬದುಕುವದರಿಂದ, ನೀವು ಸಹ ಬದುಕುವಿರಿ. ಆ ದಿವಸದಲ್ಲಿ ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ತಿಳಿದು ಕೊಳ್ಳುವಿರಿ. ಹೀಗಾಗಿರುವದರಿಂದ ಪೌಲನು ಮೊದಲಾದ ಅಪೊಸ್ತಲರು ಯೇಸು ಕ್ರಿಸ್ತನನ್ನು ನಂಬಿ ಆತನ ಐಕ್ಯದಲ್ಲಿ ಶೇರಿದ ಭಕ್ತರ ವಿಷಯವಾಗಿ ಕ್ರಿಸ್ತನಲ್ಲಿದ್ದಾರೆಂಬ ಮಾತನ್ನು ರೂಢಿ ಮಾಡಿ ಕೊಂಡಿದ್ದಾರೆ. ಒಬ್ಬನು ಕ್ರಿಸ್ತನಲ್ಲಿದ್ದರೆ, ಹೊಸ ಸೃಷ್ಟಿಯೇ; ಹಳೆಯವುಗಳು ಕಳೆದು ಹೋದವು; ಇಗೋ, ಎಲ್ಲಾ ಹೊಸದಾಯಿತು ಎಂದು, ೨ ಕೊರಿ. ೫, ೧೭ನೇಯಲ್ಲಿ ಬರೆದದೆ. ಕ್ರಿಸ್ತ ಯೇಸುವಿನಲ್ಲಿದ್ದು, ಆತ್ಮದ ಪ್ರಕಾರ ನಡೆಯುವವರಿಗೆ ಆಜ್ಞೆನಿರ್ಣಯು ಏನೂ ಇಲ್ಲವೆಂದು ರೋಮ. ೮, ೧ರಲ್ಲಿ ಬರೆದದೆ. ನಿಮ್ಮ ಜೀವವು ಕ್ರಿಸ್ತನ ಸಂಗಡ ದೇವರಲ್ಲಿ ಅಡಗಿ ಅದೆ. ಕೊಲೊ. ೩, ೩. ಪೇತ್ರನು ಮೊದಲನೇ ಪತ್ರಿಕೆಯ ೧ನೇ ಸಂಧಿಯ ೮ನೇಯಲ್ಲಿ ಬರೆಯುವದೇನಂದರೆ: ಅವನನ್ನು ಈಗ ಕಾಣದೆ ವಿಶ್ವಾಸಿಸಿ, ಹೇಳಲಾರದಂಥ, ಮಹಿಮೆಯುಳ್ಳಂಥ ಸಂತೋಷದಿಂದ ಉಲ್ಲಾಸ ಪಡುತ್ತೀರಿ ಎಂದು ಬರೆಯುತ್ತಾನೆ. ಮತ್ತು ೨ನೇ ಸಂಧಿಯ ೪ನೇ ೫ನೇ ವಚನಗಳಲ್ಲಿ, ಇವನು ಮನುಷ್ಯರಿಂದ ತಳ್ಳಲ್ಪಟ್ಟು, ದೇವರ ಮುಂದೆ ಆಯಲ್ಪಟ್ಟ ಅಮೂಲ್ಯವಾದ ಜೀವವುಳ್ಳ ಕಲ್ಲೆಂದು, ಅವನ ಬಳಿಗೆ ಬಂದು ನೀವು ಸಹ ಜೀವವುಳ್ಳ ಕಲ್ಲುಗಳಂತೆ ಆತ್ಮಿಕ ಮನೆಯಾಗಿ ಕಟ್ಟಲ್ಪಡಿರಿ ಎಂದು ಹೇಳುತ್ತಾನೆ. ಯೋಹಾನನು ಅದೇ ಅಭಿಪ್ರಾಯವನ್ನು ಅನೇಕ ಸ್ಥಳಗಳಲ್ಲಿ ಸೂಚಿಸುತ್ತಾನೆ. ಎಳೆ ಮಕ್ಕಳೇ, ಅವನು ಪ್ರತ್ಯಕ್ಷವಾಗುವಾಗ, ನಾವು ನಾಚಿಕೆ ಪಡದ ಹಾಗೆ, ಅವನಲ್ಲಿ ನೆಲೆಯಾಗಿರ್ರಿ. ೧ ಯೋಹಾನ್ ೨, ೨೮. ದೇವರು ನಮಗೆ ನಿತ್ಯಜೀವವನ್ನು ಕೊಟ್ಟಿದ್ದಾನೆ; ಮತ್ತು ಈ ಜೀವವು ಅವನ ಮಗನಲ್ಲಿ ಅದೆ. ಮಗನನ್ನು ಹೊಂದಿದವನು ಜೀವವನ್ನು ಹೊಂದಿದ್ದಾನೆ. ದೇವರ ಮಗನನ್ನು ಹೊಂದದವನು ಜೀವವನ್ನು ಹೊಂದಿದವನಲ್ಲ. ೧ ಯೋಹಾ. ೫, ೧೧. ೧೨. ಅವನ ಮಗನಾದ ಯೇಸು ಕ್ರಿಸ್ತನೆಂಬ ಸತ್ಯವಾದವನಲ್ಲಿ ಇರುತ್ತೇವೆಂದು ಬಲ್ಲೆವು. ೧ ಯೋಹಾ. ೫, ೨೦.

ಕ್ರೈಸ್ತ ಬೋಧನೆಯ ಬಹು ಘನವಾದ ಈ ಪ್ರಸ್ತಾಪವು ಲೋಕಾಚಾರದ ಭಕ್ತರಿಗೂ ಸಭಾಸಕ್ತ ಭಕ್ತರಿಗೂ ಶೇರುವದಿಲ್ಲ.

ಲೋಕಾಚಾರದ ಭಕ್ತರು ಹೆಸರಿಗೆ ಮಾತ್ರ ಕ್ರೈಸ್ತರಾಗಿದ್ದಾರೆ. ಕ್ರಿಸ್ತನ ಸಲಿಗೆಯೂ ಅನ್ಯೋನ್ಯವೂ ಅವರಿಗೆ ಎಷ್ಟು ಮಾತ್ರವೂ ಇಷ್ಟವಿಲ್ಲ. ಲೋಕಕ್ಕೆ ಮೆಚ್ಚಿ, ಲೋಕದ ಸೌಖ್ಯವನ್ನು ಅನುಭವಿಸಿ ಕೊಂಡು, ಲೋಕದಲ್ಲಿ ಹೆಸರ್ಗೊಂಡು, ತಮ್ಮ ಇಚ್ಛೆಯ ಪ್ರಕಾರ ನಡ ಕೊಳ್ಳುವದು ಅವರ ಸ್ವಭಾವ. ಭಕ್ತಿಯಿಲ್ಲದವರೆನ್ನಿಸಿ ಕೊಳ್ಳಲಿಕ್ಕೆ ಅವರಿಗೆ ಮನಸ್ಸಿಲ್ಲ. ಆದದರಿಂದ ಮಾನಗೆಡಿಸುವ ಪಾಪಗಳನ್ನು ನಡಿಸದೆ, ದೇವರನ್ನು ಕೈಲಾಗುವ ಮಟ್ಟಿಗೂ ಪೂಜಿಸಿ, ಕ್ರಿಸ್ತನ ಧರ್ಮದ ಕಟ್ಟಳೆಗಳನ್ನು ಬೇಕಾದಷ್ಟು ಕೈಕೊಳ್ಳಲಿಕ್ಕೆ ಒಪ್ಪಿ ಕೊಳ್ಳುತ್ತಾರೆ. ಆದರೆ ಮನುಷ್ಯರ ಮುಂದೆ ತಕ್ಕಷ್ಟು ನೀತಿವಂತರಾಗಿ ಕಾಣಿಸಿದರೆ, ಸಾಕೆಂದು ನೆನಸಿ ಕೊಂಡು, ಮಿಕ್ಕಾದ ಕಾರ್ಯಗಳಲ್ಲಿ ಮನಸ್ಸು ಬಂದ ಹಾಗೆ ನಡೆದು ಕೊಳ್ಳುತ್ತಾರೆ. ಅವರು ಲೋಕವನ್ನು ಪ್ರೀತಿ ಮಾಡಿ, ದೇವರನ್ನು ಪ್ರೀತಿ ಮಾಡುವದಿಲ್ಲ. ತಾವು ಪಾಪಿಗಳೆಂದು ತಿಳು ಕೊಳ್ಳದೆ, ಪಾಪಿಗಳ ರಕ್ಷಕನಾದ ಯೇಸುವನ್ನು ಸತ್ಯದಿಂದ ಆಶ್ರೈಸಿ ಕೊಳ್ಳುವದಿಲ್ಲ. ಕ್ರಿಸ್ತನ ಹೆಸರೇ ಅವರಿಗೆ ಸಾಕು, ಕ್ರಿಸ್ತನ ಪರಿಚಯ ಬೇಕಾಗಿರುವದಿಲ್ಲ. ಕ್ರಿಸ್ತನಲ್ಲಿ ಇರುವದು ಏನೆಂದು ಅವರು ಎಷ್ಟು ಮಾತ್ರವೂ ಗ್ರಹಿಸಿ ಕೊಳ್ಳದೆ, ಕ್ರಿಸ್ತನನ್ನು ಪ್ರೀತಿ ಮಾಡಿ ಆತನ ಅನ್ಯೋನ್ಯಕ್ಕೆ ಅನೇಕರಾದ ಶಿಷ್ಯರು ಭಕ್ತಿಭ್ರಾಂತರೆಂದು ಬೈಯ್ಯುತ್ತಾರೆ.

ಸಭಾಸಕ್ತರಾದ ಕ್ರೈಸ್ತರು ಸಹ ಕ್ರಿಸ್ತನ ಸಲಿಗೆಗೆ ದೂರವಾಗಿದ್ದಾರೆ. ಯೇಸು ಕ್ರಿಸ್ತನನ್ನು ನಂಬಿ, ಪ್ರೀತಿ ಮಾಡಿ, ಸೇವಿಸುವವರೇ ಸತ್ಯ ಸಭೆಯವರಾಗಿದ್ದಾರೆಂಬುವದನ್ನು ತಿಳಿಯದೆ, ಸಭೆಯಲ್ಲಿ ಶೇರಿದವರೇ ಕ್ರಿಸ್ತನ ರಕ್ಷಣೆಯಲ್ಲಿ ಪಾಲುಗಾರರಾಗಿದ್ದಾರೆಂದು, ನೆನಸುತ್ತಾರೆ. ಆದದರಿಂದ ಅವರಿಗೆ ಸಭೆಯ ಘನತೆಯೇ ಮುಖ್ಯವಾದದ್ದೆಂದು ತೋಚುತ್ತದೆ. ಸಭೆಯ ಬೋಧನೆಯನ್ನು ಕಲಿತು ಕೊಳ್ಳುವದು ಸಭೆಯ ನೇಮ ನಿಷ್ಠೆಗಳನ್ನು ಕೈಕೊಳ್ಳುವದು ಸಭೆಯ ಅಧಿಕಾರಿಗಳಿಗೆ ವಿಧೇಯವಾಗಿರುವದು ಇಂಥಾದ್ದೇ ಮುಖ್ಯವೆಂದು ಎಣಿಕೆ ಮಾಡಿ, ನಿತ್ಯಜೀವವನ್ನು ಹೊಂದ ಬೇಕೆಂದು, ಅಪೇಕ್ಷಿಸುವದಿಲ್ಲ. ಒಬ್ಬೊಬ್ಬನು ತಾನು ಕ್ರಿಸ್ತನ ಹತ್ತರ ಬಂದು, ವಿಶ್ವಾಸದಿಂದಲೂ ಪ್ರೀತಿಯಿಂದಲೂ ಆತನ ಐಕ್ಯದಲ್ಲಿ ಶೇರ ಬೇಕೆಂಬುವದನ್ನು ಲಕ್ಷ ಮಾಡುವದಿಲ್ಲ. ಕ್ರಿಸ್ತನಿಗಿಂತ ಸಭೆಯೇ ದೊಡ್ಡದೆಂದು ಅವರಿಗೆ ಕಾಣುತ್ತದೆ. ಆದರೆ ಆ ಕಿವುಡ ಮೂಕನು ಗುಂಪಿನಲ್ಲಿ ಶೇರಿದದರಿಂದಲ್ಲ, ಯೇಸು ಕ್ರಿಸನ ಬಳಿಗೆ ಬಂದದರಿಂದ ಕ್ಷೇಮಿಯಾದನು.

೨. ರಕ್ಷಣೆಯನ್ನು ಹೊಂದ ಅಪೇಕ್ಷಿಸುವವರು ಒಮ್ಮೆಯಾದರೂ ಕ್ರಿಸ್ತನ ಸಂಗಡ ಏಕಾಂತವಾಗಿರ ಬೇಕೆಂಬುವದು ಈ ಚರಿತ್ರೆಯಲ್ಲಿ ಕಾಣುವ ಎರಡನೇ ಕಟ್ಟಳೆಯಾಗಿದೆ.

ಆ ಕಿವುಡನು ಸ್ಥಳವನ್ನೂ ವಾಡಿಕೆಯಾದ ಜೀವವನ್ನೂ ಬಿಟ್ಟು, ಯೇಸುವಿನ ಮುಖಕೆ ಎದುರಾಗಿ ನಿಲ್ಲ ಬೇಕಾಗಿದ್ದ ಪ್ರಕಾರ, ಯೇಸುವಿನ ಕೃಪೆಯನ್ನು ಪಡ ಕೊಳ್ಳ ಅಪೇಕ್ಷಿಸುವವರು ಮಾಡ ಬೇಕು.

ರೂಢಿಯಾದ ಮಾರ್ಗದಿಂದ ತತ್ಕಾಲಕ್ಕೆ ತೊಲಗಿ, ಹೊಸತ್ತಾಗಿ ಕಂಡ ಕಾಲಹಾದಿಯಲ್ಲಿ ಶೇರ ಬೇಕು. ಯಾಕಂದರೆ, ಲೋಕವೆಲ್ಲಾ ನಡೆಯುವ ಮಾರ್ಗದಲ್ಲಿ ನಡೆಯುವವರಿಗೆ ಮುಕ್ತಿ

ದೊರಕಲಾರದು; ಜೀವವನ್ನು ಪಡ ಕೊಳ್ಳ ಬೇಕಾದರೆ, ಇಕ್ಕಟ್ಟಿನ ಬಾಗಲಿನಿಂದ ಚಿಕ್ಕ ಹಾದಿಯಲ್ಲಿ ಶೇರ ಬೇಕೆಂದು, ಯೇಸು ಕ್ರಿಸ್ತನು ಪರ್ವತಪ್ರಸಂಗದಲ್ಲಿ ಹೇಳಿದನು. ವಾಡಿಕೆಯಾದ ಕೆಲಸಗಳನ್ನು ತತ್ಕಾಲಕ್ಕೆ ನಿಲ್ಲಿಸಿ, ಮುಂದಣ ಗತಿ ಕಾಣ ಬೇಕೆಂಬ ಆಶೆಗೆ ಪೂರ್ಣ ಮನಸ್ಸು ಕೊಟ್ಟು, ಆಸಕ್ತಿಯಿಂದ ವಿಚಾರ ಮಾಡ ಬೇಕು. ಇಲ್ಲದಿದ್ದರೆ, ಇಷ್ಟಾರ್ಥವು ಆತ್ಮಕ್ಕೆ ದೊರಕುವದಿಲ್ಲ. ಅರಸುವಂಗರಸುವದು ಮೋಕ್ಷವೆಂದು ಗಾದೆಯಲ್ಲಿ ಹೇಳುತ್ತದೆ. ಹುಡಿಕಿರಿ, ಹುಡಿಕಿದರೆ ದೊರಕುವದು ಎಂದು ಯೇಸು ಕ್ರಿಸ್ತನು ಹೇಳಿದನು. ಬಳಿಕೆಯಾದ ಜೊತೆಗಾರರ ಸಂಗತಿಯನ್ನು ತತ್ಕಾಲಕ್ಕೆ ಬಿಡ ಬೇಕು. ಇಲ್ಲದಿದ್ದರೆ, ದೇವರ ವಾಕ್ಯವನ್ನು ಗ್ರಹಿಸಿ ಕೊಳ್ಳಲಿಕ್ಕೆ ಅವಶ್ಯವಾದ ಶಾಂತಿ ಜೀವಾತ್ಮಕ್ಕೆ ಶಿಕ್ಕುವದಿಲ್ಲ. ಯೇಸು ಕ್ರಿಸ್ತನು ನೆಂಟರಿಷ್ಟರನ್ನು ಬಿಟ್ಟು ಬಿಡಲೊಲ್ಲದವನು ತನ್ನ ಶಿಷ್ಯನಾಗಲಾರನೆಂದು, ಹೇಳಿದನು. ಹೀಗಿರಲಾಗಿ ತನ್ನ ರಾಜ್ಯಕ್ಕೆ ಬಾಧ್ಯಸ್ಥರಾಗುವದಕ್ಕೆ ಆದು ಕೊಂಡ ಮಕ್ಕಳಿಗೆ ದೇವರು ನಾನಾ ಪ್ರಕಾರವಾಗಿ ಸಹಾಯ ಮಾಡುತ್ತಾನೆ. ಹ್ಯಾಗಂದರೆ: ಒಬ್ಬನು ರೋಗದಲ್ಲಿ ಬಿದ್ದು, ಉದ್ಯೋಗ ವ್ಯವಹಾರ ವೃತ್ತಿಯನ್ನು ನಡಿಸಲಾರದೆ ಬಿಡುತ್ತಾನೆ. ಒಬ್ಬನಿಗೆ ಬಡತನವೂ ಅವಮಾನವೂ ಬಂದಲ್ಲಿ ಮುಂಚಿನ ಸ್ನೇಹಿತರು ಅವನ ಗೊಡವೆಗೆ ಹೋಗುವದಿಲ್ಲ. ಒಬ್ಬನು ಯಾವದಾದರೂ ಒಂದು ಕಾರಣದಿಂದ ಸ್ವಸ್ಥಳವನ್ನು ಬಿಟ್ಟು ಪರದೇಶದಲ್ಲಿ ವಾಸ ಮಾಡ ಬೇಕಾಗಿರುವದರಿಂದ, ಹಿಂದಿನ ಉದ್ಯೋಗವನ್ನೂ ಚಿಕ್ಕಂದಿನಿಂದ ಇದ್ದ ಜೊತೆಗಾರರನ್ನೂ ಅಗಲ ಬೇಕು. ಒಬ್ಬನು ತಾನು ಪಾಪಿ ಎಂಬುವದನ್ನು ಗ್ರಹಿಸಿ ತಿಳಕೊಂಡು, ತಾನು ಮಾಡಿದ ಅಪರಾಧಗಳನ್ನು ಬಿಡದೆ ಎಣಿಕೆ ಮಾಡುತ್ತಾ ಪಶ್ಚಾತ್ತಾಪ ಪಡುತ್ತಾ ಮನುಷ್ಯರ ಗದ್ದಲವನ್ನೂ ಇಷ್ಟರ ಸಹವಾಸವನ್ನೂ ತಾಳಲಾರದೆ, ಒಂಟಿಯಾಗುತ್ತಾನೆ. ಹ್ಯಾಗಾದರೂ ಪ್ರಪಂಚಕ್ಕೆ ತಪ್ಪಿಸಿ ಕೊಂಡು, ದೇವರ ಕೃಪೆಯನ್ನು ಪಡ ಕೊಳ್ಳ ಬೇಕೆಂಬ ಮನುಷ್ಯನು ಒಮ್ಮೆಯಾದರೂ ಏಕಾಂತನಾಗ ಬೇಕು.

ಮುಮುಕ್ಷು ಏಕಾಂತನಾದ ವೇಳೆಯಲ್ಲಿ ಯೇಸು ಕ್ರಿಸ್ತನ ಬಳಿಗೆ ಬಂದು, ಮುಖಾಮುಖಿಯಾಗಿ ಸಂಭಾಷಣೆ ಮಾಡುವವನಂತೆ ಆತನ ಸಲಿಗೆಯಲ್ಲಿ ಶೇರ ಬೇಕು. ಆತನು ತನ್ನನ್ನು ಹುಡುಕುವವರನ್ನು ಹುಡುಕುತ್ತಾನೆ. ತನ್ನನ್ನು ಕಾಣ ಬೇಕೆಂದು ಇರುವವರಿಗೆ ಕಾಣಿಸಿ ಕೊಳ್ಳುತ್ತಾನೆ. ಪ್ರಶ್ನೆ ಕೇಳುವವರಿಗೆ ಉತ್ತರ ಕೊಡುತ್ತಾನೆ. ವಿಧೇಯರಾದ ಶಿಷ್ಯರಿಗೆ ಬೋಧನೆ ಹೇಳುತ್ತಾನೆ. ಮೊರೆ ಇಡುವವರಿಗೆ ಸಹಾಯಕನಾಗಿದ್ದಾನೆ. ಈತನ ಪರಿಚಿತಿ ಹೊಂದ ಬೇಕಾದರೆ, ಬೇರೆ ಪರಿಚಯವನ್ನೆಲ್ಲಾ ಬಿಟ್ಟು, ಈತನನ್ನೆ ಕೂಡಿ ಕೊಳ್ಳ ಬೇಕು. ಯೇಸು ಕ್ರಿಸ್ತನ ಗುರ್ತು ತಿಳಿದವರಿಗೆ ಮಾತ್ರ ದೇವರ ರಾಜ್ಯದಲ್ಲಿ ಪ್ರವೇಶ ದೊರಕುವದು. ಪರ್ವತಪ್ರಸಂಗದಲ್ಲಿ (ಮತ್ತಾಯ. ೭, ೨೦.) ಕಡೇ ದಿನದಲ್ಲಿ ದೇವರ ರಾಜ್ಯದಿಂದ ತಳ್ಳಿ ಹೋಗುವವರಿಗೆ ನಿಮ್ಮ ಗುರ್ತು ನಾನು ಕಾಣಲಿಲ್ಲವೆಂದು ಹೇಳುವನು.

೩. ಯೇಸು ನತ್ತಿ ಮಾತಾಡುವ ಕಿವುಡನಿಗೆ ಎಪ್ಫಥಾ ಎಂದು ಹೇಳುತ್ತಲೇ ಅವನ ಕಿವಿ ತೆರೆದು ಹೋಗಿ, ಅವನ ನಾಲಿಗೆ ಸಡಲವಾಯಿತು. ಅವನು ಕೇಳಿದ ಮೊದಲನೇ ಶಬ್ದ ಯೇಸು ಉಚ್ಚರಿಸಿದ ಎಪ್ಫಥಾ ಎಂಬುವದೇ. ವಾಕ್ಯವು ಯೇಸು ಕ್ರಿಸ್ತನು ಮಾಡುವ ರಕ್ಷಣೆಯ ಕಾರಣವಾಗೆದೆ. ಅಪೊಸ್ತಲನಾದ ಪೌಲನು ರೋಮಿಯರ ಪತ್ರಿಕೆಯ ೧೦ನೇ ಸಂಧಿಯ ೧೩ನೇ

ಮುಂತಾದ ವಚನಗಳಲ್ಲಿ ಬರೆದದ್ದು, ಯಾರು ಕರ್ತನ ಹೆಸರನ್ನು ಕರೆಯುವರೋ, ಅವರೆಲ್ಲರು ರಕ್ಷಣೆಯನ್ನು ಪಡ ಕೊಳ್ಳುವರು. ಹಾಗಾದರೆ ತಾವು ವಿಶ್ವಾಸಿಸದವನನ್ನು ಹ್ಯಾಗೆ ಕರೆಯುವರು? ತಾವು ಕೇಳದವನನ್ನು ಹ್ಯಾಗೆ ವಿಶ್ವಾಸಿಸುವರು? ಸಾರುವವನಿಲ್ಲದೆ, ಹ್ಯಾಗೆ ಕೇಳುವರು? ಈ ಯಥೋಕ್ತದಲ್ಲಿ ವಾಕ್ಯವನ್ನು ಕೇಳದೆ ಯಾರೂ ರಕ್ಷಣೆಯನ್ನು ಪಡಕೊಳ್ಳ ಕೂಡದೆಂದು, ಪ್ರಕಟವಾಗಿ ತೋರುತ್ತದೆ. ವಾಕ್ಯವನ್ನು ಕೇಳುವದೇ ಮುಖ್ಯ. ಈ ಮಾತಿನ ಅರ್ಥವನ್ನು ಚನ್ನಾಗಿ ತಿಳ ಕೊಳ್ಳ ಬೇಕು. ವಾಕ್ಯವು ಏನು? ಕೇಳುವದು ಏನು?

ಕೇಳುವವನನ್ನು ರಕ್ಷಿಸ ಸಮರ್ಥವಾದ ವಾಕ್ಯವು ಯಾವದು? ಯಾಕೋ. ೧, ೨೧. ಯೇಸು ಕ್ರಿಸ್ತನ ವಾಕ್ಯವು. ದೇವರ ಸಾಕ್ಷಿ ಏನಂದರೆ, ದೇವರು ನಮಗೆ ನಿತ್ಯಜೀವವನ್ನು ಕೊಟ್ಟಿದ್ದಾನೆ; ಈ ಜೀವವು ಅವನ ಮಗನಲ್ಲಿ ಉಂಟು ಎಂಬುವದೇ. ಮಗನನ್ನು ಹೊಂದುವವನು ಜೀವವನ್ನು ಹೊಂದುತ್ತಾನೆ. ದೇವರ ಮಗನನ್ನು ಹೊಂದದವನು ಜೀವವನ್ನು ಹೊಂದದವನಾಗಿದ್ದಾನೆಂದು, ಯೋಹಾನನು ಬರೆಯುತ್ತಾನೆ. ಈ ಮಾತಿನ ಪ್ರಕಾರ ತನ್ನ ಮಗನಾದ ಯೇಸು ಕ್ರಿಸ್ತನ ವಿಷಯವಾಗಿ ದೇವರು ಕೊಡುವಂಥಾ ಜೀವಕರವಾದ ಸಾಕ್ಷಿ ಕ್ರಿಸ್ತನ ವಾಕ್ಯವೆಂದು, ಬರಹದ ಅನೇಕ ಸ್ಥಳಗಳಲ್ಲಿ ಹೆಸರ್ಗೊಂಡದೆ; ರಕ್ಷಣೆಯನ್ನು ಹೊಂದ ತಕ್ಕ ಪಾಪಿಗಳ ಹೃದಯಗಳಲ್ಲಿ ಅದು ಬರಹದ ಮೂಲವಾಗಿಯೂ ಮನುಷ್ಯರಾದ ಸಾಕ್ಷಿಗಳ ಬಾಯಿ ಮೂಲಕವಾಗಿಯೂ ಪ್ರಕಟವಾಗುತ್ತದೆ. ಹಳೇ ಹೊಸ ಒಡಂಬಡಿಕೆಗಳ ಗ್ರಂಥಗಳಲ್ಲಿ ಜೀವ ನಿಕ್ಷೇಪವಾಗಿಟ್ಟದೆ. ಬರಹವೆಂಬ ನೆಲದಲ್ಲಿ ಜಾಗ್ರತೆಯಾಗಿ ತೋಡುವವರಿಗೆ ದೊರಕುತ್ತದೆ. ದೇವರ ವಾಕ್ಯವೆಂಬ ಯೇಸು ಕ್ರಿಸ್ತನು ಅದರ ಮುಖಾಂತರವಾಗಿ ತನ್ನನ್ನು ಪ್ರಕಟ ಮಾಡುತ್ತಾನೆ. ಅದನ್ನು ಸಾರುವದಕ್ಕೆ ನೇಮಕವಾದ ಸಭೆಯ ಬೋಧಕರು ಕೇಳುವವರೆಲ್ಲರಿಗೆ ಲೋಕದ ನಾನಾ ವಿಧವಾದ ಭಾಷೆಗಳಲ್ಲಿ ಅದನ್ನು ತಿಳಿಸುತ್ತಾ ಬರುತ್ತಾರೆ. ಅವರಲ್ಲಿ ಅನೇಕರು ಕಾಲಕ್ಷೇಪಕ್ಕಾಗಿ ಉದ್ಯೋಗವನ್ನು ನಡಿಸಿ, ಅದರ ಅಭಿಪ್ರಾಯವನ್ನು ಸತ್ಯದಿಂದ ತಿಳಕೊಳ್ಳದೆ, ಬೇರೆ ಬೇರೆ ಜನಾಂಗಗಳಲ್ಲಿ ಪ್ರಸಂಗಿಸುತ್ತಾರೆ. ಇಂಥವರು ನಿಜ ವಿಶ್ವಾಸವಿಲ್ಲದೆ ಪ್ರಸಂಗ ಮಾಡಿದರೂ ಅವರ ಅವಿಶ್ವಾಸದಿಂದ ಜೀವದ ವಾಕ್ಯದ ಬಲವು ಕೆಟ್ಟು ಹೋಗುವದಿಲ್ಲ. ಆದರೆ ಎಲ್ಲೆಲ್ಲಿಯೂ ನಂಬಿಗಸ್ಥರಾಗಿ ಅದನ್ನು ಸಾರುವ ಬೋಧಕರು ಸಹ ದೊರಕುತ್ತಾರೆ. ಇವರ ಹೊರ್ತು ವಾಕ್ಯವನ್ನು ವಿಶ್ವಾಸಿಸಿ, ವಾಕ್ಯದ ಬಲವನ್ನು ಅನುಭವಿಸಿ ಕೊಂಡು, ರಕ್ಷಣೆಯ ಮರ್ಮವನ್ನು ಗ್ರಹಿಸಿ ಕೊಂಡ ಸತ್ಯವಾದ ಶಿಷ್ಯರು ಸಹ ಜೊತೆಯವರಾದ ಪಾಪಿಗಳಿಗೆ ಕ್ರಿಸ್ತನ ವಾಕ್ಯವನ್ನು ವಿಶ್ವಾಸದ ದೃಢದಿಂದಲೂ ಪ್ರೀತಿಯ ಆಸಕ್ತಿಯಿಂದಲೂ ತಿಳಿಸುತ್ತಾರೆ. ಇವರೆಲ್ಲರ ಮುಖಾಂತರವಾಗಿ ಕೆಟ್ಟು ಹೋದದ್ದನ್ನು ರಕ್ಷಿಸ ಹುಡುಕುವಂಥ ಪಾಪಿಗಳ ರಕ್ಷಕನಾಗಿರುವ ಯೇಸು ಕ್ರಿಸ್ತನು ತನಗೆ ತಾನೇ ಸಾಕ್ಷಿ ಕೊಡುವದರಿಂದ, ಈ ರಕ್ಷಣೆಯ ವಾಕ್ಯವು ಕ್ರಿಸ್ತನ ವಾಕ್ಯವೆಂದು, ಹೆಸರ್ಗೊಳ್ಳ ತಕ್ಕದ್ದು.

ಈ ವಾಕ್ಯವನ್ನು ಕಿವಿಯಿಂದ ಕೇಳುವದು ಮಾತ್ರವೇ ಸಾಲದು; ಈ ಪ್ರಕಾರವಾಗಿ ಕೇಳುವವರು ಅದನ್ನು ಬೇಗ ಮರೆತು ಬಿಡುವದರಿಂದ, ಅದು ಸಫಲವಾಗುವದಿಲ್ಲ. ಅದನ್ನು ಚನ್ನಾಗಿ ನೆನಪು ಮಾಡಿ ಕೊಂಡರೂ ನಂಬದೆ, ಕೈಕೊಳ್ಳದೆ, ಇರುವವರಿಗೆ ಅದು ನಿಷ್ಪ್ರಯೋಜಕ

ವಾಗೆದೆ. ಅದನ್ನು ಪಾಠ ಮಾಡಿ, ಅದರ ಬೋಧನೆಗಳನ್ನು ಬುದ್ಧಿಯಿಂದ ಮಾತ್ರ ಕಲಿತು ಕೊಳ್ಳುವದು ಸಾಲದು. ಚನ್ನಾಗಿ ಅಭ್ಯಾಸ ಮಾಡಿ ಕೊಂಡು, ಯಥಾ ಪ್ರಕಾರವಾಗಿ ಸಾರುವವರಲ್ಲಿ ಅನೇಕರು ಆಗದವರಾಗುತ್ತಾರೆ. ಅದರ ಮೂಲವಾಗಿ ರಕ್ಷಣೆಯನ್ನು ಪಡ ಕೊಳ್ಳಬೇಕಾದರೆ, ಅದನ್ನು ಪೂರ್ಣ ಹೃದಯದ ಆಶೆಯಿಂದ ಕೇಳಿ, ಯಥಾರ್ಥವಾದ ಹೃದಯದಿಂದ ಅಂಗೀಕರಿಸ ಬೇಕು. ಈ ರೀತಿಯಿಂದ ಅದನ್ನು ಗ್ರಹಿಸಿ ಕೊಳ್ಳುವವರ ಹೃದಯದಲ್ಲಿ ಅದು ಸತ್ತವರನ್ನು ಬದುಕಿಸುವಂಥ ದೇವರ ಬಲವಾಗಿ ತೋರುತ್ತದೆ. ಇಂಥವರಲ್ಲಿ ಯೇಸು ಕ್ರಿಸ್ತನ ವಾಕ್ಯವು ಜೀವದ ಬಲವಾಗಿ, ಆಶ್ಚರ್ಯ ರೀತಿಯಿಂದ ಪ್ರಕಟವಾಗುತ್ತದೆ. ಆ ಕಿವುಡನು ಎಪ್ಫಥಾ ಎಂಬ ಒಂದೇ ವಾಕ್ಯವನ್ನು ಮೊದಲಾಗಿ ಕೇಳಿದ ಪ್ರಕಾರ ಅವರು ಒಂದೇ ವಾಕ್ಯವನ್ನು ಮಾತ್ರ ಆರಂಭದಲ್ಲಿ ಚನ್ನಾಗಿ ಕೇಳಿದರೂ ಅವರು ಎಚ್ಚತ್ತು, ಮರಣದಿಂದ ಎದ್ದು, ಜೀವದಲ್ಲಿ ಶೇರಿ, ಯೇಸು ಕ್ರಿಸ್ತನ ಆತ್ಮವನ್ನು ಹೊಂದಿದವರಾಗಿ, ನಂಬುವವರಿಗೆ ಸತ್ಯವನ್ನೆಲ್ಲಾ ಕ್ರಮದಿಂದ ತಿಳಿಸುವ ಈ ಆತ್ಮದ ಬೋಧನೆಯಿಂದ ಸುವಾರ್ತೆಯ ಅಭಿಪ್ರಾಯವನ್ನೆಲ್ಲಾ ತಕ್ಕ ಹಾಗೆ ಗ್ರಹಿಸಿ ಕೊಳ್ಳುತ್ತಾರೆ.

೪. ಯೇಸು ಕ್ರಿಸ್ತನು ತಾನು ರಕ್ಷಣೆಯ ಕಾರ್ಯವನ್ನು ನಡಿಸುತ್ತಾನೆಂಬುವದು ನಾಲ್ಕನೇ ಕಟ್ಟಳೆ. ಪಾಪಿಗಳಾದ ಮನುಷ್ಯರು ತಮ್ಮನ್ನು ತಾವೇ ರಕ್ಷಿಸಿ ಕೊಳ್ಳಲಾರರು; ಮನುಷ್ಯರು ಒಬ್ಬರನ್ನೊಬ್ಬರು ರಕ್ಷಿಸಲಾರರು; ನಮ್ಮ ಸುವಾರ್ತೆಯಲ್ಲಿ ಕಾಣುವಂಥಾ ನತ್ತಿ ಮಾತಾಡುವ ಕಿವುಡನು ತನ್ನ ಕಿವಿಯನ್ನು ತಾನು ತೆರದು ತನ್ನ ನಾಲಿಗೆಯನ್ನು ತಾನು ಸಡ್ಲಿಸಲಿಕ್ಕೆ ಶಕ್ತನಾಗಿರಲಿಲ್ಲ; ಅವನನ್ನು ಕರುಣಿಸಿ ಕರತಂದ ಮನುಷ್ಯರು ಅವನನ್ನು ಸ್ವಸ್ಥ ಮಾಡಲಾರದೆ, ಕ್ರಿಸ್ತನ ಬಳಿಗೆ ಕರ ಕೊಂಡು ಬಂದರು. ಆತನು ಅವನನ್ನು ಸ್ವಲ್ಪ ದೂರಕ್ಕೆ ಕರ ಕೊಂಡು ಹೋಗಿ, ಅವನ ಕಿವಿಯನ್ನೂ ನಾಲಿಗೆಯನ್ನೂ ಮುಟ್ಟಿ, ಆಕಾಶಕ್ಕೆ ಕಣ್ಣೆತ್ತಿ, ನೆಟ್ಟುಸುರಿಟ್ಟು, ಎಪ್ಫಥಾ ಎಂದು ಹೇಳಿ, ಅವನ ಕಿವಿಯನ್ನು ತೆರೆದು, ಅವನ ನಾಲಿಗೆಯನ್ನು ಸಡ್ಲಿಸಿ, ಆಗಲೇ ಅವನನ್ನು ಸ್ವಸ್ಥ ಮಾಡಿದನು. ಅದು ಅದ್ಭುತ ಕಾರ್ಯವೆಂದು ನೋಡಿದವರಿಗೆ ತೋರಿತು. ಯೇಸು ಕ್ರಿಸ್ತನ ವಾಕ್ಯವಾದ ಸುವಾರ್ತೆಯು ವಿಶ್ವಾಸಿಸುವವರಲ್ಲಿ ಯಾವಾಗಲೂ ಆಶ್ಚರ್ಯವಾದ ದೇವರ ಬಲವಾಗಿ ಕಾಣುತ್ತದೆ.

ಮನುಷ್ಯರು ಆಗಾಗ್ಯೆ ಬೇರೆ ಬೇರೆ ಕಾರಣದಿಂದ ಮುಂಚಿನ ದುರ್ನಡತೆಗಳನ್ನು ಬಿಟ್ಟು, ಮುಂಚಿನ ಪಾಪಗಳನ್ನು ತ್ಯಜಿಸಿ, ಭಕ್ತಿಯ ಮಾರ್ಗದಲ್ಲಿ ಶೇರಿ, ಭಕ್ತರನ್ನಿಸಿ ಕೊಳ್ಳುತ್ತಾರೆ. ಕೆಲವರು ಪಾಪಾಚಾರದಿಂದ ಹುಟ್ಟುವ ನಷ್ಟವನ್ನು ಅನುಭವಿಸಿ ಕೊಂಡು, ಹೀಗೆ ಪೂರ್ಣವಾಗಿ ಕೆಟ್ಟು ಹೋಗುತ್ತೇವೆಂದು, ಪಾಪದ ಮೋಸಕ್ಕೆ ಭಯ ಪಟ್ಟು, ಗುಣವಾಗುತ್ತಾರೆ. ಕೆಲವರು ದೇವರ ವಾಕ್ಯದ ಬೋಧನೆಗಳನ್ನು ಕಲಿತು ಕೊಂಡು, ನೀತಿಯ ಮಾರ್ಗವನ್ನು ನೋಡಿ, ದೇವರ ನ್ಯಾಯಕ್ಕೆ ಒಪ್ಪಿ ಕೊಂಡು, ಅಜ್ಞಾನದ ದುರ್ನಡತೆಯನ್ನು ಬಿಟ್ಟು, ಸನ್ಮಾರ್ಗದಲ್ಲಿ ಶೇರುತ್ತಾರೆ. ಕೆಲವರು ಮನಸ್ಸಾಕ್ಷಿಯಿಂದಲೂ ದೇವರ ವಾಕ್ಯದಿಂದಲೂ ಎಚ್ಚರಿಸಲ್ಪಟ್ಟು, ಸರ್ವಜ್ಞನಾಗಿಯೂ ಪರಿಶುದ್ಧನಾಗಿಯೂ ಇರುವ ಸರ್ವತ್ರಾಣಿಯಾದ ಕರ್ತನು ಕಡೇ ದಿವಸದಲ್ಲಿ ಪಾಪಿಗಳಿಗೆ ಮಾಡುವ ತೀರ್ಪಿಗೆ ಭಯ ಪಟ್ಟು, ಈ ಭಯದಿಂದ ಬುದ್ಧಿವಂತರಾಗಿ, ತಮ್ಮ ನಡತೆಯನ್ನು

ತಿದ್ದುತ್ತಾರೆ. ಇಂಥವರೆಲ್ಲರು ವಿಶ್ವಾಸವಿಲ್ಲದೆ, ಹೆಚ್ಚು ಕಡಿಮೆ ಗುಣವಾಗುತ್ತಾರೆ. ಇದರಲ್ಲಿ ಏನೂ ಆಶ್ಚರ್ಯವಿಲ್ಲ. ಅವರಲ್ಲಿ ಕ್ರಿಸ್ತನ ಕೃಪೆಯ ಬಲವು ಕಾಣುವದಿಲ್ಲ. ಅವರು ಇಂಥ ಅಂಥ ಸಹಜವಾದ ಕಾರಣಗಳಿಂದ ಸಜ್ಜನರಾಗುತ್ತಾರಷ್ಟೆ; ಇಂಥವರಿಗೆ ರಕ್ಷಣೆ ಪ್ರಾಪ್ತವಾಗುವದೆಂದು, ದೇವರ ವಾಕ್ಯವು ಹೇಳುವದಿಲ್ಲ. ರಕ್ಷಣೆಯನ್ನು ಹೊಂದ ತಕ್ಕವರನ್ನು ಯೇಸು ಕ್ರಿಸ್ತನು ತಾನು ಎಚ್ಚರಿಸಿ, ಮಾನಸಾಂತರ ಪಡಿಸಿ, ಸ್ವಾಭಾವಿಕ ಮಾರ್ಗದಿಂದಲ್ಲ, ಆಶ್ಚರ್ಯವಾದ ಕೃಪೆಯ ಬಲದಿಂದಲೇ ರಕ್ಷಿಸುತ್ತಾನೆ.

ಯೇಸು ಕ್ರಿಸ್ತನ ಬಲದಿಂದಲೇ ರಕ್ಷಣೆಯನ್ನು ಹೊಂದುವ ಪಾಪಿಗಳು ಪರಿಚಿತರಿಗೂ ತಮಗೂ ಚೋದ್ಯವಾಗಿ ತೋರುವ ರೀತಿಯಿಂದ ತಮ್ಮ ಪಾಪಗಳಿಂದ ಬಿಡುಗಡೆಯಾಗಿ, ದೇವರ ನೀತಿಯನ್ನು ಪಡ ಕೊಂಡು, ಮಾರ್ಪಡುತ್ತಾರೆ. ಅವರು ಯೇಸು ಕ್ರಿಸ್ತನನ್ನು ವಿಶ್ವಾಸಿಸಿ, ಪ್ರೀತಿಯಿಂದ ಅವನಿಗೆ ವಶವಾಗಿ, ಅವನ ಆತ್ಮವನ್ನು ಹೊಂದಿ, ಹೊಸ ಹೃದಯವನ್ನು ಪಡ ಕೊಳ್ಳುತ್ತಾರೆ. ಅವರ ನಡತೆಯೂ ಬುದ್ಧಿಯೂ ಭಾಷೆಯೂ ಮಾತ್ರವಲ್ಲ, ಅವರ ಗುಣವೆ ಬೇರೆಯಾಗುವದು. ಮುಂಚೆ ಪ್ರೀತಿ ಮಾಡಿದ್ದನ್ನು ಹಗೆ ಮಾಡಿ, ಮುಂಚೆ ರುಚಿಯಾಗಿದ್ದದ್ದನ್ನು ಹೇಸಿ, ಮುಂಚೆ ಹಗೆ ಮಾಡಿದ್ದನ್ನು ಪ್ರೀತಿ ಮಾಡಿ, ಮುಂಚೆ ಹೇಸಿದ್ದಕ್ಕೆ ಮೆಚ್ಚಿ, ಮುಂಚೆ ತಾಳಲಾರದ್ದನ್ನು ಸಂತುಷ್ಟರಾಗಿ ತಾಳಿ, ಮುಂಚೆ ಮಾಡಲಾರದ್ದನ್ನು ಆಸಕ್ತಿಯಿಂದ ಮಾಡಿ, ಹೊಸ ಮನುಷ್ಯರಾಗಿದ್ದಾರೆ. ಒಬ್ಬನು ಯೇಸು ಕ್ರಿಸ್ತನ ಐಕ್ಯದಲ್ಲಿ ಸತ್ಯದಿಂದ ಶೇರಿದ್ದಾದರೆ, ಹೊಸ ಸೃಷ್ಟಿಯಾಗಿದ್ದಾನೆ. ಹಳೆದು ಕಳೆದು ಹೋಯಿತು, ಎಲ್ಲಾ ಹೊಸದಾಗೆದೆ.

ಯೇಸು ಕ್ರಿಸ್ತನನ್ನು ಹೃದಯದಿಂದ ನಂಬಿ, ಆತನ ಆತ್ಮವನ್ನು ಹೊಂದಿದವನು ನೂತನ ಜನ್ಮಿಯಾಗುತ್ತಾನೆ. ದೇವರ ಬಲದಿಂದ ಉಂಟಾಗುವ ಭಾವಾಂತರವು ತ್ವರಿತವಾಗಿ ಉಂಟಾಗುವ ಆಶ್ಚರ್ಯ ಕಾರ್ಯವಾಗೆದೆ. ದೇವರ ಮಕ್ಕಳ ಜನ್ಮವು ತಾಯಿಯ ಗರ್ಭದಿಂದ ಹುಟ್ಟುವ ಮಕ್ಕಳ ಜನ್ಮಕ್ಕೆ ಅನುಸಾರವಾದದ್ದೆಂದು ಬರಹದಲ್ಲಿ ಹೇಳಿಯದೆ. ಶಿಶುಗಳು ಜನಿಸುವದಕ್ಕಿಂತ ಮುಂಚೆ ತಾಯಿಯ ಗರ್ಭದಲ್ಲಿ ಒಂಭತ್ತು ತಿಂಗಳು ವಾಸ ಮಾಡಿದರೂ, ಕಡೆಯಲ್ಲಿ ಫಕ್ಕನೆ ಹುಟ್ಟುತ್ತವೆ. ಅದೇ ಪ್ರಕಾರವಾಗಿ, ಆತ್ಮದಿಂದ ಹೊಸತ್ತಾಗಿ ಹುಟ್ಟುವ ದೇವರ ಮಕ್ಕಳು ಕ್ರಿಸ್ತನ ವಾಕ್ಯವನ್ನು ಕೇಳಿ, ಅದರ ಬಲವನ್ನು ಅನುಭವಿಸಿ ಕೊಂಡು, ತಮ್ಮ ಪಾಪಗಳ ವಿಮೋಚನೆಯ ಬಲಿಯಾಗಿ ಸತ್ತ ಯೇಸುವನ್ನು ನಂಬಿ, ಮಾನಸಾಂತರ ಪಟ್ಟು, ಲೋಕವನ್ನೂ ಪಾಪವನ್ನೂ ಬಿಟ್ಟು ಬಿಟ್ಟು, ಪ್ರೀತಿಯಾಗಿರುವ ತಂದೆಯಾದ ದೇವರಿಗೆ ತಮ್ಮನ್ನು ಒಪ್ಪಿಸಿ ಕೊಟ್ಟು, ಆ ಮೇಲೆ ನೂತನ ಜೀವದಲ್ಲಿ ಶೇರುತ್ತಾರೆ. ವಿಶ್ವಾಸಿಸಿ ನಿತ್ಯಜೀವವನ್ನು ಪಡ ಕೊಳ್ಳುವವರು ಶೆರೆಯಿಂದ ಬಿಡುಗಡೆಯಾದವರಂತೆಯೂ ಮರಣದಿಂದ ಎದ್ದವರಂತೆಯೂ ಇದ್ದಾರೆಂದು ಬರಹವು ಹೇಳುತ್ತದೆ. ಬಂಧನದಿಂದಲೂ ನಿದ್ರೆಯಿಂದಲೂ ಮರಣದಿಂದಲೂ ತಪ್ಪಿಸಿ ಕೊಳ್ಳುವದು ಮೆಲ್ಲ ಮೆಲ್ಲಗೆ ಆಗುವ ಕಾರ್ಯವಲ್ಲ. ಅದೇ ಪ್ರಕಾರ ನಿಜವಾದ ರಕ್ಷಣೆಯ ಅನುಭವವನ್ನು ಹೊಂದುವವರು ಫಕ್ಕನೆ ಭಾವಾಂತರವಾಗುತ್ತಾರೆ. ನತ್ತಿ ಮಾತಾಡುವ ಕಿವುಡನು ಯೇಸು ಕ್ರಿಸ್ತನಿಂದ ಮುಟ್ಟಿಸಿ ಕೊಂಡು ಫಕ್ಕನೆ ಗುಣವಾದ ಹಾಗೆ, ಯೇಸು ಕ್ರಿಸ್ತನ ಐಕ್ಯದಲ್ಲಿ ನಿಜವಾಗಿ ಶೇರುವವರು ತ್ವರಿತವಾಗಿ ಯತ್ನೈಸುವ ದಿವ್ಯ ಆತ್ಮದ ಮೂಲವಾಗಿ ಬೇಗ ಹೊಸ ಮ

ನುಷ್ಯರಾಗುವದು ವಾಡಿಕೆಯಾಗೆದೆ. ಈ ರೀತಿಯಿಂದ ಕೆಟ್ಟ ಮನಸ್ಸಾಕ್ಷಿಯನ್ನು ಕಳ ಕೊಂಡು, ದೇವರ ಸಮಾಧಾನವನ್ನು ಹೊಂದಿ, ಪಾಪದಿಂದ ತೊಲಗಿ, ದೇವರ ನೀತಿಯನ್ನು ಪಡಕೊಂಡು, ಅವಿಧೇಯತ್ವವನ್ನು ಬಿಟ್ಟು, ವಿಧೇಯ ಮಕ್ಕಳಾಗಿ ನಿರಾಶೆಯನ್ನು ತೊರದು, ಮಹಿಮೆಯ ಆಶೆಯನ್ನು ಅನುಭವಿಸಿ, ಸ್ವಾರ್ಥವನ್ನು ತಿರಸ್ಕರಿಸಿ, ಪ್ರೀತಿಯ ಮರ್ಮವನ್ನು ಗ್ರಹಿಸಿಕೊಂಡು, ಲೋಕದಿಂದ ದೇವರಿಗೂ, ಕತ್ತಲೆಯಿಂದ ಬೆಳಕಿಗೂ, ಮರಣದಿಂದ ಜೀವಕ್ಕೂ ತಿರುಗಿದವರು ಭಾಗ್ಯವಂತರು. ಯೇಸು ಕ್ರಿಸ್ತನು ತಮ್ಮನ್ನು ರಕ್ಷಿಸಿದ್ದಾನೆಂದು ತಿಳಿದು, ಆತನ ಕೃಪೆಯಲ್ಲಿಯೇ ನೆಲೆಗೊಂಡು, ಈ ದೇಹವನ್ನು ಬಿಟ್ಟು, ತಮ್ಮನ್ನು ಆಶ್ಚರ್ಯವಾದ ರೀತಿಯಿಂದ ಪಾಪಕ್ಕೂ ಸೈತಾನನಿಗೂ ಮರಣಕ್ಕೂ ತಪ್ಪಿಸಿದ ತಮ್ಮ ರಕ್ಷಕನ ಬಳಿಯಲ್ಲಿ ಶೇರುವ ಪರಿಯಂತರ ಮನೋವಾಕ್ಕಾಯದಿಂದ ಆತನ ಕೃಪೆಗೆ ಸಾಕ್ಷಿಗಳಾಗಿದ್ದಾರೆ.

ಈ ಸುವಾರ್ತೆಯ ವಾಕ್ಯವನ್ನು ಈಗ ಕೇಳುವವರ ಕಿವಿಗಳನ್ನೂ ಹೃದಯಗಳನ್ನೂ ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಪರಿಶುದ್ಧಾತ್ಮದ ಬಲದಿಂದ ಮುಟ್ಟಿ ತೆರೆದು, ಆತನ ನಾಮವನ್ನು ಎಂದೆಂದಿಗೂ ಹೊಗಳುವ ಹಾಗೆ ಅವರ ನಾಲಿಗೆಗಳನ್ನು ಸಡ್ಲಿಸಲಿ. ಆಮೆನ್.

ನುಮಿದಿಯದ ಹಿಪ್ಪೊ ಪಟ್ಟಣದ

ಅಧ್ಯಕ್ಷನಾದ ಔರೇಲಿಯ ಔಗುಸ್ತೀನನು.

(24ನೇ ಪುಟದಿಂದ ಮುಂದೆ.)

ಕ್ರೈಸ್ತನಾಗುವದಕ್ಕೆ ಔಗುಸ್ತೀನನಿಗೆ ಮಾಂಸದ ಇಚ್ಛೆಯು ವಿಶೇಷವಾಗಿ ಅಭ್ಯಂತರ ಹಾಕುತ್ತಿತ್ತು; ಅವನ ತಾಯಿಯು ಬೇಡಿ ಕೊಳ್ಳುತ್ತಲೇ ಇದ್ದದರಿಂದ, ಅವನು ತಾನು ಇಟ್ಟು ಕೊಂಡಿದ್ದ ಆ ಸ್ತ್ರೀಯನ್ನು ತನ್ನ ಜೀವತ್ವದ ೩೧ನೇ ವರುಷದಲ್ಲಿ ಕಳುಹಿಸಿ ಬಿಟ್ಟನು; ಆದರೆ ಅಂದೇ ಮದುವೆಗೆ ಅನುವು ಶಿಕ್ಕದಿರಲು, ಮುಂಚಿನಂತೆ ಕಾಮವೃತ್ತನಾದನು. ಮನಸ್ಸಾಕ್ಷಿಯ ಶಿಕ್ಷೆಯಿಂದ ಅವನ ಅಸಮಾಧಾನವು ದಿನದಿನಕ್ಕೆ ಏರುತ್ತಲಿತ್ತು. ಕಾಲಗತಿಯಲ್ಲಿ ದೇವರ ಕೈಯು ಅವನನ್ನು ಸಿಂಪ್ಲಿಕಿಯಾನನೆಂಬವನೊಬ್ಬ ಮುದೀ ಕ್ರೈಸ್ತನ ಬಳಿಗೆ ಕರದೊಯ್ಯಿತು; ಅಂಬ್ರೊಸಿಯನಾದರೂ ಈ ಭಕ್ತನು ತನ್ನ ತಂದೆ ಎಂಬಂತೆ ಅವನಿಗೆ ಮನ್ನಣೆ ಮಾಡುತ್ತಿರುವನು. ಔಗುಸ್ತೀನನು ಸಿಂಪ್ಲಿಕಿಯಾನನ ಮೇಲೆ ಅತ್ಯಂತ ವಿಶ್ವಾಸವಿಡುವವನಾಗಿ, ತನ್ನ ಇಂಗಿತವನ್ನೆಲ್ಲಾ ಅವನಿಗರುಹಿದಂದಿನಿಂದ ಆ ಮುದುಕನು ಅವನಿಗೆ ರಕ್ಷಣಾರ್ಥವುಳ್ಳ ಬುದ್ಧಿ ಹೇಳುತ್ತಿರಲು, ಒಂದು ದಿನ ವಿಕ್ತೋರೀನನೆಂಬವನೊಬ್ಬನು ಹೃತ್ಪರಿಣಾಮ ಪಟ್ಟ ಚರಿತ್ರವನ್ನು ಸಹ ಅವನ ಅನುಭವಕ್ಕಾಗಿ ವಿವರಿಸಿದನು; ಎಂತೆಂದರೆ—ವಿಕ್ತೋರೀನನೆಂಬವನು ಅಫ್ರಿಕದಲ್ಲಿ ಹುಟ್ಟಿ, ವಾಕ್ಪಟುತಾಪಂಡಿತನಾಗಿ, ರೋಮಪುರಕ್ಕೆ ಬಂದು, ಅಲ್ಲಿಯ ಶ್ರೇಷ್ಠ ನಿವಾಸಿಗಳ ಉಪಾಧ್ಯಾಯನಾಗಿದ್ದು, ಆ ವರೆಗುಳಿದಿರುವ ಮೂರ್ತಿಪೂಜಕತ್ವದ ಮುಖ್ಯ ಆಧಾರವೆನ್ನಿಸಿ ಕೊಳ್ಳುವವನಾದನು. ಆದ್ದರಿಂದ ರೋಮದಲ್ಲಿಯ ವಿಗ್ರಹಾರಾಧಕರು ಕ್ರಿ. ಶ. ೩೫೪ನೇ ವರುಷದಲ್ಲಿ ಅವನ ಹೆಸರಿನ ದೊಡ್ಡಸ್ತಿಕೆಗಾಗಿ ತ್ರಾಯಾನ ಕೈಸರನ ಸಂತೆಬೈಲೆಂಬಲ್ಲಿ ಅವನ ಪ್ರತಿರೂಪದ್ದೊಂದು ಸ್ತಂಭ ರಚಿಸಿಟ್ಟರು. ಅವನು

ಬಹಳ ಮುದುಕನಾದ ಹಿಂದೆ ಸರ್ವಜ್ಞಾನಾಶೆಯ ದೆಸೆಯಿಂದ ಪರಿಶುದ್ಧ ಬರಹವನ್ನು ಸಹ ಓದ ಲಿಕ್ಕೆ ತೊಡಗಿ, ಅದರ ದಿವ್ಯ ಅರ್ಥವು ಹೃದಂತರಂಗಕ್ಕೆ ತಾಗಿದವನಾಗಿ, ಕ್ರೂಜೆಯಲ್ಲಿ ಸತ್ತ ಕ್ರಿಸ್ತನ ಮೇಲೆ ಪ್ರೀತಿಯುಳ್ಳವನಾದನು. ಬಳಿಕ ಅವನು ನನ್ನ ಹತ್ತರ ಬಿಜ ಮಾಡಿ, ತನಗಾದ ಅ ನುಭವವನ್ನು ನನಗೆ ತಿಳಿಸಿದನು; ಆದರೆ ಬಹಿರಕ್ಕೆ ಕ್ರಿಸ್ತನ ಹೆಸರನ್ನು ನಿವೇದಿಸಲಿಕ್ಕೆ ಭಯ ಪ ಟ್ಟನು; ತನ್ನ ಐಶ್ವರ್ಯವಂತರಾದ ಹಿತಕರರ ಮೆಚ್ಚಿಗೆ ತಪ್ಪಿ ಹೋದೀತಲ್ಲವೋ? ನಾನು ಅವನಿಗೆ ಧೈರ್ಯ ಹೇಳಿ ಕೊಡುತ್ತಿರಲು, ಒಂದಾನೊಂದು ದಿವಸ ಅವನು ಬಂದು,—ದೇವಾಲಯಕ್ಕೆ ಹೋ ಗೋಣ! ಯಾಕಂದರೆ ನನ್ನ ಕರ್ತನಾದ ಕ್ರಿಸ್ತನ ಹೆಸರನ್ನು ಬೈಲಾಗಿ ಅರಿಕೆ ಮಾಡುವೆನೆಂದು, ನುಡಿದನು. ಆಗ ನಾನು ಬಹು ಸಂತೋಷಗೊಂಡು, ಅವನನ್ನು ಒಂದು ದೇವಾಲಯಕ್ಕೆ ಕರ ಕೊಂಡು ಹೋದೆನು. ಮೂರ್ತಿಪೂಜಕರು ಅದು ಕೇಳಿ, ಕಂಡು, ಮಹಾ ಕೋಪದಿಂದ ಹಲ್ಲು ಕಡಿದರೂ ವಿಕ್ತೋರೀನನು ಕರ್ತನ ಮೇಲೆ ದೃಷ್ಟಿ ಇಟ್ಟು, ಶಾಂತನಾಗಿರುತ್ತಿದ್ದನು. ಅವನು ಸ್ನಾ ನ ಹೊಂದ ತಕ್ಕ ವೇಳೆ ಒದಗಿರಲು, ಕ್ರೈಸ್ತ ಬೋಧಕರು—ಬೇಕಾದರೆ ನೀವು ದೇವಾಲಯವಲ್ಲದ ಒಂದು ಸ್ಥಳದಲ್ಲಿ ಕ್ರೈಸ್ತ ವಿಶ್ವಾಸಪ್ರಮಾಣ ಹೇಳ ಬಹುದೆನ್ನಲಿಕ್ಕೆ, ಅವನು ಹ್ಯಾಗೂ ಒಪ್ಪದೆ ದೇ ವಾಲಯದೊಳಗೆಯೇ ಸಭೆಯು ಹರ್ಷಧ್ವನಿಗೈಯುವಲ್ಲಿ ತನ್ನ ವಿಶ್ವಾಸಾರ್ಥ ಸಾರಿ, ತದನಂತರ ತನ್ನ ವಾಕ್ಚಾತುರ್ಯ ಪಾಂಡಿತ್ಯದ ಉದ್ಯೋಗ ಬಿಟ್ಟು, ಪ್ರಸಂಗ ಗ್ರಂಥಗಳಿಂದ ತನ್ನ ಕರ್ತನೊ ಬ್ಬನಿಗೆಯೇ ಸೇವಿಸಲೆಸಗಿ, ಕ್ರಿ. ಶ. ೩೭೦ನೇ ವರುಷದಲ್ಲಿ ಸಮಾಧಾನದಿಂದ ತೀರಿದನು.—ಔಗು ಸ್ತೀನನು ಅದನ್ನಾ ಕೇಳಿದಾಗಲೇ, ನಾನು ಸಹ ಅಂಥಾ ಧೈರ್ಯವುಳ್ಳ ಸಾಕ್ಷಿಗಾರನಾಗ ಬೇಕೆಂಬ ಉರಿಯು ಅವನೊಳಗೆ ಹುಟ್ಟಿತು. ಬಳಿಕ ಒಂದು ದಿನ ಅವನು, ಹಿಂದೆ ಸೂಚಿಸಿರುವ ಆ ಇಬ್ಬರು ಪ್ರಾಣಮಿತ್ರರಲ್ಲಿ ಅಲೂಪಿಯನೆಂಬವನ ಸಹಿತ ಬೇರೊಬ್ಬ ಕ್ರೈಸ್ತನೆಡೆಗೆ ಹೋಗಿರಲು, ಇವನು ಹೇ ಳಿದ ವರ್ತಮಾನದಿಂದ ಅವನ ಮನಸ್ಸು ಪೂರಾ ಒಡೆಯಿತು; ಅದೇನಂದರೆ—ಗೆರ್ಮಾನಿಯ ದ್ದೊಂದು ದೇಶವಾದ ಪ್ರುಸ್ಸಿಯದ ರೈನೆಂಬ ನದಿಯ ಒಂದು ಸಂಗಮ ಹೊಳೆಯಲ್ಲಿರುವ ತ್ರೀರೆಂ ಬ ಪಟ್ಟದಲ್ಲಿ ಇಬ್ಬರು ಸೈನಿಕರು ಅಕಸ್ಮಾತ್ತಾಗಿ ಬಡ ಕ್ರೈಸ್ತರದೊಂದು ಮನೆಯಲ್ಲಿ ಒಟ್ಟುಗೂಡಿ, ಮೊದಲಿನ ಸರ್ತಿ ಪರಿಶುದ್ಧ ಬರಹದ ಒಂದು ಗ್ರಂಥ ನೋಡಿ, ಓದುತ್ತಲೆ, ಅದರ ಅರ್ಥವು ಅವರಿಗೆ ಸಲೆಸೊಗಸಿತು. ಅದಕ್ಕಾಗಿ ಅವರಲ್ಲೊಬ್ಬನು ಅಂದದ್ದೇನು—ನಾವು ಈಗ ಅನಂತ ಕಷ್ಟ ತಾಳಿ ಹೋಗುತ್ತಿರುವ ಗುರಿ ಯಾವದು? ಕೈಸರನ ಗೆಳೆಯರಾಗ ಬೇಕೆಂಬದಲ್ಲದೆ ಬೇರೊಂದೂ ಪ್ರತೀ ಕ್ಷೆಯೂ ನಮಗೆ ಇರುತ್ತಿರಲಿಲ್ಲವಲ್ಲ? ಆದರೆ ನಮಗೆ ಮನಸ್ಸಿದ್ದರೆ, ನಾವು ದೇವರ ಗೆಳೆಯರೇ ಆಗ ಬಹುದಲ್ಲ? ಹ್ಯಾಗೂ ನಾನು ದೇವರ ಗೆಳೆಯನಾಗುವೆನು!—ಆಗ ಮತ್ತೊಬ್ಬನು,—ನೀನಿರುವಲ್ಲಿ ನಾನು ಸಹ ಇರುವೆನು! ಎಂದು, ಉತ್ತರ ಕೊಟ್ಟನು. ತತ್ಕ್ಷಣವೇ ಉಭಯತರು ಸೇನೋ ದ್ಯೋಗ ಕಳೆದು, ಕ್ರಿಸ್ತನ ಸೇವಕರಾದರು. ಇದನ್ನಾಲೈಸುತ್ತಿರುವಷ್ಟರಲ್ಲಿ ಔಗುಸ್ತೀನನು ಹೃತ್ತಾ ಪದ ಉರಿಯು ಮುಖಕ್ಕೇರಿದವನಾಗಿ, ಸ್ತಬ್ಧನಾಗಿ ಕೂತಿದ್ದು, ಆ ವರ್ತಮಾನ ಹೇಳಿದ್ದ ಮಿತ್ರ ನು ಹೋದ ತರುವಾಯ ಆ ಅಲೂಪಿಯನ ಮುಂದೆ—ಓ ಅಲೂಪಿಯನೇ, ಅದೇನು? ಆ ಪಂಡಿ ತರು ಸಹ ಮನಸ್ಸು ಹಿಡು ಕೊಂಡು, ಪರಲೋಕದ ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳುತ್ತಾರೆ; ಆದ ರೆ ನಾವು ಬಹು ವಿದ್ಯೆ ಕಲಿತಿದ್ದರೂ ನಮ್ಮ ಹೃದಯವು ಕಾಷ್ಟದಂತಿದ್ದು, ನಾವು ಪಾಪದ ಕಲ್ಮಷ

ದಲ್ಲಿ ಹೊರಳಾಡುವದೇನು? ಎಂತ ಕೂಗುತ್ತಲೇ ಅವನನ್ನಗಲಿ, ಮನೆಯ ಹಿತ್ತಲಿನ ತೋಟಕ್ಕೆ ಓಡಿ ಹೋದನು. ಅಲೂಪಿಯನು ಅವನ ಧ್ವನಿಯ ವಿಕಾರಕ್ಕೂ ಮುಖದುರಿಗೂ ಅಂಜಿ, ತ್ವರೆಯಿಂದ ಅವನ ಬೆನ್ನಟ್ಟಿ ಕೊಂಡು ಬಂದು, ಅವನು ಅತಿರಿಕ್ತ ವ್ಯಸನಪೂರಿತನಾದದ್ದನ್ನು ಕಂಡನು. ಆ ಹೊತ್ತಿನ ವಿಷಯ ಔಗುಸ್ತೀನನು ಹಿಂದಗಡೆ ಬರದದ್ದೇನಂದರೆ: ಈಗಲೇ ಆಗ ಬೇಕು! ಅಗತ್ಯವಾಗಿ ಈಗಲೇ ಆಗ ಬೇಕು! ಎಂಬ ನುಡಿಯು ಹೃದಯದೊಳಗೆ ಕೇಳಿಸಿತು; ಬಳಿಕ ನನ್ನ ಪಾಪಗಳು—ನೀನು ನಮ್ಮನ್ನು ಬಿಟ್ಟು ಬಿಡುವಿಯೋ? ನಾವು ಎಂದೆಂದಿಗೂ ಇನ್ನು ನಿನ್ನಲ್ಲಿ ವಾಸವಾಗಿರ ಬಾರದೋ? ಹಾಗಾದರೆ ಸದಾಕಾಲಕ್ಕೆ ನಿನಗೆ ನಮ್ಮಿಂದ ಇನ್ನು ಆನಂದ ಬರಲಿಕ್ಕಿಲ್ಲವೆಂತ, ಚಂದಾಗಿ ಚಿಂತಿಸಿಕೋ! ನಾವಿಲ್ಲದೆ ನೀನು ಬದುಕುವದುಂಟೇ? ಎಂತ ಒದರಿ, ನನ್ನ ಶರಗು ಬಿಗಿ ಹಿಡಿದು ಕೊಂಡ ಹಾಗಾಯಿತು.—ಅವನೊಳಗಿನ ಯುದ್ಧವು ಹೆಚ್ಚು ಹೆಚ್ಚಾದ ಮೇಲೆ ಕಡೆಯಲ್ಲಿ ಅಶ್ರುಗಳ ಧಾರೆಯು ಅವನ ಕಣ್ಣಿನಿಂದ ಹೊರಟಿತು. ಆಗಲವನು ಎದ್ದು, ಮುಂದಕ್ಕೋಡಿ, ಒಂದು ಅಂಜೂರದ ಮರದಡಿಗೆ ಬಿದ್ದು ಕೊಂಡು,—ಅಕಟಾ, ಕರ್ತನೇ, ಎಷ್ಟೋ ಕಾಲ! ಓ ಕರ್ತನೇ, ಎಷ್ಟೋ ಕಾಲ ಮುನಿಯುವಿ? ನಾಳೆ, ನಾಳೆ! ಎಂಥೇಳುವದು ಇನ್ನೂ ಎಷ್ಟು ಕಾಲಕ್ಕೆ? ಈಗಲೇ ಆಗ ಬಾರದೇ? ಈಗಲೇ ನನ್ನ ಅಪಮಾನವು ತೀರ ಬಾರದೇ? ಎಂದು ದೇವರ ಕಿವಿಗೆ ಮೊರ ಮೊರೆಯುವಲ್ಲಿ, ಒಂದು ಕೂಸು—ತಕ್ಕೊಂಡು ಓದು! ತಕ್ಕೊಂಡು ಓದು! ಎಂತ ಅನೇಕ ಸಾರಿ ಹಾಡಿ ಹೇಳಿದ ಹಾಗಾಯಿತು. ಔಗುಸ್ತೀನನು ಕಳೆಗುಂದಿ,—ಮಕ್ಕಳು ಆಟದಲ್ಲಿ ಹೀಗೆ ಹೇಳುವದನ್ನು ನಾನೆಂದಿಗೂ ಕೇಳಲಿಲ್ಲ; ಅದು ದೇವರ ಕಡೆಯ ಮಾತೇ! ಎಂತ ತಿಳಿದು, ಅಲೂಪಿಯನ ಬಳಿಗೆ ತಿರುಗಿ, ಅಲ್ಲಿರುವ ಪರಿಶುದ್ಧ ಬರಹದ್ದೊಂದು ಗ್ರಂಥ ಬಿಚ್ಚಿದಂದೇ ಅವನ ದೃಷ್ಟಿಗೆ ಬಿದ್ದ ಮಾತೇನಂದರೆ—ಹಗಲಿಗೆ ತಕ್ಕ ಹಾಗೆ ಯುಕ್ತವಾಗಿ ನಡಿಯುವ; ದುಂದುತನಗಳಲ್ಲಿಯೂ ಅಮಲುಗಳಲ್ಲಿಯೂ ಅಲ್ಲ, ಸೂಳೆತನಗಳಲ್ಲಿಯೂ ಬಂಡುತನಗಳಲ್ಲಿಯೂ ಅಲ್ಲ, ಜಗಳದಲ್ಲಿಯೂ ಹೊಟ್ಟೆಗಿಚ್ಚಿನಲ್ಲಿಯೂ ಅಲ್ಲ! ಆಶೆಗಳಿಗಾಗಿ ಮಾಂಸದ ಚಿಂತೆ ಮಾಡದೆ, ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿ ಕೊಳ್ಳಿರಿ!—ಅವನು ಹೆಚ್ಚು ಓದಲಿಲ್ಲ, ಅದೇ ಅವನಿಗೆ ಸಾಕಾಯಿತು; ಕರ್ತನ ಅಪ್ಪಣೆ ಏನೆಂತ ಅದರಿಂದಲೇ ಗ್ರಹಿಸಿದ್ದನು. ಹೀಗಿರಲಿಕ್ಕೆ ಅವನು ಶಾಂತಿಭರಿತನಾಗಿ, ಅಲೂಪಿಯನಿಗೆ ಆ ವಚನ ತೋರಿಸಲು, ಇವನು ಅದನ್ನಲ್ಲದೆ ಮುಂದಿನದನ್ನು ಸಹ ಓದಿದನು! ಅದೇನಂದರೆ—ವಿಶ್ವಾಸದಲ್ಲಿ ಬಲಹೀನನಾದವನನ್ನು (ದಯೆಯಿಂದ) ಅಂಗೀಕರಿಸಿರಿ! ಈ ವಚನವನ್ನು ಅವನು ತನ್ನ ಧೈರ್ಯಾಭಿವೃದ್ಧಿಗೆ ಉಪಯೋಗಿಸಿ ಕೊಂಡು, ಔಗುಸ್ತೀನನಿಗೆ ತೋರಿಸಿ, ಇವನಿಗೆ ಬಂದಿರುವ ಅದೇ ಪಂಥ ಹಿಡು ಕೊಂಡನು. ಆ ಸಮಯ ಅವರಿಬ್ಬರು ಮೊನಿಕಳಿದ್ದಲ್ಲಿಗೆ ಹೋಗಿ, ನಡದ್ದು ತಿಳಿಸಿದರು. ಅವಳಿಗಾದ ಚಿದುಲ್ಲಾಸವನ್ನೂ ಅವಳಾಡಿದ ದೇವಸ್ತೋತ್ರಗಳನ್ನೂ ವರ್ಣಿಸುವದು ಅಸಾಧ್ಯ; ತಾನು ನಿಟ್ಟುಸುರು ಕಣ್ಣೀರುಗಳಿಂದ ಬೇಡಿ ಕೊಳ್ಳುತ್ತಿದ್ದದ್ದಕ್ಕಿಂತ ಹೆಚ್ಚು ತನಗೆ ದೊರಕಿತಲ್ಲವೋ? ಅಂದಿನಿಂದ ಔಗುಸ್ತೀನನು ಲೌಕಿಕ ಮಾನ ಲಾಭಗಳ ಆಶೆಯನ್ನೆಲ್ಲಾ ಪೂರಾ ತ್ಯಜಿಸಿ, ಬಹು ಕೃತಜ್ಞತೆಯಿಂದ ಕರ್ತನೋಲಗ ಮಾಡುವವನಾದನು.

ಮರು ವರುಷದಲ್ಲಿ, ಅಂದರೆ ಕ್ರಿ. ಶ. ೩೮೭ನೇದರಲ್ಲಿ ಅವನು ೧೫ ವರುಷದವನಾದ ಆದೆಯೊದತನು (ದೇವರಿಂದ ದತ್ತನಾದವನು) ಎಂಬ ತನ್ನ ಮಗನ ಸಂಗಡ ಹೋಗಿ, ಅಂಬ್ರೊಸಿ

ಯನ ಕೈಯಿಂದ ಸ್ನಾನ ಹೊಂದಿದನು. ಈ ಆದೆಯೊದತನು ತಂದೆಗೆ ಅತಿ ಪ್ರಿಯನು; ದೊಡ್ಡ ಪ್ರಾಯದ ಪಂಡಿತರಿಗಿಂತಲೂ ಅಧಿಕ ಬುದ್ಧಿಯು ಅವನಿಗಿತ್ತಲ್ಲ? ಔಗುಸ್ತೀನನು ಸ್ನಾತನಾಗಿ, ತಡ ಮಾಡದೆ, ತನ್ನ ತಾಯಿಯನ್ನೂ ಕೆಲವು ಮಂದಿ ಸ್ನೇಹಿತರನ್ನೂ ಕರಕೊಂಡು, ಅಫ್ರಿಕಕ್ಕೆ ಹೊರಡುವದಕ್ಕೆ ಒಂದು ಬಂದರಸ್ಥಳದ್ದೊಂದು ಛತ್ರದಲ್ಲಿ ಬಂದುಳುಕೊಂಡು, ಕಿಟಕಿಯ ಹತ್ತರ ತನ್ನ ತಾಯಿಯೊಡನೆ ದಿವ್ಯ ಸಂಭಾಷಣೆ ಗೈಯುತ್ತಿರಲು, ಮೊನಿಕಳು—ನಾನು ಇಹದಲ್ಲಿ ಇನ್ನು ಇರುವದು ಯಾತಕ್ಕೆ? ನಾನರಿಯೆನು. ಇಹದ ಜೀವವು ನನಗೆ ಕಾಂಕ್ಷಿತವಾಗಿದ್ದದ್ದಕ್ಕೆ ಒಂದೇ ಕಾರಣ ಮಾತ್ರ ಇತ್ತು; ದೇವರ ಅಮಿತ ಕೃಪೆಯಿಂದ ಅದು ಹೋಗಿ, ನಾನು ಪ್ರತೀಕ್ಷಿಸುತ್ತಿದ್ದದ್ದು ಪ್ರಾಪಿಸಿತಲ್ಲ? ಕಂದಾ, ನೀನು ರಕ್ಷಿತನಾಗಿ ದೇವರ ಸೇವಕನಾಗಿದ್ಧಿಯಲ್ಲ? ಹಾಗಾದರೆ ನಾನು ಇಹದಲ್ಲಿ ಇನ್ನು ಇರುವದು ಯಾತಕ್ಕೆ? ಎಂದು ನುಡಿದು, ಐದಾರು ದಿವಸ ಹೋದ ಮೇಲೆ ರೋಗಿಷ್ಟಳಾಗಿ, ತನ್ನ ರೋಗಾರಂಭದ ೯ನೇ ದಿವಸದಲ್ಲಿ, ತನ್ನ ಜೀವತ್ವದ ೫೬ನೇ ವರುಷದಲ್ಲಿ ಸಮಾಧಾನವಾಗಿ ಪರವನ್ನೈದಿದಳು. ಔಗುಸ್ತೀನನು ಅಫ್ರಿಕಕ್ಕೆ ಹೋಗಿ ಸ್ವಲ್ಪ ಕಾಲವಾದನಂತರವೇ ಆದೆಯೊದತನೆಂಬ ಮಗನು ಸಹ ತೀರಿದನು. ಈ ಪ್ರಕಾರ ಅವನಿಗೆ ಬಹಳ ದುಃಖವಾಯಿತು; ಆದರೆ ಕರ್ತನ ವಾಕ್ಯದ ಆದರಣವು ಮಿಗಿಲಾಯಿತು. ಅವನು ತನಗೆ ಅತ್ಯವಶ್ಯವಾಗದ್ದನ್ನೆಲ್ಲಾ ಮಾರಿ, ಬಡವರಿಗೆ ಕೊಟ್ಟು, ತನ್ನ ಸ್ವಪಟ್ಟವಾದ ತಗಸ್ತೆಯ ಹತ್ತರದ ಒಂದು ಹಳ್ಳೀ ಮನೆಯಲ್ಲಿ ವಸ್ತಿ ಮಾಡಿ ಕೊಂಡಿರುತ್ತಿದ್ದನು. ೩ ವರುಷದ ಮೇಲೆ ಹಿಪ್ಪೊ ಪಟ್ಣದ ಒಬ್ಬ ಸ್ಥಿತಿವಂತನು, ತನಗೆ ಉಪದೇಶ ಹೇಳ ಬೇಕೆಂತ, ಅವನನ್ನು ಕರಿಸಿದಾಗ ಅವನು ಅಲ್ಲಿಗೆ ಹೋದನು.

ಅಲ್ಲಿಯ ಭಕ್ತಿಯುಳ್ಳ ಅಧ್ಯಕ್ಷನಾದ ವಲೇರಿಯನು ತನ್ನೊಳಗಿನ ಸಭ್ಯರ ಕಾಂಕ್ಷೆಯ ಮೇರೆಗೆ ಕ್ರಿ. ಶ. ೩೯೧ನೇ ವರುಷದಲ್ಲಿ ಅವನನ್ನು ಸಭೆಯ ಹಿರಿಯನೆಂತ ನೇಮಿಸಿದ ಹಿಂದೆ, ಅವನ ಪ್ರಸಂಗಗಳಿಂದ ಸಭ್ಯರೆಲ್ಲರ ವಿಶ್ವಾಸವು ದಾರ್ಢ್ಯ ಗೊಳ್ಳುತ್ತಿರಲು, ಮುದಿತನದಿಂದ ಬಲಹೀನನಾದ ವಲೇರಿಯನು ಕ್ರಿ. ಶ. ೩೯೫ನೇದರಲ್ಲಿ ಅವನನ್ನು, ತನ್ನ ಸಹಾಯಾಧ್ಯಕ್ಷನೆಂತ, ತೆಗದು ಕೊಂಡು, ಸ್ವಲ್ಪ ಕಾಲಕ್ಕೀಚೆ ಸತ್ತಾಗ ಔಗುಸ್ತೀನನೇ ಹಿಪ್ಪೊ ಪಟ್ಣದ ಅಧ್ಯಕ್ಷನಾದನು. ಕಾಲಗತಿಯಲ್ಲಿ ಅವನು ನಿರ್ಮಿಸಿದ ಒಂದು ಮಠವು ಬಹಳ ಪ್ರಸಿದ್ಧವಾಯಿತು; ಅದರೊಳಗೆ ಅಭ್ಯಾಸಿಸಿ ಬೋಧಕರಾಗಿ ಶೋಭಿಸುತ್ತಿದ್ದವರಲ್ಲಿ ೧೦ ಜನರಾದರೂ ಮಾನನೀಯ ಸಭಾಧ್ಯಕ್ಷರಾದರು. ಔಗುಸ್ತೀನನು ಉಪದೇಶದಿಂದ ಹೊರ್ತು ಅನೇಕ ಗ್ರಂಥಗಳಿಂದ ಸಹ ಸಭೋಪಕಾರಿಯಾಗುತ್ತಾ ಬಂದನು. ಅವಶ್ಯವಾಗಿ ಬೇಕಾದದ್ದನ್ನು ಮಾತ್ರ ತನ್ನ ಹೊಟ್ಟೆಗೆ ಕೊಡುತ್ತಿದ್ದನು; ಅವನ ಮನೆಯ ಸಾಮಾನುಗಳೆಲ್ಲಾ ಹಳೇವು, ಯಾವದೊಂದು ಹೊಸದನ್ನು ಕೊಂಡುಕೊಳ್ಳುವ ಮನಸ್ಸು ಅವನಿಗಿರುವದು ಕಡಿಮೆ; ಅವನು ಈ ರೀತಿಯಾಗಿ ತನ್ನ ಪ್ರಾಪ್ತಿಯಲ್ಲಿ ಉಳಿಸುತ್ತಿರುವದನ್ನು ದರಿದ್ರರಿಗೆ ತ್ಯಾಗ ಮಾಡುತ್ತಿದ್ದನು. ಮನೋದೀನತ್ವವೂ ಶಾಂತಿಯೂ ಅವನ ವಿಶೇಷ ಗುಣಗಳು. ಅವನಿರುವಲ್ಲಿ ಯಾರೂ ಪ್ರೀತಿ ಬಿಟ್ಟು, ಮತ್ತೊಬ್ಬರ ಮಾತು ತೆಗಿಯ ಬಾರದು; ಪ್ರೀತಿ ಬಿಟ್ಟು ಮಾತಾಡುವಂಥವನೊಬ್ಬನು ತನ್ನ ಸಂಗಡ ಊಟಕ್ಕೆ ಬರ ಬಾರದೆಂಬ ನುಡಿಯು ಅವನ ಮೇಜಿನಲ್ಲಿ ಕೆತ್ತಿಸಿತ್ತು.

ಔಗುಸ್ತೀನನು ಬಹಳ ಆಶೀರ್ವಾದದೊಡನೆ ತನ್ನ ಬೋಧಕವೃತ್ತಿ ನಡಿಸುತ್ತಿದ್ದು, ೭೫ ವ

ರುಷದವನಾದನಂತರ ಕ್ರಿ. ಶ. ೪೨೯ನೇ ವರುಷದಲ್ಲಿ ವಂದಲರೆಂಬ ಕಾಡು ಜನರು ಅವನಿರುವ ಹಿಪ್ಪೊ ಪಟ್ಟಣಕ್ಕೆ ಮುತ್ತಿಗೆ ಹಾಕಲೆಸಗಿದ ಈಚೆ ಅವನು ಬೇರೆ ಬೇರೆ ಕಡೆಯಿಂದ ತನ್ನ ಹತ್ತರ ಓಡಿ ಬಂದಿದ್ದ ಅಧ್ಯಕ್ಷರಲ್ಲಿ ಒಮ್ಮೆ ನುಡಿದಿದ್ದೇನಂದರೆ—ನಾನು ನಮ್ಮ ಕರ್ತನ ಮುಂದೆ, ಈ ಪಟ್ಟಣವನ್ನು ಮುತ್ತಿಗೆಯಿಂದ ಬಿಡಿಸು! ಇಲ್ಲವೇ ನನ್ನನ್ನು ಈ ಲೋಕದಿಂದ ಕರ ಕೊಂಡು ಹೋಗೆಂದು, ಬೇಡಿ ಕೊಂಡಿದ್ಧೇನೆ.—ದೇವರು ಒಂದು ಪ್ರಕಾರ ಆ ಪ್ರಾರ್ಥನೆಯ ಹಾಗೆ ಮಾಡಿದನು. ಹ್ಯಾಗಂದರೆ ಮುತ್ತಿಗೆಯ ೩ನೇ ತಿಂಗಳಲ್ಲಿ ಔಗುಸ್ತೀನನಿಗೆ ಜ್ವರವು ಹಿಡಿಯಿತು; ಆಗ ಅವನು ದಾವೀದನ ಪಶ್ಚಾತ್ತಾಪ ಕೀರ್ತನೆಗಳನ್ನು ತನ್ನೆದುರಿನ ಗೋಡೆಯಲ್ಲಿ ಬರಿಸಿ, ಓದುತ್ತಾ ಬಹಳ ಪ್ರಾರ್ಥಿಸುತ್ತಾ ಇದ್ದು, ಕ್ರಿ. ಶ. ೪೩೦ನೇ ವರುಷದಲ್ಲಿ, ತನ್ನ ಜೀವಿತದ ೭೬ನೇದರಲ್ಲಿ ಸಮಾಧಾನದಿಂದ ತೀರಿ ಹೋದನು.

ಸ್ವಾರ್ಥವಿಲ್ಲದ ಭಕ್ತಿಯು.

ಜರ್ಮನಿ ದೇಶದಲ್ಲಿ ನಡದ ಒಂದು ಯುದ್ಧದ ಕಾಲದಲ್ಲಿ, ರಾಹುತರ ಸರದಾರನೊಬ್ಬನಿಗೆ ಮೇವು ತರಿಸ ಬೇಕೆಂದು ಅಪ್ಪಣೆ ಆದಾಗ, ಅವನು ತನ್ನ ರಾಹುತರ ಸಂಗಡ ನೇಮಕವಾದ ಸ್ಥಳಕ್ಕೆ ಹೋಗಿ, ಮರಗಳ ತೋಪುಗಳು ಹೊರ್ತು ಕಣ್ಣಿಗೆ ಏನೂ ಕಾಣದೆ ಇರುವ ಒಂದು ತಗ್ಗಿನಲ್ಲಿ ಶೇರಿದನು. ಬಹಳ ವಿಚಾರ ಮಾಡಿದ ಮೇಲೆ, ಆ ಸರದಾರನು ಒಂದು ಸಣ್ಣ ಮನೆ ಕಂಡು, ಅದರ ಬಾಗಲು ತಟ್ಟಿದನು. ತಟ್ಟಿದ ಕೂಡಲೇ ವೊರಾವಿಕ ಭ್ರಾತ್ರದವನಾದ ಬಿಳೀ ಗಡ್ಡದ ಮುದುಕನೊಬ್ಬನು ಅದನ್ನು ತೆರೆಯಲು, ಆ ಸರದಾರನು—ಅಯ್ಯಾ, ಮೇವು ಶಿಕ್ಕುವ ಒಂದು ಹೊಲವನ್ನು ನಮಗೆ ತೋರಿಸೀರೋ? ಎಂದು ಕೇಳಿದನು. ಆ ಮುದುಕನು—ನಾನು ತೋರಿಸುತ್ತೇನೆಂದು ಹೇಳಿ, ಅವರ ಮುಂದೆ ನಡದು, ಆ ತಗ್ಗಿನ ಆಚೆಗೆ ಹೋಗುವ ಮಾರ್ಗದಿಂದ ಹೋದನು. ಹೆಚ್ಚುಕಡಿಮೆ ಒಂದು ಮೈಲು ದೂರ ಹೋದ ಮೇಲೆ, ಸಬ್ಬಕ್ಕಿಯ ಒಳ್ಳೇ ಹೊಲಕ್ಕೆ ಬರಲು, ಆ ಸರದಾರನು ದಾರಿ ತೋರಿಸುವವನಿಗೆ—ನಿಲ್ಲಿ, ನಮಗೆ ಬೇಕಾದದ್ದು ಇಲ್ಲಿ ಉಂಟು, ಎಂದು ಹೇಳಿದನು. ಅದಕ್ಕೆ ಆ ಮುದುಕನು ಸ್ವಲ್ಪ ತಡೀರಿ, ನಾನು ಒಳ್ಳೇ ಹೊಲ ತೋರಿಸಿ, ನಿಮ್ಮನ್ನು ಮೆಚ್ಚಿಸುವೆನು, ಅಂದನು. ಅವನು ಮುಂದೆ ಹೋಗಿ, ಅರ್ಧ ಹರದಾರಿ ದೂರಕ್ಕೆ ನಡದ ಮೇಲೆ, ಅದೇ ಕಾಳಿನ ಬೇರೆ ಒಂದು ಹೊಲವನ್ನು ಕಂಡಾಗ, ರಾಹುತರು ಇಳಿದು, ಹುಲ್ಲು ಕೊಯಿದು, ಹೊರೆಗಳ ಕವಾಡ ಕಟ್ಟಿ, ಕುದುರೆಗಳ ಮೇಲೆ ಹಾಕಿ, ಕೂತು ಕೊಂಡ ಮೇಲೆ, ಆ ಸರದಾರನು ಮುದುಕನಿಗೆ—ಅಯ್ಯಾ, ನೀವು ಸುಮ್ಮನೇ ಬಹಳ ದೂರಕ್ಕೆ ನಮ್ಮನ್ನು ಕರ ಕೊಂಡು ಬಂದಿರಿ. ಆ ಮೊದಲಿನ ಹೊಲವು ಇದಕ್ಕಿಂತ ಚನ್ನಾಗಿತ್ತು, ಎಂದು ಹೇಳಿದನು. ಅದಕ್ಕೆ ಆ ಮುದುಕನು—ಅದು ನಿಜ, ಆದರೆ ಆ ಹೊಲವು ನನ್ನದಲ್ಲವೆಂದು ಹೇಳಿದನು.

ಈ ಮನುಷ್ಯನು ತಾನು ಸತ್ಯ ಕ್ರೈಸ್ತನೆಂದು, ಈ ಕೃತ್ಯದಿಂದ ಪ್ರಕಟವಾಗಿ ತೋರಿಸಿದನು. ಹ್ಯಾಗಂದರೆ ನೆರೆಯವನ ಬದುಕು ನಷ್ಟ ಮಾಡುವದು ವಾಸಿಯಲ್ಲವೆಂದು ತನ್ನದನ್ನು ಅರ್ಪಣೆ ಮಾಡಿದನು.

ಪ್ರತಿಫಲವು.

ಒಂದು ಮನೆಯಲ್ಲಿ ಮುದುಕನಾದ ಹೆತ್ತಪ್ಪನೂ ಅವನ ಮಗನೂ ಸೊಸೆಯೂ ಮೊಮ್ಮಕ್ಕಳೂ ಕೂಡಾ ಇದ್ದರು. ಹೆತ್ತಪ್ಪನು ಮುದಿಪ್ರಾಯದಿಂದ ನಡುಗುತ್ತಾ ಒಮ್ಮೊಂದೊಮ್ಮೆ ತನ್ನ ಪಾತ್ರೆಯನ್ನು ಚನ್ನಾಗಿ ಹಿಡಿಯ ಕೂಡದೆ ಮೇಜಿನಲ್ಲಿ ಆಹಾರ ಚೆಲ್ಲಿ, ಪಾತ್ರ ಸಹಾ ಒಡದು ಬಿಟ್ಟನು. ಅದಕ್ಕೆ ಮಗನೂ ಸೊಸೆಯೂ ತಾಳ್ಮೆ ಇಲ್ಲದೆ ಗುಣುಗುಟ್ಟಿ, ಕಡೆಗೆ ಅವನನ್ನು ಊಟದ ಸಮಯದಲ್ಲಿ ಕೋಣೆಯ ಒಂದು ಮೂಲೆಯಲ್ಲಿ ಕೂಡ್ರಿಸಿ, ಒಂದು ಮರದ ಪಾತ್ರೆಯಲ್ಲಿ ತಿನ್ನಿಸಿದರು. ಮುದುಕನು ದುಃಖಿತನಾದರೂ ಇದನ್ನು ತಾಳಿ ಕೊಂಡಿದ್ದನು.

ಒಂದು ದಿನ ಈ ದುರ್ಬುದ್ಧಿಯುಳ್ಳ ಮಗನು ಮನೆಗೆ ಬರುವಾಗ, ತನ್ನ ಚಿಕ್ಕ ಮಗನು ಕೂತು ಕೊಂಡು ಮರದ ತುಂಡುಗಳನ್ನು ಕೂಡಿಸಲಿಕ್ಕೆ ಪ್ರಯತ್ನ ಮಾಡುವದನ್ನು ಕಂಡನು. ಎಲೇ ನನ್ನ ಮಗನೇ, ಏನು ಮಾಡುತ್ತೀ? ಎಂತ ಕೇಳಿದ್ದಕ್ಕೆ, ಹುಡುಗನು: ನೀನು ಮುದಿಪ್ರಾಯದವನಾದರೆ, ನಿನ್ನನ್ನು ಅದರಲ್ಲಿ ತಿನ್ನಿಸುವ ಹಾಗೆ ಒಂದು ಮರದ ಪಾತ್ರ ಮಾಡುತ್ತೇನಷ್ಟೇ, ಅಂದನು. ತಂದೆ ಇದನ್ನು ಕೇಳಿ, ಬೆರಗಿ, ತನ್ನ ಹೆಂಡತಿಯನ್ನು ದೃಷ್ಟಿಸಿ, ಅಹಾ ಇದು ನಮ್ಮ ನಡತೆಯ ಫಲವಾದೀತು ಎಂತ ಇವರಿಬ್ಬರು ಸಹಾ ಮಾತಿಲ್ಲದೆ ತಿಳು ಕೊಂಡು, ಆ ದಿನದಲ್ಲೇ ಮುದುಕನನ್ನು ಮೇಜಿನಲ್ಲಿ ಕೂಡ್ರಿಸಿ, ಇನ್ನು ಅವನ ಬಲಹೀನತ್ವವನ್ನು ತಾಳಿ ಕೊಂಡರು.

ಒಂದು ಸಾಮ್ಯವು.

ಒಬ್ಬ ಮನುಷ್ಯನು ತನ್ನನ್ನು ಹಿಂದಟ್ಟುವ ಮೃಗದ ಮುಂದೆ ಓಡಿ ಹೋಗಲು, ಒಂದು ಗುಣಿಯಲ್ಲಿ ಬಿದ್ದು, ಅದರ ಒಂದು ಪಾರ್ಶ್ವದಲ್ಲಿ ಬೆಳೆಯುವ ಒಂದು ಗಿಡದಲ್ಲಿ ಶಿಕ್ಕಿ ಕೊಂಡನು. ಅವನು ತನ್ನ ಸ್ಥಿತಿಯನ್ನು ಸ್ವಲ್ಪ ವಿಚಾರಿಸುವಾಗ ಅದು ಭಯಂಕರವಾದದ್ದೆಂದು ತಿಳು ಕೊಳ್ಳಬೇಕಾಯಿತು. ಯಾಕಂದರೆ ಗುಣಿಯ ಕಿನ್ನರೆಯಲ್ಲಿ ಆ ಮೃಗವು ಕಾದು ಕೊಂಡಿತು, ಅದರ ಅಡಿಯಲ್ಲಿ ಬೆಂಕಿ ಹಾರಿಸುವಂಥಾ ಬೇರೊಂದು ಕ್ರೂರವಾದ ಮೃಗವು ಅತಿ ಆಶೆಯಿಂದ ಅವನನ್ನು ದೃಷ್ಟಿಸುತ್ತಿತ್ತು. ಇದಲ್ಲದೆ ತನಗೆ ಆಧಾರವಾಗಿರುವ ಗಿಡದ ಬುಡದಲ್ಲಿ ಎರಡು ಇಲಿಗಳು ಒಂದು ಕಪ್ಪೂ ಒಂದು ಬಿಳೇದೂ ಅದರ ಬೇರನ್ನು ಎಡೆ ಬಿಡದೆ ಕಡಿಯುತ್ತಿದ್ದವು. ಹೀಗಾದರೂ ಆ ಮನುಷ್ಯನು ಗಿಡದಲ್ಲಿ ಕೆಲವು ಹಣ್ಣುಗಳನ್ನು ಕಂಡು, ಭಯವೆಲ್ಲ ಮರೆತು, ಅತಿ ಸಂತೋಷದಿಂದ ಅವುಗಳನ್ನು ತಿನ್ನಲಾರಂಭಿಸಿದನು.

ಇದರ ಅಭಿಪ್ರಾಯವೇನಂದರೆ: ಮನುಷ್ಯನನ್ನು ಹಿಂದಟ್ಟುವ ಮೃಗವು ಪಾಪವೇ, ಅವನು ಬಿದ್ದ ಗುಣಿಯು ಅವನ ಜೀವಕಾಲವೂ, ಗುಣಿಯ ಅಡಿಯಲ್ಲಿಯ ಮೃಗವು ಮರಣವೂ, ಎರಡು ಇಲಿಗಳು ಮಾನುಷ್ಯಜೀವವನ್ನು ಕಡಿದು ಬಿಡುವ ಹಗಲಿರುಳೂ, ಗಿಡದಲ್ಲಿರುವ ಹಣ್ಣುಗಳು ಲೌಕಿಕ ಭೋಜನವೂ ಎಂಬ ಹಾಗಾಯಿತು. ಆ ಎರಡು ಇಲಿಗಳು ತಮ್ಮ ಕೆಲಸ ತೀರಿಸುವ ಸಮಯ ಯಾರು ಬಲ್ಲ? ಕೆಳಗೆ ಕಾದು ಕೊಂಡಿರುವ ಮೃಗಕ್ಕೆ ಪ್ರಾಪ್ತಿಯಾಗುವ ಘಳಿಗೆ ಯಾರು ಎಣಿಸಲಾಗುವದೋ? ಆದರೂ ಎಷ್ಟು ಮಂದಿ ತಮ್ಮ ಈ ಭಯಂಕರ ಸ್ಥಿತಿಯನ್ನರಿತು

ಏನೂ ತೃಪ್ತಿ ಕೊಡದಂಥ ಆ ಹಣ್ಣುಗಳನ್ನು ಅತಿ ಆಶೆಯಿಂದ ಭಕ್ಷಿಸುವವರಾಗಿದ್ದಾರೆ. ಇದು ಹೆಡ್ಡತನವೇ ಸರಿ.

ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯಲ್ಲಿ ಹೊರ್ತು ಹೆಚ್ಚಳ ಪಡುವದು ನನಗೆ ಆಗದು; ಅದರಿಂದ ನನಗೆ ಲೋಕವು ಶಿಲುಬೆಗೆ ಹಾಕಲ್ಪಟ್ಟದೆ; ನಾನು ಲೋಕಕ್ಕೆ. ಗಲಾ. ೬, ೧೪.

When I survey the wondrous Cross.

೧. ಮಹಾಂತ ಸ್ತೋತ್ರರಾಜನ
ಶಿಲುಬೆ ಶ್ರಮೆ ನೋಡಲೆ,
ಈ ಲೋಕದಾಶೆ ಗರ್ವವ
ನಾ ತಿರಸ್ಕಾರ ಮಾಡುವೆ.

೨. ಈ ಕ್ರೂಜೆಗಾಗಿಯಲ್ಲದೆ
ನಾ ಸ್ತೋತ್ರ ಮಾಡಿ ಗೊಳ್ಳೆನು;
ಪಾಪಾದಿ ದೋಷ ಮಾಯವೆ
ನನ್ನಾತ್ಮಕಾಗ ಕೂಡದು.

೩. ಈ ಕ್ರೂರ ಮುಳ್ಳುಮಾಲೆಯು,
ಕೈ ಕಾಲು ತಲೆಯಿಂದಲೂ
ಬಿದ್ದೋದ ರಕ್ತ ನೋಡುವ;
ಓ, ಎಂಥ ಪ್ರೀತಿಯಾಬ್ಧಿಯು!

೪. ಈ ರಕ್ತಮೂಲವಾಗಿಯೇ
ನನ್ನಪರಾಧ ತೀರಿತು;
ಈ ಶ್ರಮೆ ಘಾಯದಿಂದಲೇ
ವಿಶ್ರಾಂತಿ ಕ್ಷೇಮಗೊಂಡೆನು.

೫. ಭೂಪರಲೋಕ ಕೊಟ್ಟರೆ
ಈ ಪ್ರೀತಿಗಾಗಿ ಸಾಲದು;
ಜೀವಾತ್ಮ ಪ್ರಾಣ ನಿನಗೆ
ನಾನೀಯು ತಕ್ಕ ಬಲಿಯು.

A. G.

ಲೋಕದ ಕರೆಯುವಿಕೆಯು.

ಉಣ್ಣುವ ಕುಡಿಯುವ, ನಾಳೆ ಸಾಯುತ್ತೇವೆ. ಎಶಾ. ೨೨, ೧೩.

ಕರ್ತನಾದ ಯೇಸುವಿನ ಕರೆಯುವಿಕೆಯು.

ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಡುವೆನು. ಮತಾ. ೧೧, ೨೮.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. **OCTOBER 1868.** ಅಂಕೆ ೪.

ಹೆಬಿಕ್ ಧೊರೆಯ

ಕಡೇ ಹದಿನಾಲ್ಕು ದಿನಗಳ ಸಮಾಚಾರವು.

ಕ್ರಿಸ್ತೇಸುವಿನಲ್ಲಿ ಪ್ರಿಯವಾದವರೆಲ್ಲರಿಗೆ ಕೃಪೆಯೂ ಸಮಾಧಾನವೂ ಆಗಲಿ. ಹಲ್ಲೆಲೂಯ!

ಮೇ ತಾರಿಕು ೬ನೇ ಬುಧವಾರ ಬೆಳಿಗ್ಯೆ ೮ ಘಂಟೇ ಸಮಯಕ್ಕೆ ನಮ್ಮ ಪ್ರಿಯ ಬೋಧಕನು ಬಹು ಅಸ್ವಸ್ಥವಾದನು. ತಾನು ಅತಿ ಬಲಹೀನವಾಗಿ ಆಯಾಸ ಪಡುವದರಿಂದ, ತನ್ನ ಸಂಗಡ ಮಾತಾಡಲಿಕ್ಕೆ ಯಾರೂ ಬರ ಬಾರದೆಂದೂ, ತನಗೆ ಏನಾದರೂ ಬೇಕಾದರೆ ಅದನ್ನು ಕುರಿತು ಜಾಗ್ರತೆ ತಕ್ಕೊಳ್ಳುವ ಹಾಗೆ ತನ್ನ ಮಕ್ಕಳಲ್ಲಿ* ಇಬ್ಬರು ಮಾತ್ರ ತನ್ನ ಕೋಣೆಯಲ್ಲಿ ಬರ ಬಹುದೆಂದೂ ಹೇಳಿದನು.

ಗುರುವಾರ ದಿವಸ ಆತನು ಕೆಲವು ತಾಸುಗಳ ವಿಶ್ರಾಂತಿ ಹೊಂದಿ, ಬಹು ಗುಣವಾದವನಂತೆ ತೋರಿದನು.

ಶನಿವಾರ ದಿವಸ ಆತನು ಹೇಳಿದ್ದು: ನಾನು ನಿಶ್ಚೈಸಿದ ಪ್ರಯಾಣವನ್ನು ಕುರಿತು ಏನು ಮಾಡ ಬೇಕೆಂದು ಕೆಲವು ದಿವಸಗಳಿಂದ ಅರಿಯದಿದ್ಧೇನೆ; ಅಂಥಾ ಸಮಯಗಳಲ್ಲಿ ನನಗೆ ಯಾವಾಗಲೂ ಇದ್ದ ಅಂತರ್ಯದ ಸಂತೋಷವೂ ನಿಶ್ಚಯವೂ ಈಗ ಇಲ್ಲ. ನನಗೆ ನನ್ನ ಮುಂದೆ ಹಾದಿಯು ಸ್ಪಷ್ಟವಾಗಿ ಕಾಣುವದಿಲ್ಲ. ಬಾದೆನ್ ದೇಶಕ್ಕೆ ಹೋಗುವದಕ್ಕೆ ಆಗುವದಿಲ್ಲವೆಂಬದು ಹ್ಯಾಗೂ ನಿಜವೇ; ಮತ್ತು ನಾನು ಸ್ವಿತ್ಸರ್ಲಾಂದಿಗೆ ಹೋಗುವೆನೋ ಏನೆಂಬದು ಕರ್ತನಿಗೆ ತಿಳಿದುಂಟು.

* ಅಂದರೆ ಆತ್ಮಿಕ ಮಕ್ಕಳು.

ಆದಿತ್ಯವಾರ ದಿವಸ ತನಗೆ ನೋಡುವದಕ್ಕೆ ಬಹಳ ಜನರು ಬರುವರೆಂಬದು ಆತನಿಗೆ ತಿಳಿದಿತ್ತು; ಆದರೂ ತಾನು ಬಹಳ ಅಸ್ವಸ್ಥವಾದ್ದರಿಂದ ಅವರ ಸಂಗಡ ಮಾತಾಡದೆ ಅವರನ್ನು ತಿರಿಗಿ ಕಳುಹಿಸಿದರೆ ಅವರಲ್ಲಿ ಕೆಲವರ ಮನಸ್ಸಿಗೆ ಸಮವಾಗಲಿಕ್ಕಿಲ್ಲವೆಂದು ತಿಳಿದು, ಇಡೀ ದಿವಸ ತನ್ನನ್ನು ಕಾದು ಕೊಂಡು ಇರ ಬೇಕೆಂದು ಅಪೇಕ್ಷಿಸಿದ ತನ್ನ ಇಬ್ಬರು ಮಕ್ಕಳನ್ನು ಸಹಾ ಕಳುಹಿಸಿ ಬಿಟ್ಟನು.

ಶನಿವಾರ ಬೆಳಿಗ್ಯೆ ಆತನಿಗೆ ಸ್ವಲ್ಪ ವಿಶ್ರಾಂತಿ ಇತ್ತು. ಆದರೆ ಆತನು ಕೂರುತ್ತಿರುವಾಗ್ಯೆ, ಕರ್ತನ ಕಡೆಗೆ ತಿರುಗದೆ ಹಿಂಜರಿದು ಆತನಿಗೆ ಬಹು ಚಿಂತೆಗೊಳ್ಳಿಸಿದ ಕೆಲವು ಜನರ ವಿಷಯದಲ್ಲಿ ಆಲೋಚಿಸುತ್ತಿದ್ದನೆಂಬ ಹಾಗೆ ತೋರುತ್ತದೆ. ಹ್ಯಾಗಂದರೆ: ಅವರು ದುಷ್ಟರು; ಸೈತಾನನು ಎಲ್ಲರನ್ನು ಹಾಳು ಮಾಡಿದ್ದಾನೆ—ಸೈತಾನನು, ಸೈತಾನನು,—ಇದನ್ನು ಅವರಿಗೆ ಕರ್ತನ ಹೆಸರಿನಲ್ಲಿ ಹೇಳಿರಿ, ಎಂದು ಆತನು ಹೇಳಿದ ಮಾತುಗಳು ಹತ್ತರದ ಕೋಣೆಯಲ್ಲಿ ಕೇಳಿಸಿದವು. ಸ್ವಲ್ಪ ಹೊತ್ತಿನ ತರುವಾಯ ಆತನು ಹೇಳಿದ್ದೇನಂದರೆ: ಅವರಿಗೆ ನನ್ನ ವಂದನೆಗಳನ್ನು ಹೇಳು; ಲ. ಇ. ಎಂಬವರ ಮುಖಾಂತರ ಅವರು ನನಗೆ ಕಳುಹಿಸಿದ್ದು ಬಂದು ಮುಟ್ಟಿತು, ಆದರೆ ಈಗ ನನ್ನಿಂದ ಬರಿಯಲಿಕ್ಕೆ ಆಗುವದಿಲ್ಲ.

ಸ್ಪಷ್ಟವಾಗಿ ತಿಳಿಯ ಕೂಡದ ಕೆಲವು ಮಾತುಗಳನ್ನು ನುಡಿದನಂತರ, ಆತನು ತಿರಿಗಿ ಹೇಳಿದ್ದು: ಎಲ್ಲವೂ ಈಗ ಬಹು ಕಾಲ ಹಿಂದಿನ ಸಮಾಚಾರವೆಂತ ತೋರುತ್ತದೆ;—ಅದು ಬಹು ಬಹು ಪೂರ್ವ ಕಾಲದ ಸುದ್ದಿ! ಅವನ್ನೆಲ್ಲಾ ಹತ್ತರ ತರ ಬೇಕು. ಆ ಕಾಲದಲ್ಲಿ ಪಾಪು ಸಾಹೇಬನೂ ಅವನ ಅಧ್ಯಕ್ಷರೂ ಅಲ್ಲಿ ಇದ್ದರು; ಮತ್ತು ಹುಸ್ಸನು ಸಹಾ ಇದ್ದನು; ಆದರೆ ಅವರು ಅವನನ್ನು ಹಗೆ ಮಾಡಿದರು,—ಅದ್ಯಾಕೆ? ಅವನ ತಪ್ಪೇನು? ಅವನು ದೇವರ ನೀತಿಯುಳ್ಳ ಮನುಷ್ಯನಾಗಿದ್ದನು,—ಆದರೆ ಅವನು ಅವರಿಗೆ ಅವರ ತಪ್ಪುಗಳನ್ನು ತಿಳಿಸಿದನು; ಆದ್ದರಿಂದ ಅವರು ಅವನನ್ನು ಹಿಡಿದರು. ಅವರು ಅವನನ್ನು ಕೊಲ್ಲ ಬೇಕೆಂದು ಹೇಳಿ, ಅವನನ್ನು ಕೊಂದರು. ಅವನು ರೋಮಾಯನಾಗಿದ್ದನು—ಹೌದು ಅವನು ರೋಮಾಯನೇ! ಆದರೆ ದೇವರು ಅವನನ್ನು ತನ್ನ ಸಾಕ್ಷಿಯಾಗಿ ಆರಿಸಿ ಕೊಂಡನು, ಮತ್ತು ಆ ಸಾಕ್ಷಿಗಾಗಿ ಅವನು ತನ್ನ ಪ್ರಾಣವನ್ನು ಬಿಟ್ಟನು. ಈ ಸಂಗತಿಗಳೆಲ್ಲಾ ನಮಗೆ ಈಗ ಬಹು ದೂರವಾಗಿವೆ; ಆದರೂ ಇನ್ನು ಹಾಗೆಯೇ; ಕ್ರಿಸ್ತನ ಸಾಕ್ಷಿಯು ಮರಣದ ಪರ್ಯಂತರಕ್ಕೂ ತನ್ನ ಪ್ರಾಣವು ತನಗೆ ಪ್ರಿಯವೆಂತ ಎಣಿಸ ಬಾರದು. ಹುಸ್ಸನು ಮನುಷ್ಯ ಮಾತ್ರನೇ, ಆದರೆ ಯೇಸುವು ದೇವರು, ಮತ್ತು ಅವನು ದೇವರ ಆದಿನಿರ್ಣಯದ ಪ್ರಕಾರ ಶ್ರಮೆ ಅನುಭವಿಸ ಬೇಕಾಯಿತು. ಪ್ರಧಾನಯಾಜಕರು ಅವನನ್ನು ಕೊಂದರು. ಆದಿಯಿಂದ ಯೇಸುವು ಕೊಲ್ಲ ಬೇಕಾದಂಥಾ ದೇವರ ಕುರಿಮರಿಯಾಗಿ ನೇಮಿಸಲ್ಪಟ್ಟಿದ್ದನು; ತಂದೆಯು ಆತನನ್ನು ಅದಕ್ಕಾಗಿ ಆರಿಸಿ ಕೊಂಡಿದ್ದನು; ಯಾಕಂದರೆ ಲೂಕನ ಸುವಾರ್ತೆಯ ಕಡೇ ಸಂಧಿಯಲ್ಲಿ ಹೀಗೆ ಬರದದೆ: “ಮತ್ತು ಹೀಗೆ ಕ್ರಿಸ್ತನು ಶ್ರಮೆ ಪಟ್ಟು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಏಳಲೂ, ಯೆರೂಸಲೇಮಿನಿಂದ ಆರಂಭವಾಗಿ ಎಲ್ಲಾ ಜನಾಂಗಗಳಿಗೆ ಮಾನಸಾಂತರವೂ ಪಾಪಪರಿಹಾರವೂ ಅವನ ಹೆಸರಿನಲ್ಲಿ ಸಾರಲ್ಪಡಲೂ, ಬೇಕಾಗಿತ್ತು.” ಆದರೆ ಅವನ ಸಾಕ್ಷಿಗಳಿಗೆ ಮೇಲಿನಿಂದ ತ್ರಾಣವು ಮೊದಲು ಕೊಡಲ್ಪಡ ಬೇಕಾಗಿತ್ತು. ಈ ಸಂಗತಿಗಳೆಲ್ಲ ಈಗ ಹತ್ತರ ತರ ಬೇಕು; ಯಾಕಂದರೆ ಅವೆಲ್ಲ

೧೮೦೦ ವರ್ಷಗಳ ಹಿಂದೆ ನಡದ್ದರಿಂದ, ಅವನ್ನು ನಿನ್ನ ನೆನಪಿನಲ್ಲಿ ಮಾತ್ರ ಇಟ್ಟು, ನಿನ್ನ ಹತ್ತರಕ್ಕೆ (ಹೃದಯಕ್ಕೆ) ತಾರದಿದ್ದರೆ, ಅವುಗಳಿಂದ ನಿನಗೇನೂ ಪ್ರಯೋಜನವಿಲ್ಲ. (ಇಷ್ಟು ಹೇಳಿ, ಆತನು ಎಚ್ಚತ್ತನು.)

ಆಗ ಕರಿಸಿದ ವೈದ್ಯನು: ಕಾಲಖಂಡ (liver) ಬಹು ಕೆಟ್ಟು ಹೋಗಿಯದೆ, ಆದ್ದರಿಂದ ಬೊಹೇಮ್ಯದಲ್ಲಿರುವ ಕಾರ್ಲ್ಸ್‌ಬಾದ್ ಎಂಬಲ್ಲಿಗೆ ಇನ್ನು ತಡ ಮಾಡದೆ ಹೋಗಿ, ಅಲ್ಲಿಯ ನೀರನ್ನು ಪ್ರಯೋಗಿಸ ಬೇಕೆಂದು ಹೇಳಿದನು. ತರುವಾಯ ಆ ಪ್ರಿಯ ರೋಗಿಯು ಉಳಿದ ದಿವಸವನ್ನು ಸಮಾಧಾನದಿಂದಲೇ ಕಳದನು. ಸಂಜೇ ಹೊತ್ತಿಗೆ ಆತನು ಶಾಫ್‌ಹೌಸೆನ್ ಎಂಬಲ್ಲಿರುವ ತನ್ನ ಮಕ್ಕಳ ವಿಷಯ ತನ್ನಷ್ಟಕ್ಕೆ ಮಾತಾಡುವದನ್ನು ಆತನ ಸೇವಕನು ಕೇಳಿದನು. ಅನಂತರ ಆತನು "ಅತಿಪ್ರಿಯ ಯೇಸುವೇ, ನಾವು ನಿನ್ನನ್ನು ಕಾದಿರುತ್ತೇವೆ" ಎಂಬ ಗೀತದ ಕೆಲವು ವಚನಗಳನ್ನು ಹಾಡಿ, ಹೇಳಿದ್ದೇನಂದರೆ: ಓ ನಮ್ಮ ಆತ್ಮಗಳ ಮದಲಿಂಗನೇ, ನಾವು ನಿನ್ನ ತಂದೆಯಾದ ದೇವರಿಗೆ ಪಟ್ಟದ ಯಾಜಕರಾಗುವಂತೆ ನಮ್ಮನ್ನು ನಿನ್ನ ಅಮೂಲ್ಯ ರಕ್ತದಿಂದ ಕೊಂಡು ಕೊಂಡಿದ್ಧೀ; ನೀನು ನಮ್ಮನ್ನು ಪ್ರೀತಿ ಮಾಡಿ, ನಮ್ಮ ಪಾಪಗಳನ್ನು ತೊಳದಿದ್ಧೀ; ಕರ್ತನೇ, ನಿನ್ನ ಕೃಪೆಯು ಅತಿ ದೊಡ್ಡದಾಗಿದೆ. ಹಲ್ಲೆಲೂಯ! ಆಮೆನ್.

ಸೋಮವಾರ ದಿವಸ ತನ್ನ ಮರಣಶಾಸನವನ್ನು ಕುರಿತು ಹೇಳಿ, ಬಾಸೆಲ್, ಶಾಫ್‌ಹೌಸೆನ್ ಮತ್ತು ಕಾರ್ಲಶ್ರೂಹೆ ಎಂಬ ಪಟ್ಣಗಳಲ್ಲಿರುವ ತನ್ನ ಸ್ನೇಹಿತರಿಗೆ ಕಾಗದಗಳನ್ನು ಬರಿಯಲಿಕ್ಕೆ ಅಪ್ಪಣೆ ಕೊಟ್ಟನು. ತಾನು ಅವರ ಬಳಿಗೆ ಬರುವದು ಅಸಾಧ್ಯವೆಂತಲೂ, ಆ ಮೂಲಕವಾಗಿ ಕರ್ತನು ಅವರಿಗೆ ಕಲಿಸುವದನ್ನು ಅವರು ಗ್ರಹಿಸ ಬೇಕೆಂತಲೂ, ತಾನು ಅವರಿಗೆ ಮೊದಲು ಪ್ರಸಂಗಿಸಿದ ಜೀವದ ವಾಕ್ಯವು ಅವರು ಹ್ಯಾಗೆ ಅಂಗೀಕರಿಸ ಬೇಕಿತ್ತೋ ಹಾಗೆ ಅದನ್ನು ಸ್ವೀಕರಿಸಿದ್ಧಾರೋ ಏನೆಂಬ ವಿಷಯ ಅವರು ತಮ್ಮನ್ನು ತಾವೇ ಚನ್ನಾಗಿ ಪರೀಕ್ಷಿಸಿ ನೋಡ ಬೇಕೆಂತಲೂ ಅವರಿಗೆ ತಿಳಿಸ ಬೇಕೆಂದು ಆತನು ಅಪೇಕ್ಷಿಸಿದನು.

ತರುವಾಯ ಆತನು ತನ್ನ ಮಕ್ಕಳಲ್ಲಿ ಇಬ್ಬರ ಸಂಗಡ ಅವರ ಆತ್ಮಗಳನ್ನು ಕುರಿತು ಸ್ಪಷ್ಟವಾಗಿ ಮಾತಾಡಿ, ಕಡೆಗೆ ಹೇಳಿದ್ದೇನಂದರೆ: ನಾನು ಈ ಸಂಗತಿಗಳನ್ನು ನಿಮಗೆ ತಿಳಿಸದಿದ್ದರೆ, ಕರ್ತನಲ್ಲಿ ನಿಮ್ಮ ತಂದೆಯೂ ಸ್ನೇಹಿತನೂ ಆಗಿರಲಾರೆ.

ಅದೇ ದಿವಸದ ಮಧ್ಯಾಹ್ನದಲ್ಲಿ ತನ್ನನ್ನು ಕಾದು ಕೊಂಡಿದ್ದ ಯೌವನಸ್ಥರಿಗೆ ಆತನು ಹೇಳಿದ್ದೇನಂದರೆ: ಈಗ ಒಂದು ಗೀತವನ್ನು ತೆಗದು ಸ್ವಲ್ಪ ಹಾಡಿರಿ; ಅದನ್ನು ಹುಡುಕುವದರಲ್ಲಿ ಹೆಚ್ಚು ಸಮಯ ಕಳಿಯುವದು ಅವಶ್ಯವಿಲ್ಲ. ನಿಮಗೆ ಮನಸ್ಸಿದ್ದ ಗೀತವನ್ನು ತೆಗದು, ಅದು ತೀರುವ ವರೆಗೆ ಆಗಿಂದಾಗ್ಯೆ ಕೆಲವು ವಚನಗಳನ್ನು ಹಾಡಿರಿ; ನೀವು ತಿರಿಗಿ ಹಾಡುವದಕ್ಕೆ ನನ್ನ ಅಪ್ಪಣೆಯನ್ನು ಕಾದು ಕೊಂಡಿರುವದು ಬೇಡ.

"ಆಹಾ, ಯೇಸುವೇ, ನನ್ನ ಮಹಿಮೆಯುಳ್ಳ ಪ್ರಕಾಶವೇ" ಎಂಬ ೩೪೯ನೇ, "ಓ ಪ್ರಿಯ ಯೇಸು, ನಿನ್ನ ಕರ್ಮವೇನು?" ಎಂಬ ೧೩೮ನೇ, "ಪ್ರಾತಃಕಾಲದಲ್ಲಿ ಸೂರ್ಯ ಮೂಡುವಾಗ" ಎಂಬ ೧೭೩ನೇ ಗೀತಗಳನ್ನು ವಿರ್ತೆಂಬರ್ಗ್ ಸಭೆಯ ರಾಗಪುಸ್ತಕದಿಂದ ಹಾಡಿದರು.

ಈ ಗೀತಗಳಲ್ಲಿ ಮೊದಲನೆದು "ಆಹಾ, ಯೇಸುವೇ, ನನ್ನ ಮಹಿಮೆಯುಳ್ಳ ಪ್ರಕಾಶವೇ"ಎಂಬದು ಆತನ ಅತಿಪ್ರಿಯ ರಾಗವಾಗಿತ್ತು. ಮತ್ತು ಈ ಸಮಯದಲ್ಲಿ ಅದನ್ನು ಹಾಡಿದ್ದರಿಂದ ಆತನು ವಿಶೇಷ ಸಂತೋಷ ಪಟ್ಟನು. ಹಾಡುವಾಗ ಯಾವಾಗಲೂ ಆತನು ಪ್ರಾರ್ಥನೆಯ ಭಾವದಿಂದಲೂ ಭಕ್ತಿಪುರಸ್ಸರವಾಗಿಯೂ ಹಾಡುವನು.

ಮಂಗಳವಾರ ಮೇ ೧೨ನೇ ದಿವಸ ಬೆಳಿಗ್ಯೆ: ನನ್ನ ಸ್ನೇಹಿತನಾದ ನ. ಹ್ಯಾಗಿದ್ದಾನೆ? ಎಂದು ಆತನು ಕೇಳಿದ್ದಕ್ಕೆ, ಅಲ್ಲಿ ಕಾಯುವವರು: ಅವನು ನಿಮ್ಮ ವಿಷಯ ಬಹಳ ಚಿಂತೆಯಲ್ಲಿದ್ದಾನೆ, ಮತ್ತು ನೀವು ಒಂಟಿಯಾಗಿರದ ಹಾಗೆ ನಿನ್ನೆ ಇಡೀ ರಾತ್ರಿ ನಿಮ್ಮ ಹತ್ತರ ಇರ ಬೇಕೆಂತ ಅವನಿಗೆ ಮನಸ್ಸಿತ್ತು, ಎಂದು ಹೇಳಿದರು.

ಇದನ್ನು ಕೇಳಿ, ನಸುನಗೆಯಿಂದ ಆತನು ಹೇಳಿದ್ದೇನಂದರೆ: ನಾನು ಎಂದೂ ಒಂಟಿಗನಾಗಿರುವದಿಲ್ಲವೆಂದು ಆತನಿಗೆ ತಿಳಿಸಿರಿ. ಇಡೀ ರಾತ್ರಿ ನನ್ನ ಪ್ರಿಯ ಮಕ್ಕಳು ನನ್ನ ಸಂಗಡ ಇದ್ದರು; ಅವರು ನನಗೆ ಸಹಾಯ ಮಾಡಲಿಕ್ಕೆ ಎಂದೂ ಸಿದ್ಧರಾಗಿದ್ದಾರೆ. ಮತ್ತು ನನಗೆ ಸ್ವಲ್ಪ ವಿಶ್ರಾಂತಿ ಇದ್ದಾಗ, ನಾನು ಅವರಿಗೆ ಪ್ರಸಂಗ ಮಾಡಿದೆನು. ಕೆಲವು ಸಾರಿ ಈಗ ಸಾಕೆಂತ ನೆನಸಿ ನಿಲ್ಲಲಿಕ್ಕೆ ಮನಸ್ಸಿದ್ದರೂ, ತಿರಿಗಿ ಪ್ರಸಂಗಿಸುತ್ತಾ ಹೋಗ ಬೇಕಾಯಿತು. ನಾನು ಹೇಳಲಿಕ್ಕಿರುವದೆಲ್ಲವೂ ಎಷ್ಟೋ ಸ್ಪಷ್ಟವಾಗಿ ನನ್ನ ಆತ್ಮದ ಮುಂದೆ ನಿಂತಿರುತ್ತದೆ! ಅದು ಎಷ್ಟೋ ಮಹಿಮೆಯುಳ್ಳದ್ದು! ಇದು ಬಹು ಸುಂದರ ಸಭೆಯು! ೧೮೩೯ನೇ ವರ್ಷದಲ್ಲಿ ನಾನು ಹಿಂದು ದೇಶದಲ್ಲಿದ್ದಾಗ ಬಹಳ ಅಸ್ವಸ್ಥವಾಗಿ ಕರ್ತನು ನನ್ನನ್ನು ಬಹುಶಾ ತನ್ನೆಡೆಗೆ ಶೆಳೆಯುವಾಗ, ಈ ಸಭೆಯನ್ನು ಒಂದು ಸ್ವಪ್ನದಲ್ಲಿ ತೋರಿಸಿದನು. ಮತ್ತು ನಾನು ವಿಲಾಯತಿಗೆ ತಿರುಗಿ, ಸ್ವಿತ್ಸರ್ಲಾಂದಿಗೆ ಬಂದು, ಅಲ್ಲಿಂದ ಸ್ಟುಟ್‌ಗಾರ್ಟಿಗೆ ಹೋದಾಗ, ಮುಂಚೆ ನನಗೆ ಕರ್ತನು ಕನಸಿನಲ್ಲಿ ಹ್ಯಾಗೆ ತೋರಿಸಿದ್ದನೋ, ಹಾಗೆಯೇ ಈ ಸಭೆಯನ್ನು ಕಂಡೆನು. ಈ ಪ್ರಿಯ ಜನರು ಯಾವಾಗಲೂ ನನ್ನ ಸುತ್ತಲು ಇದ್ದಾರೆ. ಬಹಳ, ಬಹಳ ಮಂದಿ ಯೌವನಸ್ಥರು ನನ್ನ ಹಿಂದೆ ಮುಂದೆಯೂ ಎಡ ಬಲಗಡೆಗಳಲ್ಲಿಯೂ ಇದ್ದಾರೆ. ಅವರು ಇಡೀ ರಾತ್ರಿ ನನ್ನ ಸಂಗಡ ಇರಲಿಚ್ಛೈಸುತ್ತಾರೆ. (ಆತನಿಂದ ತನ್ನ ಮಕ್ಕಳು ಎಣಿಸಿ ಕೊಳ್ಳುವವರು ಕ್ರಿಸ್ತನಲ್ಲಿ ಆತನ ಮಕ್ಕಳಾಗಿದ್ದಾರೆ.)—ಇಬ್ಬರು ಯೌವನಸ್ಥರು ಆತನಿಗೆ ಉಚಿತಗಳನ್ನು ಕಳುಹಿಸಿದ್ದಾರೆ ಎಂದು ಆತನಿಗೆ ತಿಳಿಸಲು: ಓ, ಆ ಹಣವು! ಅವರು ದೇವರ ವಾಕ್ಯವನ್ನು ಇನ್ನಷ್ಟು ಮನಸ್ಸು ಕೊಟ್ಟು ಕೇಳಿದರೆ, ಒಳ್ಳೇದಿತ್ತು. ಓ, ಬಡ ನ. ಧೊರೆಸಾನಿಯೇ!

ಮಂಗಳವಾರ ದಿವಸ ಮೇಲ್ವಿಚಾರಕರಾದ ಬಾಸೆಲ್ ಪಟ್ಣದ ಯೊಸೆನ್‌ಹನ್ಸ್ ಧೊರೆಯು ಆತನನ್ನು ನೋಡಲಿಕ್ಕೆ ಬಂದರು. ಆತನಿಗೆ ಬಹು ಸಂತೋಷವಾಗಿ, ರಾತ್ರಿಯು ಅಷ್ಟು ಬೇಸರವಿಲ್ಲದೆ ಕಳದು ಹೋಯಿತು.

ಬುಧವಾರ ೧೩ನೇ ದಿವಸ ೭ ಘಂಟೇ ಸಮಯದಲ್ಲಿ ಭಂಡಿಯಲ್ಲಿ ಸವಾರಿ ಮಾಡಲಿಕ್ಕೆ ಹೊರಡುವಾಗ, ಆತನು ತನ್ನ ಸಂಗಡ ಇದ್ದ ಇಬ್ಬರು ಯೌವನಸ್ಥರನ್ನು ಅತಿ ಸಂತೋಷದಿಂದ ನೋಡಿ, ಹೇಳಿದ್ದೇನಂದರೆ: ನಾನು ಎಷ್ಟೋ ಸುಖಿಯು! ನಾನು ಮಲಗಿ, ಏನೂ ಚಿಂತೆಯೂ ವ್ಯಥೆಯೂ ಇಲ್ಲದೆ ಸಾಯ ಬಹುದು. ನಾನು ಪರಾಮರಿಸ ತಕ್ಕವರು ಯಾರೂ ಇಲ್ಲ; ಸ್ವಲ್ಪವಾದರೂ ಚಿಂತೆಗೊಳ್ಳಿಸುವಂಥಾದ್ದು ನನಗೇನೂ ಇಲ್ಲ. ತಾಯಿ ತಂದೆ

ಯಾಗಲಿ, ಹೆಂಡತಿ ಮಕ್ಕಳಾಗಲಿ, ಯಾರೂ ಇಲ್ಲ. ನನ್ನಷ್ಟು ಸುಖಿಯು ಯಾರೂ ಇಲ್ಲ. ಆತನು ಹೊರಡುವ ಸ್ವಲ್ಪ ಮುಂಚೆ ತಾನು ಮಲಗುವ ಕೋಣೆಯಲ್ಲಿ ಪ್ರಾರ್ಥನೆ ಮಾಡುವದಕ್ಕೆ ಮೊಣಕಾಲೂರಿದನು; ಆದರೆ ಬಹು ಅಶಕ್ತನಾಗಿ ಏಳಲಿಕ್ಕಾಗದೆ ಇದ್ದದರಿಂದ, ಆತನನ್ನು ಕೈ ಹಿಡಿದು ಎತ್ತ ಬೇಕಾಯಿತು.

ಶಾಫ್‌ಹೌಸೆನ್ ಎಂಬಲ್ಲಿಂದ ತಂತಿಟಪ್ಪಾಲು ಮುಖಾಂತರ ನಿಮಗೆ ಬಹು ಪ್ರಿಯ ಸಹೋದರನಾದ ಸ್ಪ. ಧೊರೆಯು ನಿಮ್ಮನ್ನು ನೋಡಲಿಕ್ಕೆ ಬರ ಬಹುದೋ? ಎಂದು ಕೇಳಿದ್ದಕ್ಕೆ, ಆತನು: ದೇವರ ಕೃಪೆಯಿಂದ ರಾತ್ರಿಯಲ್ಲಿ ಸೌಖ್ಯವಿತ್ತು. ಹೀಗೆ ನನಗೆ ಸ್ವಸ್ಥವಾದೀತೆಂಬ ನಿರೀಕ್ಷಣೆ ಸಹಾ ಉಂಟು; ಆದರೆ ಮಾತಾಡುವದಕ್ಕೆ ಬಹು ನಿತ್ರಾಣಿಯಾಗಿದ್ಧೇನೆ; ಮತ್ತು ವಿಶ್ರಾಂತಿಯು ಅತಿ ದೊಡ್ಡ ವರವೇ, ಎಂದು ಪ್ರತ್ಯುತ್ತರ ಕಳುಹಿಸಿದನು.

ಆದರೆ ಆತನು ಅಷ್ಟು ವಿಶೇಷವಾಗಿ ಅಪೇಕ್ಷಿಸಿದ ವಿಶ್ರಾಂತಿಯು ಆತನಿಗೆ ದೊರಕದಿತ್ತು. ಮಧ್ಯಾಹ್ನದಲ್ಲಿ ಆತನಿಗೆ ನೋಡಲಿಕ್ಕೆ ಬಹಳ ಮಂದಿ ಜನರು ಬಂದರು; ಮತ್ತು ಅವರ ಹತ್ತರ ಆತನು ಮಾಡಿದ ದೀರ್ಘ ಸಂಭಾಷಣೆಗಳಿಂದ ಆತನಿಗೆ ಬಹಳ ಆಯಾಸವಾಯಿತು. ಮರು ದಿವಸ ಆತನು: ನನ್ನಲ್ಲಿ ಉಳದ ಸ್ವಲ್ಪ ತ್ರಾಣ ಕೂಡ ಆ ಜನರು ತಿಂದು ಬಿಟ್ಟರು. ಆದರೆ ನಾನು ಅವರನ್ನು ಮಾತಾಡದೆ ಕಳುಹಿಸ ಕೂಡದಿತ್ತು. ನಾನು ಅವರ ಸಂಗಡ ಮಾತಾಡಿದ್ದಕ್ಕಾಗಿ ಎಷ್ಟೋ ಸಂತೋಷ ಪಡುತ್ತೇನೆ.—ಬಂದವರಲ್ಲಿ ಒಬ್ಬನ ಹೆಸರನ್ನು ತೆಗದು, ಆತನು ಹೇಳಿದ್ದೇನಂದರೆ: ಆ ಬಡ ಮನುಷ್ಯನು ಬಂದು ನನ್ನನ್ನು ನೋಡುವಷ್ಟು ಧೈರ್ಯ ಹೊಂದಿದ್ದು ದೊಡ್ಡದೇ, ನಾನು ಅದಕ್ಕಾಗಿ ಸಂತೋಷ ಪಡುತ್ತೇನೆ; ಆದರೆ ಇನ್ನೂ ಅವನು ಬಹು ಹೆಡ್ಡನು; ಅವನಿಗೇನೂ ಬುದ್ಧಿ ಇಲ್ಲ.

ಯಾರಿಗೆ ದೇವರ ವಾಕ್ಯವನ್ನು ಪ್ರಸಂಗಿಸುವದರಲ್ಲಿ ಆತನು ತನ್ನ ಕಡೇ ತ್ರಾಣವನ್ನು ವೆಚ್ಚ ಮಾಡಿದ್ದನೋ, ಅಂಥವರು ಆ ವಾಕ್ಯವನ್ನು ತಮ್ಮ ಆತ್ಮರಕ್ಷಣೆಗಾಗಿ ಹೃದಯದಲ್ಲಿರಿಸಿದರೆ, ಎಷ್ಟೋ ಒಳ್ಳೇದು.

ಹೋದ ದಿವಸ ಪಟ್ಟ ಶ್ರಮೆಯಿಂದಲೂ ರಾತ್ರಿಯಲ್ಲಿ ಸೌಖ್ಯವಿಲ್ಲದ್ದರಿಂದಲೂ ಗುರುವಾರ ದಿವಸ ಬೆಳಿಗ್ಯೆ ಐದು ಘಂಟೇ ಸಮಯದಲ್ಲಿ ಆತನು ತನ್ನ ಮಂಚದ ಮೇಲೆ ಬಹು ಕಳವಳದಿಂದ ಮಲಗಿದ್ದನ್ನು ಆತನ ಮಕ್ಕಳು ಕಂಡರು. ಆತನು ತನ್ನ ದೇವವಾಕ್ಯ ಪುಸ್ತಕವನ್ನು ಕೇಳಿ, ೨೨ನೇ ಕೀರ್ತನೆಯನ್ನು ಮೆಲ್ಲಗೆ ಓದಿದನು. "ನನ್ನ ಶಕ್ತಿ ಬೋಕಿಯ ಹಾಗೆ ಒಣಗಿ ಹೋಗಿದೆ; ನನ್ನ ನಾಲಿಗೆ ಅಂಗಳಕ್ಕೆ ಹತ್ತುತ್ತದೆ; ಮರಣದ ಧೂಳಿಗೆ ನನ್ನನ್ನು ಹಾಕುತ್ತೀ" ಎಂಬ ಈ ವಚನವನ್ನು ಓದಿದಾಗ, ಹೇಳಿದ್ದೇನಂದರೆ: ನನ್ನ ವಿಷಯದಲ್ಲಿ ಈ ವರೆಗೆ ಇದು ಪೂರ್ಣ ಸತ್ಯವೆಂತ ಹೇಳ ಕೂಡದು; ಆದರೂ ಸ್ವಲ್ಪ ಉಂಟು,—ಹೌದು; ಆದರೆ ಕರ್ತನಾದ ಯೇಸುವು ನನಗೋಸ್ಕರ ಎಲ್ಲವನ್ನು ತೀರಿಸಿದ್ದಾನೆ. ಜೀವವು ಸವೆದು ಹೋಗುವಂಥಾದ್ದು ಈಗ ನನ್ನಲ್ಲಿ ಚನ್ನಾಗಿ ಪ್ರಾರಂಭವಾಗಿಯದೆ.

ಸ್ವಲ್ಪ ಹೊತ್ತಿನನಂತರ, ಆತನು ತಿರಿಗಿ ಹೇಳಿದ್ದೇನಂದರೆ: ಕಾರ್ಲ್ಸಬಾದಿಗೆ ನಾನು ಹೋಗುವದು ತೋರುವದಿಲ್ಲ,—ಆಹಾ, ಹೌದು ನನ್ನ ಪ್ರೀಯ ಯೇಸುವೇ! ಅದೇ ದಿವಸದ ಹತ್ತು ಘಂಟೇ ಸಮಯಕ್ಕೆ ತಿರಿಗಿ ಆತನು ತನ್ನ ಮಕ್ಕಳಲ್ಲಿ ಒಬ್ಬನಿಗೆ ಹೇಳಿದ್ದೇನಂದರೆ: ಈಗ ನಾನು ನನ್ನ ಪ್ರಿಯ ಸಹೋದರನಾದ ಕ. ಎಂಬವನನ್ನು ಕುರಿತು ಆಲೋಚಿಸು

ತ್ತಿದ್ದೆನು. ಆತನು ಬೇಗ ಬರುವನೆಂದು ನೀನು ನೆನಸುತ್ತೀಯಾ? ಆಗ ಆತನ ಮಕ್ಕಳಲ್ಲಿ ಒಬ್ಬನು ಆತನಿಗೆ ಹೇಳಿದ್ದು: ನಿಮಗೆ ಇರುವ ಆತ್ಮವು ನನಗೆ ದಯಪಾಲಿಸ ಬೇಕೆಂದು ನಾನು ಕರ್ತನಿಗೆ ಕೇಳಿದ್ದೇನೆ. ಆಗ ಮುದುಕನು ನಕ್ಕು, ಹೇಳ ಕೂಡದ ಕನಿಕರದಿಂದ: ಸರಿ, ಆ ಆತ್ಮವನ್ನು ಹೊಂದ ಬೇಕಾದರೆ ನಾವು ಅತಿ ವಿಧೇಯ ಮಕ್ಕಳಾಗಿರ ಬೇಕು; ಆದರೆ ನೀನು ಇನ್ನು ಎಂಥಾ ಅವಿಧೇಯನು, ಎಂದು ಹೇಳಿದ್ದಕ್ಕೆ, ಆ ಹುಡುಗನು: ನಾನು ವಿಧೇಯನಾಗಲಿಕ್ಕೆ ಅಪೇಕ್ಷಿಸುತ್ತೇನೆ, ಎಂದು ಪ್ರತ್ಯುತ್ತರ ಕೊಟ್ಟನು. ಆಗಲಾತನು: ಅದು ಸರಿ, ಎಲ್ಲಾದಕ್ಕೂ ಒಂದು ಪ್ರಾರಂಭ ಉಂಟು, ಅಂದನು.

ಮಧ್ಯಾಹ್ನದಲ್ಲಿ ಆತನು ಒಬ್ಬನೇ ತನ್ನ ಹಾಸಿಗೆಕೋಣೆಯಲ್ಲಿದ್ದಾಗ, ಒಬ್ಬ ದೊಡ್ಡ ಮನುಷ್ಯನನ್ನು ಕುರಿತು ಆಲೋಚಿಸುತ್ತಿದ್ದನೆಂತ ತೋರುತ್ತದೆ. ಹ್ಯಾಗಂದರೆ ಆಗ ಆತನು ಹೇಳಿದ್ದು: ಆ ಮನುಷ್ಯನು ಮಾನಸಾಂತರ ಪಟ್ಟು, ತಾನು ದೇವರ ಸದ್ವಾಕ್ಯವನ್ನು ಪ್ರಸಂಗಿಸಲಿಲ್ಲವೆಂದು ಬಹಿರಂಗವಾಗಿ ಅರಿಕೆ ಮಾಡಿ, ಕರ್ತನಾದ ಯೇಸುವಿನಲ್ಲಿ ಹೊಸ ಪ್ರಾರಂಭವನ್ನು ಮಾಡಿದರೆ, ಕಡೆಗೆ ಎಲ್ಲವೂ ಸರಿಯಾಗುವದು. ಕರ್ತನಾದ ಯೇಸುವಿನ ಹೆಸರಿನಲ್ಲಿ ಮಾಡದೆ ಇರುವಂಥಾದ್ದೆಲ್ಲವೂ ಎಂದೆಂದಿಗೂ ನಿರರ್ಥಕವಾಗಿ ಹೋಗುವದು. ಆದರೆ ಘನ ಉದ್ಯೋಗದಲ್ಲಿ ಇರುವವನು ತನ್ನ ಮಾನವನ್ನು ಮನುಷ್ಯನೆದಿರಿನಲ್ಲಿ ತೊರೆದು ಬಿಟ್ಟು, ಕ್ರಿಸ್ತನಿಗೋಸ್ಕರ ಹುಚ್ಚನಾಗುವದು ಬಲು ಕಷ್ಟವಾಗಿದೆ.

ಸಾಯಂಕಾಲದಲ್ಲಿ ಆತನು ನ. ಸ. ಧೊರೆಗೆ ಹೇಳಿದ್ದೇನಂದರೆ: ನಾನು ನಿಮಗೆ ಕೆಲವು ಕಾಲದ ಮುಂಚೆ ನೋಡಿದ್ದು ಮೊದಲ್ಗೊಂಡು ಅತಿ ಪ್ರಿಯ ಆತ್ಮಗಳು ಕರ್ತನ ಕಡೆಗೆ ತಿರುಗಿಯವೆ; ಅವರು ಯೌವನಸ್ಥರಾದ ವೀರರೇ! ದೇವರು ಅವರಿಗೆ ಮರ್ಮವನ್ನು ಪ್ರಕಟಿಸಿದ್ದಾನೆ. ಅವರಿಗೆ ಅದೆಲ್ಲ ಒಂದೇ ಸಾರಿ ಶಿಕ್ಕಿತು. ಅವರು ದುಷ್ಟನನ್ನು ಜೈಸಿದ್ಧಾರೆ! ಅದು ಮಹಿಮೆಯ ಕಾರ್ಯವಲ್ಲವೊ?

ನಿನ್ನ ಪಾಪಗಳು ನಿನಗೆ ತಿಳದರೂ ತಿಳಿಯದಿದ್ದರೂ ನೀನು ಹ್ಯಾಗೆ ಇದ್ಧೀಯೋ, ಹಾಗೆಯೇ ಯೇಸುವಿನ ಕಡೆಗೆ ಬಾ. ಯೇಸುವಿನ ಬಳಿಗೆ ಯಾರು ಬರುತ್ತಾರೋ, ಅವರು ಅಂಗೀಕರಿಸಲ್ಪಡುವರು. ಯೇಸು ಅವರೆಲ್ಲರನ್ನು ಅಂಗೀಕರಿಸುತ್ತಾನೆ. ಆಹಾ, ನನ್ನ ಕರ್ತನು, ನಾನು ಸೇವಿಸುವಂಥಾ ಕರ್ತನು, ಎಂಥಾ ಕರ್ತನು! ಪರಿಶುದ್ಧ ವಸ್ತ್ರಗಳನ್ನು ಧರಿಸಿ, ಆತನನ್ನು ಆರಾಧಿಸುವಾ! ಆತನು ನನ್ನನ್ನು ಮೊದಲು ಪ್ರೀತಿ ಮಾಡಿದ್ದಾನೆ, ಆದದರಿಂದ ನಾನು ಆತನನ್ನು ತಿರಿಗಿ ಪ್ರೀತಿಸುತ್ತೇನೆ. ಎಲ್ಲಾ ಮರ್ಮವು ಇದರಲ್ಲಿ ಅದೆ. ಆಹಾ ನಮ್ಮ ದೇವರ ಕೃಪೆಯು ಆಶ್ಚರ್ಯಕರವಾಗಿದೆ! ಯೇಸು ಪಾಪಿಷ್ಠರನ್ನು, ನಮ್ಮಂಥ ಪಾಪಿಷ್ಠರನ್ನು ಅಂಗೀಕರಿಸುತ್ತಾನೆ. ನಮ್ಮನ್ನು ನಾವೇ ಹೆಚ್ಚಿಸಿ ಕೊಂಡು, ಎಂದೂ ಗರ್ವ ಪಡದಿರುವಾ. ಹೋದ ಕೆಲವು ವಾರಗಳಲ್ಲಿ ಕರ್ತನು ನನಗೆ ಕೊಟ್ಟದ್ದು ಇದೇ, ಅಂದರೆ ಈ ಪ್ರಿಯ ಆತ್ಮಗಳು. ಅವರು ಗುಣವಂತರು, ಮತ್ತು ನಾನು ನನ್ನ ಪ್ರಸಂಗಗಳನ್ನು ತೀರಿಸುವ ಮೊದಲೇ ಕೆಲವು ಕನ್ಯರು ಸಹ ಕರ್ತನ ಕಡೆಗೆ ತಿರುಗಿದರು.

ಕರ್ತನಿಗೆ ನಾನು ಶಿಕ್ಕಿ, ಈಗ ಪೂರ್ಣ ೪೭ ವರ್ಷಗಳಾದವು. ಈ ಇಡೀ ಸಮಯವೆಲ್ಲ ಆತನು ನನ್ನನ್ನು ತನ್ನ ಮಗ್ಗುಲಲ್ಲಿ ಹೊತ್ತು ಕೊಂಡು, ಅತಿ ಮಹಿಮೆಯಿಂದ ನನ್ನನ್ನು ನಡಿಸಿದ್ಧಾನೆ. ಆತನು ಯಾವಾಗಲೂ ನನ್ನೊಡನೆ ನ್ಯಾಯವಿಚಾರ ಮಾಡಲಿಲ್ಲ; ಆತನು ಇ

ದು ವರೆಗೆ ನಂಬಿಕೆಯುಳ್ಳವನಾಗಿದ್ಧಾನೆ; ಮತ್ತು ಕಡೇ ವರೆಗೂ ನಂಬಿಕೆಯುಳ್ಳವನಾಗಿರುವನು. ಈಗ ನಾನು ಮರಣದ ದ್ವಾರದ ಬಳಿಯಲ್ಲಿದ್ದೆನು. ನಾನು ಹೊರಡುವದಕ್ಕೆ, ನನ್ನ ಕರ್ತನ ಕಡೆಗೆ ಹೋಗುವದಕ್ಕೆ ಬಹಳ ಅಪೇಕ್ಷಿಸಿದ್ದೆನು! ನನಗೆ ಜೀವದ ಬೇಸರ ಬಂತು! ನಾನು ಬಹಳ ಕಷ್ಟ ಪಟ್ಟದ್ಧೇನೆ.

(ಬರುವ ಅಂಕೆಯಲ್ಲಿ ಮುಂದೆ ಸಾಗಿಸುವದು.)

ಪ್ರಧಾನಯಾಜಕತ್ವವು.



ಇಲ್ಲಿ ಬರದ ಚಿತ್ರವು ಹಳೇ ಒಡಂಬಡಿಕೆಯ ಪ್ರಕಾರವಾದ ಪ್ರಧಾನ ಯಾಜಕನ ರೂಪವನ್ನು ತೋರಿಸುತ್ತದೆ. ಅವನ ವಸ್ತ್ರ, ನ್ಯಾಯದ ಪದಕವು, ಎಫೋದ್, ಮುಂಡಾಸದ ಮುಂದು, ಇವುಗಳ ವಿವರವು ಹೊರಡೋಣ ಪುಸ್ತಕದ ೨೮ನೆ ಸಂಧಿಯಲ್ಲಿ ೬ನೆ ವಚನದಿಂದ ೩೮ರ ವರೆಗೆ ಬರದದೆ.

ಪ್ರಧಾನಯಾಜಕನು ದೇವರಿಗೂ ತನ್ನ ಜನಾಂಗಕ್ಕೂ ಮಧ್ಯಸ್ಥನಾಗಿ ವರುಷಕ್ಕೆ ಒಂದು ಸಾರಿ ಇವನಲ್ಲದೆ ಮತ್ತ್ಯಾವನೂ ಹೊಗಲಾರದ ಪರಿಶುದ್ಧ ಸ್ಥಳಕ್ಕೆ ರಕ್ತದೊಡನೆ ಪ್ರವೇಶಿಸಿ, ತನಗೋಸ್ಕರವೂ ಜನರ ಪಾಪಗಳಿಗೋಸ್ಕರವೂ ಅರ್ಪಿಸ ಬೇಕಾಯಿತು. ಇದು ಮುಂದಿನ ಕಾರ್ಯಗಳಿಗೆ ಮುಂಗುರ್ತವಾಯಿತು. ಹೊಸ

ಒಡಂಬಡಿಕೆಯ ಮಕ್ಕಳಾದ ನಮಗೂ ಒಬ್ಬ ಪ್ರಧಾನಯಾಜಕನು ಇದ್ದಾನೆ. ಅವನು ಮನಸ್ಸಾಕ್ಷಿಯ ಪ್ರಕಾರ ಸಂಪೂರ್ಣ ಮಾಡಲಾರದ ಕಾಣಿಕೆ ಬಲಿಗಳನ್ನರ್ಪಿಸುವವನಲ್ಲ. ಯೇಸು ಕ್ರಿಸ್ತನು ಪ್ರಧಾನಯಾಜಕನಾಗಿ ಬಂದು, ಕೈಕೆಲಸದ್ದು ಅಂದರೆ ಈ ಸೃಷ್ಟಿಯದ್ದು ಆಗಿರದೆ, ಅಧಿಕವಾದಂಥ ಸಂಪೂರ್ಣತರವಾದಂಥ ಗುಡಾರದಿಂದ ಹೋತ ಹೋರಿಗಳ ರಕ್ತದಿಂದಲ್ಲ, ಸ್ವಂತ ರಕ್ತದಿಂದಲೇ ನಿತ್ಯವಿಮೋಚನೆಯನ್ನು ಸಂಪಾದಿಸಿ ಕೊಂಡು, ಒಂದೇ ಸಾರಿ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿದನು. ಆತನು ನಮಗೋಸ್ಕರ ದೇವರ ಸಮುಖದಲ್ಲಿ ಪ್ರತ್ಯಕ್ಷವಾಗುವದಕ್ಕೆ, ಪರಲೋಕದಲ್ಲಿಯೇ ಪ್ರವೇಶಿಸಿದ್ದಾನೆ. ಯುಗಗಳ ಅಂತ್ಯದಲ್ಲಿ ತನ್ನನ್ನು ಬಲಿಯಾಗಿ ಅರ್ಪಿಸುವದರಿಂದ ಪಾಪ ನಿವರ್ತನೆ ಮಾಡುವದಕ್ಕೆ ಪ್ರತ್ಯಕ್ಷವಾಗಿ, ಈ ಒಂದೇ ಅರ್ಪಣೆಯಿಂದ ಪರಿಶುದ್ಧ ಮಾಡಲ್ಪಡುವವರನ್ನು ಸದಾಕಾಲಕ್ಕೆ ಸಂಪೂರ್ಣ ಮಾಡಿದ್ದಾನೆ.

ಹಾಗಾದರೆ, ಸಹೋದರರೇ, ಯೇಸುವಿನ ರಕ್ತದ ಮೂಲವಾಗಿ, ಅವನು ತೆರೆಯಿಂದ— ಅಂದರೆ, ತನ್ನ ಮಾಂಸದಿಂದ—ನಮಗೆ ಪ್ರತಿಷ್ಠೆ ಮಾಡಿದ ಜೀವವುಳ್ಳ ಹೊಸ ಮಾರ್ಗವಾಗಿ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸುವದಕ್ಕೆ ಧೈರ್ಯವೂ, ದೇವರ ಮನೆಯ ಮೇಲಾಗಿರುವ ಮಹಾಯಾಜಕನೂ ನಮಗೆ ಉಂಟಾಗಿರುವದರಿಂದ, ಸತ್ಯವಾದ ಹೃದಯದಿಂದಲೂ ವಿಶ್ವಾಸದ ಪೂರ್ಣ ನಿಶ್ಚಯದಿಂದಲೂ, ಕೆಟ್ಟ ಮನಸ್ಸಾಕ್ಷಿಯ ಪರಿಹಾರಕ್ಕಾಗಿ ಚಿಮಿಕಿಸಲ್ಪಟ್ಟ ಹೃದಯಗಳುಳ್ಳವರಾಗಿಯೂ, ನಿರ್ಮಲವಾದ ನೀರಿನಿಂದ ತೊಳಿಯಲ್ಪಟ್ಟ ಶರೀರವುಳ್ಳವರಾಗಿಯೂ, ಶೇರೋಣ. ನಿರೀಕ್ಷೆಯ ಅರಿಕೆಯನ್ನು ಚಪಲವಿಲ್ಲದೆ ಹಿಡಿಯೋಣ; ಯಾಕಂದರೆ ವಾಗ್ದತ್ತ ಮಾಡಿದವನು ನಂಬಿಕೆಯುಳ್ಳವನು. ಮತ್ತು ಪ್ರೀತಿಗೂ ಸತ್ಕ್ರಿಯೆಗಳಿಗೂ ಪ್ರೇರೇಪಿಸುವದಕ್ಕೆ ಒಬ್ಬರನ್ನೊಬ್ಬರು ಆಲೋಚಿಸೋಣ. ಕೆಲವರಿಗೆ ವಾಡಿಕೆ ಇರುವ ಪ್ರಕಾರ, ನಾವು ಕೂಡಿ ಬರುವದನ್ನು ಬಿಡದೆ, ಬುದ್ಧಿ ಹೇಳೋಣ; ಮತ್ತು ಆ ದಿನವು ಸಮಿಾಪಿಸುವದನ್ನು ನೀವು ನೋಡುವಷ್ಟು ಅಧಿಕವಾಗಿಯೇ. ಯಾಕಂದರೆ ನಾವು ಸತ್ಯದ ತಿಳುವಿಕೆಯನ್ನು ಹೊಂದಿದ ಮೇಲೆ ಬೇಕಾಗಿ ಪಾಪ ಮಾಡಿದರೆ, ಪಾಪಗಳಿಗೋಸ್ಕರ ಬಲಿಯು ಇನ್ನು ಇರುವದಿಲ್ಲ; ಆದರೆ ನ್ಯಾಯತೀರ್ವಿಕೆಯನ್ನೂ ವಿರೋಧಿಗಳನ್ನು ಭಕ್ಷಿಸಲಿರುವ ಕೋಪಾಗ್ನಿಯನ್ನೂ ಎದುರು ನೋಡುವ ಭಯವೇ.

ಸಪ್ತೆಂಬರ್ ೨೪ನೇ ತಾರಿಕಿನಲ್ಲಿ ಮಂಗಳೂರಿನಲ್ಲಿ ಮಿಶ್ಯನ್ ಹಬ್ಬವಿತ್ತು. ಮುಲ್ಕಿ ಉಡ್ಪಿ ಆನಂದಪುರವೆಂಬ ಠಾಣ್ಯಗಳ ಸಭೆಯವರಲ್ಲಿ ಸಹಾ ಕೆಲವರು ಬಂದಿದ್ದರು.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. **NOVEMBER 1868.** ಅಂಕೆ ೫.

ಪೊಬಿಕ್ ಧೊರೆಯ

ಕಡೇ ಹದಿನಾಲ್ಕು ದಿನಗಳ ಸಮಾಚಾರವು.

(4ನೇ ಅಂಕೆಯಿಂದ ಮುಂದೆ.)

ಆ ಸಹೋದರನು ಹೊರಟಾಗ ಈತನು ಬಹಳ ಕನಿಕರದಿಂದ ಅವನ ಕಡೆಗೆ ನೋಡಿ, ಹೇಳಿದ್ದು: ಇನ್ನೊಂದು ಸಾರಿ ನಿನಗೆ ನೋಡಿದ್ದರಿಂದ ನನಗೆ ಬಹಳ ಸಂತೋಷವಾಯಿತು. ಯಾವಾಗಲೂ, ಮುಖ್ಯವಾಗಿ ನಿನ್ನ ಕಡೇ ತಾಸು ಸಮಿಾಪಿಸುವಾಗ, ನಿನ್ನ ಯೇಸುವನ್ನೇ ಒತ್ತಿರು. ಕರ್ತನು ನಂಬಿಕೆಯುಳ್ಳವನು; ಅವನು ಎಂದೂ ನಿನ್ನನ್ನು ಬಿಡಲಾರನು, ಮರೆಯಲಾರನು.

ಶುಕ್ರವಾರ ದಿವಸ ಬೆಳಿಗ್ಯೆ ೪ ಘಂಟೇ ಸಮಯಕ್ಕೆ ಆತನು ತನ್ನ ಮಂಚದ ಮೇಲೆ ಮಲಗಿರುವಾಗ ಹೇಳಿದ್ದು: ನೀನು ಮರಣದ ಕಷ್ಟವನ್ನು ಬಿಡಿಸಿದ್ದೀ!—ಈ ಮಾತನ್ನು ಆತನು ಸುಮಾರು ಆರು ಸಾರಿ ಬಹು ಭಕ್ತಿಯಿಂದ ಹೇಳಿದನು.

ಆಗ ಆತನ ಶ್ರಮೆಯು ಅತಿ ವಿಶೇಷವಾಗಿ, ತಾಳ ಕೂಡದಂಥಾದ್ದಾಗಿ ಇತ್ತು. ಆದರೆ ನೋವಿನಿಂದ ಮರಗುವದರ ಬದಲಿಗೆ ಪರಲೋಕ ಸಂತೋಷದಿಂದ ಶೋಭಿಸುವ ಮುಖವುಳ್ಳವನಾಗಿ, ಅತಿ ಮಧುರ ಸ್ವರದಿಂದ: "ಓ, ಒಳ್ಳೇ ಕರ್ತನೇ," ಎಂಬ ಮಾತನ್ನು ಸುಮಾರು ನೂರು ಸಾರಿ ತಿರಿಗಿ ತಿರಿಗಿ ಹೇಳಿ: ನಿನ್ನ ಬಳಿಯಿಂದ ಬರುವದೆಲ್ಲವೂ ಕಹಿಯಾಗಿದ್ದರೂ, ನನಗೆ ಹಿತವಾಗಿದೆ. ನನ್ನನ್ನು ಪ್ರೀತಿ ಮಾಡುವ ಕರ್ತನ ಕಡೆಯಿಂದ ಇದೆಲ್ಲ ಬರುತ್ತದೆ.

ಆತನ ಮಕ್ಕಳಲ್ಲಿ ಇಬ್ಬರು ಆ ರಾತ್ರಿ ಸಹಾ ಆತನ ಸಂಗಡ ನಿಲ್ಲ ಬೇಕೆಂಬ ತಮ್ಮ ಅಪೇಕ್ಷೆಯನ್ನು ತಿಳಿಸಲು, ಆತನು ಅದು ಬಹಳ ಉಪಕಾರವೆಂದೆಣಿಸಿದನು. ಮುಂಚಿನ ರಾತ್ರಿ ಅವರನ್ನು ತಮ್ಮ ಮನೆಗೆ ಕಳುಹಿಸಿದ್ದನು. ಈ ಪ್ರಿಯ ಜನರು ಆ ರಾತ್ರಿ ಮಾತ್ರವಲ್ಲ, ಆತನ ಜೀವದ ಕಡೇ ನಿಮಿಷದ ವರೆಗೂ ಅಲ್ಲಿಯೇ ಇದ್ದರು.

ಆತನು ಹೇಳಿದ್ದು: ಆತ್ಮವು ವ್ಯಥೆ ಪಡುವದಿಲ್ಲ; ಅಲ್ಲಿ ಎಲ್ಲಾ ಸಮಾಧಾನ ಉಂಟು, ಏನೂ ನೋವು ಇಲ್ಲ; ದೇಹವು ಮಾತ್ರ ಶ್ರಮೆ ಪಡುತ್ತದೆ. ಕರ್ತನು ನನ್ನ ಪಾಲೂ ನನ್ನ ರಕ್ಷಣೆಯೂ ನನ್ನ ಘನವೂ ನನ್ನ ತ್ರಾಣವೂ ನನ್ನ ಆಧಾರವೂ ನನ್ನ ಸಮಾಧಾನವೂ ನನ್ನ ಜೀವವೂ ನನ್ನ ಸಂತೋಷವೂ ನನ್ನ ಮಹಿಮೆಯೂ ನನ್ನ ಸಮಸ್ತವೂ ಆಗಿದ್ದಾನೆ. ನಾನು ನಿನ್ನನ್ನು ಕುರಿತು ಸಾಕ್ಷಿ ಕೊಟ್ಟದ್ದನ್ನು ನನ್ನ ಬಾಯಿಯಲ್ಲಿ ನಿನ್ನ ಅಮೂಲ್ಯವಾದ ಪರಿಶುದ್ಧಾತ್ಮನಿಂದ ಹಾಕಲ್ಪಟ್ಟಿತು. ಆಹಾ! ಪ್ರಿಯ ತಂದೆಯೇ, ಪರಿಶುದ್ಧ ದೇವರೇ, ಒಳ್ಳೆ ಕರ್ತನೇ, ಅತ್ಯಂತ ದಯಾಳು ರಕ್ಷಕನೇ!

ಆತನು ಸಹೋದರನಾದ ನ. ನ. ಧೊರೆಗೆ ಹೇಳಿದ್ದು: ನೀನು ನಿನ್ನ ಕರ್ತನನ್ನು ಹಿಡಿಯ ಬೇಕು; ನೀನು ನಿನ್ನ ಕರ್ತನನ್ನು ಘನ ಪಡಿಸಿ, ಸೈತಾನನನ್ನು ಈಗಲೇ ಹೋಗೆಂದು ಹೇಳು. ಕರ್ತನು ಈಗ ನನ್ನನ್ನು ಮನೆಗೆ ವೈದರೆ, ಹೇಳ ಕೂಡದ ಸಂತೋಷದಿಂದ ಸಂತೋಷಿಸುವೆನು. ಎಲ್ಲವು ಚನ್ನಾಗಿದೆ. ನನಗೂ ನನ್ನ ಕರ್ತನಿಗೂ ಮಧ್ಯವೇನೂ ಇಲ್ಲ, ಇಲ್ಲ, ಏನೂ ಇಲ್ಲ. ನಾನು ನನ್ನ ಹೃದಯಪೂರ್ವಕವಾಗಿ ಸಂತೋಷಿಸುತ್ತೇನೆ. ಅವನು ಎಂದೂ.... ಇದನ್ನು ಹೇಳಿ, ನಿದ್ರೆ ಹೋದನು.

ಅದೇ ದಿವಸ ಆತನು ಒಬ್ಬ ಯೌವನಸ್ಥನಿಗೆ ಹೇಳಿದ್ದು: ನಾನು ಈಗ ನನ್ನ ಕರ್ತನ ಆನಂದದಲ್ಲಿ ಪ್ರವೇಶಿಸುವೆನು, ಎಂದು ನಂಬುತ್ತೇನೆ. ಒಳ್ಳೆ ಮಕ್ಕಳಾಗಿರ್ರಿ, ಮತ್ತು ಕರ್ತನು ನಿಮ್ಮ ಸಂಗಡಲೂ, ನಿಮ್ಮ ಎಲ್ಲವೂ ಆಗಿ ಇರಲಿ! ಅರೆವಾಶಿ ಸಲ್ಲದು, ಅದೆಲ್ಲ ಬರಿದೇ. ಸಹೋದರನಾದ ನ. ಧೊರೆಗೆ ನನ್ನ ವಂದನೆ ಹೇಳು; ಮತ್ತು ಅವನಿಗೂ ಅವನ ಕರ್ತನಿಗೂ ನಡುವೆ ಏನೂ ಬರ ಬಿಡ ಬಾರದೆಂದು ಹೇಳು. ನನ್ನ ಸಮಯವು ತೀರಿತೆಂದು ನನಗೆ ಅಂತರ್ಯದಲ್ಲಿ ಒಂದು ಭಾವನೆ ಉಂಟು. ನಮ್ಮ ಕೃಪೆಯುಳ್ಳ ಕರ್ತನಾದ ಯೇಸುವಿಗೆ ಬಹು ಒತ್ತಾಗಿರು; ಆತನ ಹೆಸರಿಗಾಗಿ ಹುಚ್ಚನಾಗು. ನಿನ್ನ ಕೆಲಸಗಳೆಲ್ಲ ನಂಬಿಕೆಯಿಂದ ಮಾಡು. ಸತ್ಯ ಕ್ರೈಸ್ತನು ಎಂದೂ ನಂಬಿಕೆಯುಳ್ಳ ಉದ್ಯೋಗಿಯಾಗಿರುವನು.

ಹೊರಟು ಹೋಗುವಾಗ್ಯೆ ಈ ಮನುಷ್ಯನು ಮಿಶನಿಗೋಸ್ಕರ ಮೇಜಿನ ಮೇಲೆ ವಂದನೆಯ ಕಾಣಿಕೆಯಾಗಿ ಹಣವನ್ನು ಬಿಟ್ಟನು. ಇದನ್ನು ಆತನ ಕೈಯಲ್ಲಿ ಕೊಡಲು, ಆತನು ಸಂತೋಷ ಪಟ್ಟು ಹೇಳಿದ್ದು: ನನಗೆ ಬಹಳ ಆನಂದವಾಯಿತು; ಕರ್ತನು ಅವನ ಆತ್ಮವನ್ನು ಆಶೀರ್ವದಿಸಲಿ. ಇದು ಬಹಳ ಚಲೋದು. ಓ ಕರ್ತನೇ, ಇದರ ಮೇಲೆ ಕೃಪಾದೃಷ್ಟಿಯಿಂದ ನೋಡು! ಓ ಕರ್ತನೇ, ಅದನ್ನು ಅಂಗೀಕರಿಸು. ಅವನು ಒಳ್ಳೇ ಕರ್ತನು, ಅವನು ಹೃದಯಗಳನ್ನು ನಡಿಸ ಬಲ್ಲನು. ಆಹಾ! ಇದು ಬಹಳ ಒಳ್ಳೇದು; ಕರ್ತನು ಅವನಿಗೆ ಅತಿ ವಿಶೇಷವಾಗಿ ಪ್ರತಿಫಲ ಕೊಡುವನು.

ಆತನು ತನ್ನ ಸ್ವಂತ ಸಂಗತಿಯನ್ನೇ ಕುರಿತು ಹೇಳಿದ್ದು: ಇನ್ನು ಎಲ್ಲವು ತೀರುವ

ಮುಂಚೆ ಹಳೆ ಸ್ವಭಾವವು ಮೆಚ್ಚದ ಕೆಲವು ಕಠಿಣ ಹೋರಾಟಗಳು ಇರುವವು. ಓ ಪ್ರೀತಿಯ ದೇವರೇ! ಕೃಪೆಯ ದೇವರೇ, ನನ್ನ ಕರ್ತನೇ, ನನ್ನ ಅರಸೇ!

ಒಬ್ಬ ಧೊರೆಸಾನಿಯು ಆತನಿಗೆ ನೋಡಲಿಕ್ಕೆ ಬಂದಾಗ ಆತನು ಹೇಳಿದ್ದು: ಒಳ್ಳೇದು, ನಿನ್ನ ಗಂಡನು ಹ್ಯಾಗಿದ್ಧಾನೆ? ಅವನು ನನ್ನಷ್ಟು ಬುದ್ಧಿಯುಳ್ಳವನಾಗಿರ ಬೇಕೆಂದು ನಾನು ಇಚ್ಛೈಸುತ್ತೇನೆ, ಅಂದರೆ ಕ್ರಿಸ್ತನಿಗೋಸ್ಕರ ಅವನು ಹುಚ್ಚನಾಗ ಬೇಕೆಂದು ನಾನು ಅಪೇಕ್ಷಿಸುತ್ತೇನೆ; ಆದರೆ ಅವನು ಇನ್ನೂ ಲೋಕದ ಕಡೆಗೆ ಇದ್ಧಾನೆ. ಅವನು ಬಹಳ ಚನ್ನಾಗಿ ಮಾತಾಡಲಿಕ್ಕೆ ಬಲ್ಲನು; ಆದ್ದರಿಂದ ಜನರು ಅವನು ಬುದ್ಧಿಯುಳ್ಳವನೂ ಪ್ರೀತಿಸ ತಕ್ಕಂಥವನೂ ದೇವರ ರಾಜ್ಯಕ್ಕಾಗಿ ಬಹಳ ಕಾರ್ಯಗಳನ್ನು ನಡಿಸುವವನೂ ಎಂದು, ನೆಸಸುತ್ತಾರೆ. ಆದರೆ ಅದೆಲ್ಲ ಸುಳ್ಳು. ಓ, ಒಂದು ಆತ್ಮವು ಪೂರ್ಣವಾಗಿ ಕರ್ತನ ಕಡೆಗೆ ಇದ್ದರೆ, ಅದು ಬಹಳ ದೊಡ್ಡದು. ಆದರೆ ಈ ಅರೆವಾಶಿ ಕೆಲಸ ಎಂದೂ ಸಲ್ಲದು. ದೇವರ ವಾಕ್ಯವನ್ನು ತಿರುಗಿಸಿ ಹೇಳುವವರು ಯಾವಾಗಲೂ ಹತ್ತರ ಇದ್ದಾರೆ; ಮತ್ತು ಬಡ ಆತ್ಮಗಳು ಗಲಿಬಿಲಿ ಪಡುತ್ತವೆ. ಆಗ ಆತನು ಒಬ್ಬ ಯೌವನಸ್ಥನಿಗೆ ಹೇಳಿದ್ದು: ಅರಸನ ಮಗನಂತೆ, ಅಂದರೆ ಪರಲೋಕದ ಅರಸನ ಮಗನಂತೆ ನಡಕೋ.

ಆತನು ತನ್ನಷ್ಟಕ್ಕೆ ತಾನೇ ಮಾತಾಡಿ ಹೇಳಿದ್ದು: ಒಳ್ಳೇದು, ನಾನು ಹಿಂದುಸ್ಥಾನದಿಂದ ತಂದ ನನ್ನ ನೀಲ ವರ್ಣದ ಅಂಗಿಯೂ ವಿಜಾರುಗಳೂ ಕಪ್ಪು ವರ್ಣದ ಕಂಠವಸ್ತ್ರವೂ ರಾತ್ರಿಯಲ್ಲಿ ಹಾಕಿಕೊಳ್ಳುವ ಟೋಪಿಯೂ ಒಟ್ಟು ಒಂದು ಒಳ್ಳೆ ಉಡಿಗೆಯಾಗುತ್ತದೆ; ಇದು ನನ್ನ ಕುಲ; ಜನರು ನಾನು ದೇವವಾಕ್ಯ ಪ್ರಸಂಗಿ ಎಂದು ತಿಳಿಯ ಬೇಕು. ಬಹಳ ಖರ್ಚು ತಾಗದ ಸಾಧಾರಣ ತರದ ಒಂದು ಪೆಟ್ಟಿಗೆಯನ್ನು ನನ್ನ ದೇಹವಿಡುವದಕ್ಕೆ ಮಾಡಲಿ. ನನ್ನ ಸಮಾಧಿಯಲ್ಲಿ ಪಸಂದು ಉಡಿಗೆಯುಳ್ಳವನಾಗಿ ಮಲಗಲಿಕ್ಕೆ ನನಗೆ ಮನಸ್ಸಿಲ್ಲ; ಅದು ನನಗೆ ಆಗದು. ನನ್ನ ಶರೀರವನ್ನು ಖಂಡಿಸುವದಕ್ಕೆ ಯಾರೂ ಬರುವದು ಬೇಡ; ಆ ಕಡಿಯುವವರು ನನಗೆ ಬೇಡ. ನನ್ನ ಮುಖವನ್ನೂ ಕೈಗಳನ್ನೂ ತೊಳದು, ಶುದ್ಧವಾದ ಒಂದು ವಸ್ತ್ರವನ್ನು ಹಾಕಲಿ. ಇದೆಲ್ಲ ನನ್ನ ಸ್ವಂತ ಜನರಿಂದಲೇ ಆಗ ಬಹುದು. ಅನ್ಯರು ನನಗೆ ಬೇಡ, ಅನ್ಯರ ಕೈಗಳಲ್ಲಿ ಬೀಳ ನನಗೆ ಮನಸ್ಸಿಲ್ಲ.

ಆತನನ್ನು ಹೂಣಿಡುವಾಗ್ಯೆ ಪ್ರಸಂಗಕ್ಕೆ ಯಾವ ವಚನ ತೆಗೆಯ ಬೇಕೆಂದು, ಆತನ ಮಕ್ಕಳು ಕೇಳಿದ್ದಾಗ್ಯೆ, ಆತನು ಹೇಳಿದ್ದೇನಂದರೆ: ಅದು ನಾನು ನಿಶ್ಚೈಸುವದಿಲ್ಲ; ನನ್ನ ಹಳೇ ಸ್ನೇಹಿತನಾದ ಸ್ಟ. ಧೊರೆಯು ಎಲ್ಲವನ್ನು ಎಷ್ಟೋ ಚಲೋದಾಗಿ ಮಾಡ ಬಲ್ಲನು. ಅವನಿಗೆ ಆಶ್ಚರ್ಯಕರವಾದ ಪ್ರಾರ್ಥನೆಯ ಆತ್ಮವುಂಟು. ಕೆಲವು ಸಾರಿ ಅವನು ಬಹಳ ಉದ್ದವಾಗಿ ಮಾಡುತ್ತಾನೆ, ಮುಗಿಸುವದೇ ಇಲ್ಲ. ಅವನು ಸ್ವಲ್ಪದರಲ್ಲಿ ತೀರಿಸಲಿ, ಮತ್ತು ಏನೂ ಹೆಚ್ಚಿಸದ ಹಾಗೆ ಅವನಿಗೆ ತಿಳಿಸಿರಿ. ಸಣ್ಣದಾಗಿಯೂ ಚನ್ನಾಗಿಯೂ ಮಾಡಲಿ. ಅವನಿಗೆ ಮನಸ್ಸಿದ್ದರೆ, ಅವನು ಹಾಗೆ ಮಾಡ ಬಹುದು. ನನ್ನ ಸಮಾಧಿಯ ಮೇಲೆ ಒಂದು ಕಲ್ಲು ಇಡುವರೆಂತ ನೆನಸುತ್ತೇನೆ. ಅದರ ಮೇಲೆ ಈ ಮಾತು ಇರಲಿ: "ಮಿಶ್ಶನ್ ಮಂಡಲದಿಂದ ಬಂದ ಯೇಸು ಕ್ರಿಸ್ತನ ಸಾಕ್ಷಿಯು." ಇದಕ್ಕಿಂತ ಹೆಚ್ಚು ಏನೂ ಬೇಡ. ಇದು ದೊಡ್ಡ ವಾಕ್ಯವು, ಇದೇ ನನ್ನ ತರವು, ಇದಕ್ಕಾಗಿ ಕರ್ತನಿಂದ ಕರೆಯಲ್ಪಟ್ಟೆನು.

ಸಮಾಧಿಯ ಸ್ಥಳಕ್ಕೆ ಹೋಗುವ ಸಮಯವನ್ನು ಕುರಿತು ಪ್ರಕಟಿಸುವ ಪತ್ರಿಕೆಯ ತಲೆಯಲ್ಲಿ ಯಾವದಾದರೂ ವಚನವನ್ನು ಬರೆಯ ಬೇಕೋ? ಎಂದು ಕೇಳಿದಾಗ, ಆತನು ತನ್ನ ದೇವವಾಕ್ಯ ಪುಸ್ತಕವನ್ನು ತೆಗದು, ಅಪೊ. ಕ್ರಿ. ೪, ೧೧. ೧೨. ವಚನಗಳನ್ನು (ಅವನೇ ಮನೆ ಕಟ್ಟುವವರಾದ ನಿಮ್ಮಿಂದ ತಿರಸ್ಕರಿಸಲ್ಪಟ್ಟ, ಕೋಣಾಗ್ರದ್ದಾದ ಕಲ್ಲಾಗಿದ್ದಾನೆ. ಮತ್ತ್ಯಾವನಲ್ಲಿಯೂ ರಕ್ಷಣೆ ಇಲ್ಲ; ಹ್ಯಾಗಂದರೆ, ಅದರಿಂದ ನಾವು ರಕ್ಷಿಸಲ್ಪಡ ಬೇಕೆಂದು, ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲ.) ತೋರಿಸಿದನು. ತರುವಾಯ ಆತನು ಪ್ರಾರ್ಥಿಸಿ ಹೇಳಿದ್ದು: ನೀನು ನಮಗೋಸ್ಕರ ಮಾಡಿದ್ದನ್ನು ಜನರಿಗೆ ಗೊತ್ತಿಲ್ಲ; ಮತ್ತು ಅವರು ತಿಳಿಯುವದಕ್ಕೆ ಅಪೇಕ್ಷಿಸುವದು ಸಹಾ ಇಲ್ಲ. ಎಲ್ಲವೂ ತೀರಿಸಲ್ಪಟ್ಟದೆ, ಮರಣದ ವೇದನೆಗಳು ಪರಿಹಾರವಾಗಿವೆ; ಆಹಾ, ಕರ್ತನಿಗೆ ನಮ್ಮ ಮೇಲೆ ಕೃಪೆಯಾದರೆ, ಅದು ಎಷ್ಟೋ ಮಹಿಮೆಯುಳ್ಳ ಕಾರ್ಯವು. ನನಗೆ ಸಾಕು; ನಾನು ಇನ್ನು ಕೆಲಸ ಮಾಡಲಿಕ್ಕಾಗುವದಿಲ್ಲ.—ಆಗಿಂದಾಗ್ಯೆ ಆತನು "ಓ ನೀನು ಒಳ್ಳೇ ಕರ್ತನೇ" ಎಂದು ಹೇಳುವನು.

ತಾರಿಕು ೧೫ನೇ ಶುಕ್ರವಾರ ದಿವಸ ಆತನು ಹೇಳಿದ್ದು: ಕರ್ತನಾದ ಯೇಸು ಮರಣದ ನೋವನ್ನು ಬಿಡಿಸಿದ್ದಾನೆ. ಅವನಿಗೆ ಜಯ ಶಿಕ್ಕಿಯದೆ! ಅವನು ಸರ್ಪದ ತಲೆಯನ್ನು ಜಜ್ಜಿದ್ದಾನೆ. ಅವನು ಇವನ ಆತ್ಮದ ವ್ಯಥೆಯನ್ನು ನೋಡಿ, ಸಮಾಧಾನ ಪಡುವನು. ಇಷ್ಟು ಹೇಳಿ, ಆತನು ನಿದ್ರೆ ಹೋದನು.

ಆತನನ್ನು ನೋಡಲಿಕ್ಕೆ ಬಂದ ಮೂವರು ಸಹೋದರಿಗಳಿಗೆ ಆತನು ತನ್ನ ಅಸ್ವಸ್ಥವನ್ನು ಕುರಿತು ಹೇಳಿದ್ದೇನಂದರೆ: ಬುಧವಾರ ದಿವಸ ನನಗೆ ಮೊದಲು ಜ್ವರ ಬಂತು. ಗುರುವಾರ ದಿವಸ ಸ್ವಲ್ಪ ಗುಣವಾದಂತೆ ಕಂಡಿತು. ಆದರೆ ಆ ದಿವಸದಾರಭ್ಯ ಅಸ್ವಸ್ಥ ಹೆಚ್ಚಾಗುತ್ತಾ ಬಂತು. ಆದಿತ್ಯವಾರ ದಿವಸ ವೈದ್ಯನು ಬಂದು, ಔಷಧ ಹೇಳಿದನು; ಅದರಿಂದ ಸ್ವಲ್ಪ ಗುಣವಾಯಿತು. ಆದರೆ ಸ್ವಲ್ಪ ಹೊತ್ತಿನ ತರುವಾಯವೇ ರೋಗವು ವಿಪರೀತವಾಗಿ, ಈಗ ಅಸ್ವಸ್ಥ ಹೆಚ್ಚಾಗುತ್ತಾ ಬರುತ್ತದೆ. ನಾನು ಇನ್ನೂ ಜೀವಿಸುವೆನೆಂದು ನೆನಸುವದಿಲ್ಲ. ಮಹಿಮೆಯಲ್ಲಿ ಶೇರ ಕೋರುತ್ತೇನೆ. ಕರ್ತ ಯೇಸುವಿನಲ್ಲಿ ಮರಣವಿಲ್ಲ; ಅದು ಮಹಿಮೆಯುಳ್ಳದ್ದು. ನನ್ನ ಯೇಸುವು ಮರಣದ ನೋವನ್ನು ಬಿಡಿಸಿದ್ದಾನೆ. ನನ್ನ ಹೊಟ್ಟೆಯು ಒಬ್ಬ ಸಮಗಾರನ ಕೈಯಲ್ಲಿ ಬಿದ್ದು, ಅವನು ಅದಕ್ಕೆ ಸುತ್ತಲೂ ಮೊಳೆ ಹೊಡಿಯುವಂತೆ ತೋರುತ್ತದೆ. ಮತ್ತು ಇಲ್ಲಿ ನನ್ನ ಕಾಲಖಂಡದ (liver) ಬಲಗಡೆಯಲ್ಲಿ ತಿವಿಯುವಂಥ ಶಸ್ತ್ರಗಳಿಂದ, ಅಥವಾ ರಾಶಿ ಸೂಜಿಗಳಿಂದ ಕುತ್ತಿದ ಹಾಗೆ ಆಗುತ್ತದೆ. ನಾನು ಹಿಂದುಸ್ಥಾನದಲ್ಲಿದ್ದರೆ, ಎರಡು ದಿವಸದೊಳಗೆ ಎಲ್ಲಾ ತೀರುತ್ತಿತ್ತು. ಮತ್ತು ನಾನು ಭೂಮಿಯ ಮೇಲೆ ಹೆಚ್ಚು ಕಾಲ ಇರುತ್ತಿದ್ದಿಲ್ಲ. ಆಹಾ, ನನ್ನ ಹಿಂದುಸ್ಥಾನವೇ, ನನ್ನ ಪ್ರಿಯ ದೇಶವೇ, ನನ್ನ ಸೌಂದರ್ಯ ಶೀಮೆಯೇ, ನನ್ನ ಸ್ವಂತ ದೇಶವೇ, ಪರದೇಶವೇ, ಆಶ್ಚರ್ಯಕರವಾದ ದೇಶವೇ! ಅಲ್ಲಿ ಪ್ರಿಯ ಮಕ್ಕಳಿದ್ದಾರೆ!

ಈಗ ನಾನು ೬೬ ವರ್ಷದವನಾಗಿದ್ದೇನೆ. ಅರವತ್ತಾರು ವರ್ಷಗಳ ಪರ್ಯಂತರ ಕರ್ತನು ನನ್ನನ್ನು ತಾಳಿದನು. ಅದು ಬಹು ವಿಶೇಷವಲ್ಲವೋ? ಓ, ಕರ್ತನಾದ ಯೇಸುವನ್ನು ಪಡೆಕೊಳ್ಳುವ, ಜೀವವನ್ನು ಹೊಂದುವ ಸಂತೋಷವು! ಆತ್ಮದಲ್ಲಿ ನನಗೇನೂ ಶ್ರಮೆಗಳಿಲ್ಲ,

ಅವು ಶರೀರದಲ್ಲಿ ಮಾತ್ರ. ನನ್ನ ಅಂತರ್ಯದಲ್ಲಿ ಪರಿಶುದ್ಧಾತ್ಮನ ಮುಖವಾಗಿ ಎಲ್ಲ ಸಮಾಧಾನ ಮತ್ತು ಸಂತೋಷವೇ. ಯೇಸುವು ನನಗಾಗಿ ಎಲ್ಲವನ್ನು ತೀರಿಸಿದ್ದಾನೆ; ಮತ್ತು ಅವನು ಕಡೆ ವರೆಗೂ ಸಂಜಿಗೆಯುಳ್ಳವನಾಗಿರುವನು. ಹೌದು, ಅವನು ಎಂದೆಂದಿಗೂ ಸಂಜಿಗೆಯುಳ್ಳವನಾಗಿಯೂ ಸತ್ಯವಂತನಾಗಿಯೂ ಇರುವನು. ನಿಮ್ಮ ಹೃದಯಗಳನ್ನು ಸೈತಾನನಿಗೆ ಅಲ್ಲ, ಕರ್ತನಾದ ಯೇಸುವಿಗೆ ಕೊಡಿರಿ.

ಮೇ ತಾರಿಕು ೧೬ನೆ ಶನಿವಾರ ದಿವಸ ಆತನು ಪ್ರಾರ್ಥಿಸಿದ್ದು: ನನ್ನ ಎಲ್ಲಾ ಶ್ರಮೆಗಳೂ ಅತಿ ವಿಶೇಷ ವ್ಯಥೆಗಳೂ ನಿನ್ನ ಮುಂದೆ ಅವೆ. ನಾನು ನಿನ್ನ ಕೊಂಡು ಕೊಂಡ ಬಾಧ್ಯತೆಯಾಗಿದ್ದೇನೆ. ಓ, ನನ್ನ ಕರ್ತನೇ, ನನ್ನ ದೇವರೆ! ಈ ಹೊತ್ತು ನನ್ನ ದೇವರ ಸಬ್ಬತು ಆಗಿದೆ. ಈ ಹೊತ್ತು ನನ್ನ ಕರ್ತನಾದ ನನ್ನ ದೇವರು ತನ್ನ ಕೆಲಸಗಳಿಂದ ವಿಶ್ರಮಿಸಿ ಕೊಂಡನು. ಅವನಲ್ಲಿ ಮಾತ್ರ ವಿಶ್ರಾಂತಿಯುಂಟು. ಅವನು ನನ್ನ ಕುರುಬನಾಗಿದ್ದಾನೆ; ನನಗೆ ಕೊರತೆ ಬಾರದು. ನನ್ನ ಬಲಹೀನತ್ವವೆಲ್ಲವೂ ನಿನ್ನ ಮುಂದೆ ಇದೆ. ನನ್ನ ಎಲುವುಗಳೆಲ್ಲ ನಿನ್ನ ಪರಿಶುದ್ಧ ಸ್ಥಳದಲ್ಲಿ ಅಡಗಿಯವೆ. ನನ್ನ ಆಲೋಚನೆಗಳೆಲ್ಲ ನಿನಗೆ ತಿಳಿದು ಅವೆ.

ಓ, ಎಷ್ಟೋ ಸುಂದರವು! ಎಲ್ಲವನ್ನೂ ನಿನಗೆ ಒಳ ಪಡಿಸುವ ನಿನ್ನ ತ್ರಾಣದಿಂದ ಸಮಸ್ತವೂ ಹೊಸದಾಗುವದು! ನನ್ನ ಆಲೋಚನೆಗಳೆಲ್ಲ ನಿನ್ನ ಮುಂದೆ ಒಂದು ಕಟ್ಟಾಗಿ ಕಟ್ಟಿಯವೆ. ನನ್ನ ಎಲುವುಗಳೆಲ್ಲ ಎಣಿಸಲ್ಪಟ್ಟವೆ. ನನ್ನ ಎಲುವುಗಳೆಲ್ಲ ನಿನ್ನ ಮುಂದೆ ಒಂದು ಕಟ್ಟಾಗಿ ಕಟ್ಟಿಯವೆ.

ಸ್ವಲ್ಪ ಹೊತ್ತಿನ ಮೇಲೆ ಆತನು ಹೇಳಿದ್ದು: ನನಗೆ ವಿಶೇಷವಾದ ದೈವಿಕ ತ್ರಾಣವು ಕೊಡಲ್ಪಟ್ಟಿತ್ತು. ಅದು ನನಗೆ ತಿಳಿದುಂಟು. ದೇವರು ನನಗೆ ಬಹಳ ತ್ರಾಣ ಕೊಟ್ಟದ್ದನು. ನಾನು ಪಿಶಾಚಗಳಿಂದಲೂ ಮನುಷ್ಯರಿಂದಲೂ ಎಷ್ಟೊ ಸಹಿಸಿದೆನು! ಆದರೆ ನಾನು ಗೆದ್ದೆನು. ಪಿಶಾಚಗಳ ಸಮೂಹಕ್ಕೆ ಎದುರಾಗಿ ನನ್ನ ನೆಲೆಯನ್ನು ಹಿಡಿದು ಇದ್ದೇನೆ. ಆದರೆ ಅವನು ಕೊಟ್ಟ ತ್ರಾಣದಿಂದ ಮಾತ್ರ ಜಯಿಸಿದೆನು. ಯಾವ ಮನುಷ್ಯನಾದರೂ ಈ ದೈವಿಕ ತ್ರಾಣವನ್ನು ತಿಳಿಯಲಾರನು; ವಿಶ್ವಾಸದಿಂದ ಮಾತ್ರ ಅದನ್ನು ತಿಳಿಯಲೂ ಅನುಭವಿಸಲೂ ಬಹುದು. ಅವಿಶ್ವಾಸಿಯಾದ ಲೋಕವು ಇದನ್ನು ಕುರಿತು ತಿಳಿಯಲಿಕ್ಕಿಲ್ಲ, ಮತ್ತು ಎಂದೂ ತಿಳಿಯಲಾರದು. ಸಮಸ್ತ ಮಹಿಮೆಯನ್ನು ದೇವರಿಗೆ ಕೊಡ ಬೇಕಾಗಿದೆ. ಅಂಥಾ ದೈವಿಕ ತ್ರಾಣಗಳನ್ನು ಹೊಂದ ಒಬ್ಬ ಮನುಷ್ಯನು ಇಚ್ಛೈಸಿದರೆ, ಅವನು ಎಲ್ಲವನ್ನೂ ದೇವರ ಪಾದದೆಡೆಗೆ ಇಡ ಬೇಕು. ನಾನು ಬಹಳ ಸೈರಿಸಿದ್ದೇನೆ. ಓ, ಸರ್ವಶಕ್ತನ ದಯವೇ! ಅನೇಕ ಸಾರಿ ನನ್ನ ಜೀವದ ಆಶೆ ಸಹಾ ಬಿಟ್ಟೆದ್ದೆ. ಅವನು ಸರ್ವಶಕ್ತನು; ಕರ್ತನಾದ ಯೆಹೋವನಾದ ಯೇಸುವು ಇಸ್ರಯೇಲಿನ ಪರಿಶುದ್ಧನಾಗಿದ್ದವನೂ ಇರುವಂಥವನೂ ಎಂದೆಂದಿಗೂ ಇರುವವನೂ ಆಗಿದ್ದಾನೆ. ಆಗ ಆತನು ಪ್ರಾರ್ಥಿಸಿ ಹೇಳಿದ್ದು: ೬೬ ವರ್ಷಗಳ ವರೆಗೂ ನನ್ನನ್ನು ಅತಿ ತಾಳ್ಮೆ ದೀರ್ಘಶಾಂತಿಯಿಂದ ತಾಳಿ ಕೊಂಡು, ನನ್ನ ಸಂಗಡ ಎಂದೂ ನ್ಯಾಯವಿಚಾರಣೆ ಮಾಡಲಿಲ್ಲ. ಓ ಒಳ್ಳೆ ಕರ್ತನೇ, ಎಷ್ಟೋ ಕನಿಕರದಿಂದ..... ಕನಿಕರದಿಂದ ಯಾವಾಗಲೂ ನನ್ನನ್ನು ನಡಿಸಿದ್ದೀ. ಓ ನನ್ನ ಒಳ್ಳೇ ಕರ್ತನೆ!

ಯಾರೂ ಸುವಾರ್ತೆಗೆ, ಐಶ್ವರ್ಯವಾದ ಸುವಾರ್ತೆಗೆ, ಕೂಡಿಸದಿರಲಿ. ಕರ್ತನು ಅದಕ್ಕಾಗಿ ತನ್ನ ಪ್ರಾಣವನ್ನು ಕೊಟ್ಟಿದ್ದಾನೆ. ಕರ್ತನು ನನ್ನ ಭಾಗವು, ನನಗೆ ಎಂದೂ ಕೊರತೆ ಇರುವದೇ? ಇಸ್ರಯೇಲಿನ ಪರಿಶುದ್ಧನೂ ನಂಬಿಗೆಯುಳ್ಳ ದೇವರೂ ನನ್ನ ಪಾಲೂ ರಕ್ಷಣೆಯೂ ಆಗಿರುವ ಅವನು ನನ್ನ ಬಲಗೈಯ ತ್ರಾಣವಾಗಿದ್ದಾನೆ. ದೇವರ ಭಾಗ್ಯವುಳ್ಳ ಆತ್ಮದ ಮೂಲವಾಗಿ ನನಗೆ ನಿನ್ನನ್ನು ಪ್ರಕಟ ಮಾಡಿದ್ದೀ. ನಿನ್ನ ವಾಕ್ಯವನ್ನು ನನ್ನ ಬಾಯಿಯಲ್ಲಿ ಇಟ್ಟಿದ್ದೀ. ಅಬ್ಬಾ, ತಂದೆಯೇ! ನನ್ನ ಎಲುವುಗಳೆಲ್ಲ ನಿನ್ನ ಮುಂದೆ ಕಟ್ಟಿಯವೆ. ಓ ನನ್ನ ಕರ್ತನೇ, ನನ್ನ ದೇವರೇ, ಈ ನನ್ನ ಕಡೇ ತಾಸಿನಲ್ಲಿ ನನ್ನನ್ನು ಬಿಡ ಬೇಡ.

ಶನಿವಾರ ಸಂಜೇ ಹೊತ್ತು ಆತನ ಸ್ನೇಹಿತರು ಆತನ ಪಾದಗಳನ್ನು ತೊಳಿಯುವಾಗ, ಆತನು ಅರೆನಗೆಯಿಂದ ಹೇಳಿದ್ದು: ಇವು ಪ್ರಿಯ ಪಾದಗಳು, ಇವು ಸಮಾಧಾನವನ್ನು ಬಹು ವಿಸ್ತಾರವಾಗಿ ಅತಿ ದೂರ ತಕ್ಕೊಂಡು ಹೋಗೆವೆ, ಇವು ಕರ್ತನಿಗೋಸ್ಕರ ಬಹು ದೂರ ಪ್ರಯಾಣಗಳನ್ನು ಮಾಡಿಯವೆ. ಆಗ ಆತನು ತನ್ನ ಮಕ್ಕಳಿಗೆ ಆ ದಿನದ ರಾತ್ರೆಯನ್ನು ಕುರಿತು ಏನು ನಿಶ್ಚೈಸಿದ್ದೀರೆಂದು ಕೇಳಿದನು. ಅದಕ್ಕೆ ಅವರು ಆತನ ಹತ್ತರ ನಿಲ್ಲ ನಿಶ್ಚೈಸಿದ್ಧೇವೆ ಎಂದು ಹೇಳಿದ್ದಕ್ಕೆ ಈತನು ಪ್ರತ್ಯುತ್ತರ ಕೊಟ್ಟದ್ದು: ಅದು ಸರಿ, ಯಾವಾಗಲೂ ಅದೇ ಜನರು ನನ್ನ ಸಂಗಡ ಇರ ಅಪೇಕ್ಷಿಸುತ್ತೇನೆ. ಆದರೆ ನಿಮಗೆ ಅದು ಸ್ವಲ್ಪ ತೊಂದರೆಯಾದೀತು ಎಂತ ಗ್ರಹಿಸುತ್ತೇನೆ. ನೀವು ಸ್ವಲ್ಪ ವಿಶ್ರಾಂತಿ ತಕ್ಕೊಳ್ಳುವ ಹಾಗೆ ನೋಡಬೇಕು, ಮತ್ತು ನನ್ನ ಜಾಗ್ರತೆ ಸಹಾ ತಕ್ಕೊಳ್ಳ ಬೇಕು; ನನ್ನಷ್ಟಕ್ಕೆ ನಾನೇ ಜಾಗ್ರತೆ ತಕ್ಕೊಳ್ಳುವದಕ್ಕೆ ಸಾಮರ್ಥ್ಯವಿಲ್ಲದವನಾಗಿದ್ಧೇನೆ.

ಆದಿತ್ಯವಾರ ದಿವಸ ಪ್ರಾತಃಕಾಲ ೭ ಘಂಟೇ ಸಮಯಕ್ಕೆ ಆತನು ಅವರಿಗೆ ಹೇಳಿದ್ದು: ನನ್ನ ಜಾಗ್ರತೆ ತಕ್ಕೊಳ್ಳುವದಕ್ಕೆ ಕರ್ತನು ನಿಮ್ಮನ್ನು ನೇಮಿಸಿದ್ದು ಎಂಥಾ ಕೃಪೆಯಾಗಿದೆ. ಈ ಹೊತ್ತು ಆದಿತ್ಯವಾರವು! ಇದು ವಿಶ್ರಾಂತಿಯ ದಿನವು. ನನ್ನನ್ನು ನೋಡಲಿಕ್ಕೆ ಬರುವರೆಂತ ನೆನಸುತ್ತೇನೆ; ಆದರೆ ಅವರನ್ನು ನಾನು ನೋಡಲಾರೆ. ಅವರಲ್ಲಿ ಯಾರಿಗೂ ಒಳಗೆ ತಕ್ಕೊಳ್ಳಲಾರೆ. ವಿಶ್ರಾಂತಿ ಬೇಕಾದದ್ದು, ವಿಶ್ರಾಂತಿಯು ಎಲ್ಲಾ ವರಗಳಲ್ಲಿ ಶ್ರೇಷ್ಠವು. ಈ ಹೊತ್ತು ನಮಗೆ ವಿಶ್ರಾಂತಿ ಬೇಕು—ವಿಶ್ರಾಂತಿ ಮಾತ್ರವೇ!

ಆದರೆ ಆತನು ಅತಿ ವಿಶೇಷವಾಗಿ ಅಪೇಕ್ಷಿಸಿದ ಆ ವಿಶ್ರಾಂತಿಯನ್ನು ಈ ಜೀವದಲ್ಲಿ ಇನ್ನು ಬಹಳ ಅನುಭವಿಸ ಕೂಡದಾಗಿತ್ತು. ಆ ಇಡೀ ದಿವಸ ಆತನು ಏನೂ ವಿಶ್ರಾಂತಿ ಇಲ್ಲದೆ ಕಳದನು. ಮತ್ತು ಇದರ ದೆಸೆಯಿಂದ ಮಾರಣೆ ದಿವಸ ಆತನ ಕಷ್ಟವೂ ಬಲಹೀನತ್ವವೂ ಹೆಚ್ಚಾದವು. ತಿರಿಗಿ ಆತನು ಹೇಳಿದ್ದು: ಆತ್ಮದಲ್ಲಿ ವ್ಯಥೆಗಳು ಇಲ್ಲ; ಅವು ಎಲ್ಲಾ ಇಲ್ಲದೆ ಹೋದವು. ಆದರೆ ಶರೀರದ ಶ್ರಮೆಗಳು ಅತಿ ವಿಶೇಷವಾಗಿಯವೆ. ಆಹಾ, ನನ್ನ ಸ್ನೇಹಿತನೇ! ಎಂದು ತನ್ನ ಪರಲೋಕದ ತಂದೆಗೆ ಆತನು ಹೇಳಿ ಕೊಂಡ ಈ ಮಾತನ್ನು ಈ ತನ್ನ ಸ್ನೇಹಿತನು ತನ್ನ ಹೃದಯಕ್ಕೆ ಒತ್ತಿ ಇದ್ದರೆ ಹ್ಯಾಗೋ, ಅಷ್ಟು ಪ್ರೀತಿ ಕನಿಕರದಿಂದ ಆಗಿಂದಾಗ್ಯೆ ಹೇಳುತ್ತಾ ಇದ್ದನು.

ಓ ಕರ್ತನೇ! ನಾನು ಪ್ರಸಂಗಿಸಿದ ಓ ಕರ್ತನಾದ ಯೇಸುವೇ! ಹೌದು, ನಾನು ನಿನಗೆ ಶುದ್ಧ ಸುವಾರ್ತೆಯನ್ನು ಪ್ರಸಂಗಿಸಿದ್ಧೇನೆ. ನೀವು ಇದು ಪೂರ್ಣ ನಂಬ ಬಹುದು. ಅದು ಜೀವದಲ್ಲಿಯೂ ಮರಣದಲ್ಲಿಯೂ ನಿಲ್ಲುತ್ತದೆ.

ಆದಿತ್ಯವಾರ ಬೆಳಿಗ್ಗೆ ೭ ಘಂಟೇ ಸಮಯಕ್ಕೆ ಆತನು ಶಾಫ್‌ಹೌಸೆನಲ್ಲಿ ಇರುವ ಸಹೋದರರಿಗೆ ಹೇಳಿ ಕಳುಹಿಸಿದ್ದು: ನಾನು ನನ್ನ ದೇಹವು ಬಿದ್ದು ಹೋಗುವದನ್ನು ಕಾದು ಕೊಂಡಿದ್ದೇನೆ.

ಆಗ ಆತನು ತಿರಿಗಿ ಹೇಳಿದ್ದು: ಆಹಾ ನನ್ನ ಕರ್ತನೇ, ನನ್ನ ದೇವರೇ! ನನ್ನ ಎಲುವುಗಳೆಲ್ಲ ನಿನ್ನಿಂದ ಎಣಿಸಲ್ಪಟ್ಟವೆ. ಅವನು ನನ್ನ ಜೀವವೂ ನನ್ನ ಪಾಲೂ ಆಗಿದ್ದಾನೆ; ನನಗೆ ಕೊರತೆ ಬಾರದು. ನಾನು ಹಸರು ಮೇವುಗಳಲ್ಲಿ ಮಲಗುವ ಹಾಗೆ ಮಾಡುತ್ತಾನೆ; ಶಾಂತ ನೀರುಗಳ ಸಮಿಾಪದಲ್ಲಿ ನನ್ನನ್ನು ನಡಿಸುತ್ತಾನೆ. ನೀನು ಕೃಪೆಯುಳ್ಳ ಕರ್ತನು, ನಿನ್ನನ್ನು ನೀನೆ ನನಗೆ ಪ್ರಕಟ ಮಾಡಿದ್ದೀ. ನಿನ್ನಲ್ಲೇ ನಿತ್ಯಜೀವವು ಉಂಟೆಂದು ನಾನು ಪ್ರಸಂಗಿಸಿದ್ದೇನೆ. ಮತ್ತು ನಂಬಿದವರೆಲ್ಲರು ಪರಿಶುದ್ಧಾತ್ಮನಿಂದ ಮುದ್ರೆ ಹೊಂದಿದರು. ಆದ್ದರಿಂದ ಮನುಷ್ಯನ ಮಾತು ಅಲ್ಲ, ನಿನ್ನ ವಾಕ್ಯವನ್ನು ಪ್ರಸಂಗಿಸುತ್ತಿದ್ದೆನೆಂದು ಬಲ್ಲೆನು; ಇದು ನನಗೆ ತ್ರಾಣ ಕೊಟ್ಟಿತು.

ಮಂಚದ ಹತ್ತರಕ್ಕೆ ಆತನನ್ನು ತಂದಾಗ, ಆತನು: ನಾನು ಎಷ್ಟು ಸಂತೋಷವುಳ್ಳವನಾಗಿದ್ದೇನೆ! ನಾನು ಎಷ್ಟು ಸಂತೋಷವುಳ್ಳವನಾಗಿದ್ದೇನೆ! ನನಗೆ ಅವಶ್ಯವಿರುವದೆಲ್ಲವೂ ಉಂಟು. ವಿಶೇಷವಾದ ಶ್ರಮೆಗಳು ಏನೂ ಇಲ್ಲ. ಅಲ್ಲಿಲ್ಲಿ ಸ್ವಲ್ಪ ನೋವೂ ಅಂಜಿಕೆಯೂ ಇರ ಬಹುದು. "ಓ ಕೃಪೆಯುಳ್ಳ ಕರ್ತನೇ, ನಾನು ಎಷ್ಟೋ ಸಂತೋಷವಾಗಿದ್ದೇನೆ" ಎಂಬ ಈ ಮಾತುಗಳನ್ನು ಸುಮಾರು ಹತ್ತು ಸಾರಿ ಹೇಳಿದನು. ಇವನ್ನು ಹೇಳುವಾಗಲೇ ಆತನಿಗೆ ಶರೀರದಲ್ಲಿ ಫಕ್ಕನೆ ಬಹು ನೋವು ಆದಂತೆ ತೋರಿತು, ಹ್ಯಾಗಂದರೆ: ನನ್ನ ಹೊಟ್ಟೆಯೂ ತಲೆಯೂ ಅತಿ ನೋಯಿಸುತ್ತವೆ. ಆದರೆ ವಿಶೇಷ ಶ್ರಮೆ ಇಲ್ಲ; ಅದು ಅಷ್ಟು ಹೆಚ್ಚು ಅಲ್ಲ, ಅದು ನಾನು ಸಹಿಸ ಬಹುದು. ಓ ಕೃಪೆಯುಳ್ಳ ಕರ್ತನೇ, ಓ ನಂಬಿಕೆಯುಳ್ಳ ದೇವರೇ, ನನ್ನ ಸ್ನೇಹಿತನೇ, ಎಂದು ಹೇಳಿದನು.

ತರುವಾಯ ಆತನು ಹೇಳಿದ್ದು: ನ. ಧೊರೆಸಾನಿಯು ನನ್ನನ್ನು ನೋಡಲಿಕ್ಕೆ ಬಂದರೆ, ಅವಳನ್ನು ಕೂಡಲೆ ಒಳಗೆ ಕಳುಹಿಸಿರಿ; ಆದರೆ ಬೇರೆ ಯಾರಿಗೂ ಅಲ್ಲ. ಕರ್ತನ ಹೆಸರಿನಲ್ಲಿ ಅವಳ ಸಂಗಡ ಮಾತಾಡ ನನಗೆ ಮನಸ್ಸು ಉಂಟು. ಈ ಧೊರೆಸಾನಿ ಬಂದಾಗ ಆತನು ಹೇಳಿದ್ದು: ನಿನ್ನ ಹೃದಯವನ್ನು ಪೂರ್ಣವಾಗಿ ಕರ್ತನಿಗೆ ಕೊಡು; ಯಾಕಂದರೆ ಅವನಲ್ಲಿ ನಿತ್ಯಜೀವವು ಉಂಟು. ನಿನ್ನ ಗಂಡನ ಕಡೆಗೆ ಪ್ರೀತಿಯನ್ನು ತೋರಿಸಿ, ಅವನನ್ನು ಕರ್ತನ ಬಳಿಗೆ ತರಲಿಕ್ಕೆ ಪ್ರಯತ್ನಿಸು. ಕರ್ತನಾದ ಯೇಸುವಿನ ಹೊರ್ತು ಎಲ್ಲವೂ ನಾಶವಾಗಿ ಹೋಗುವದು ಎಂದು ಅವನಿಗೆ ಹೇಳ ಬೇಕು. ಒಬ್ಬ ಮನುಷ್ಯನು ಇಡೀ ಲೋಕವನ್ನು ಸಂಪಾದಿಸಿ ಕೊಂಡು, ತನ್ನ ಆತ್ಮವನ್ನು ಕಳಕೊಂಡರೆ, ಪ್ರಯೋಜನವೇನು?

ಸ್ವಲ್ಪ ಹೊತ್ತಿನ ತರುವಾಯ ಆತನು ಹೇಳಿದ್ದು: ನನ್ನ ಶರೀರದ ಶ್ರಮೆಗಳು ಬಹು ಘೋರವಾಗಿವೆ. ಆದರೆ ಕರ್ತನು ನನ್ನ ಸಂಗಡ ಇದ್ದಾನೆ; ಅವನು ನನ್ನನ್ನು ಪ್ರೀತಿಸುತ್ತಾನೆ, ಓ ಅವನು ನನ್ನನ್ನು ಪ್ರೀತಿಸುತ್ತಾನೆ. ನನಗೆ ದೊಡ್ಡ ಸಮಾಧಾನ ಉಂಟು. ನಾನು ಇನ್ನೂ ಸಾಕ್ಷಿ ಕೊಡಲಾರೆ. ಆದರೆ ದೇವರ ಸತ್ಯ ಮಕ್ಕಳು ಹುಟ್ಟಿದ್ದಾರೆ. ಅವರು ಅದನ್ನು ಮಾಡುವರು.

ಆದಿತ್ಯವಾರ ದಿವಸ ರಾತ್ರಿ ಕಾಪ್ಫ್ ಧೊರೆಯು ಆತನನ್ನು ನೋಡಲಿಕ್ಕೆ ಬಂದರು. ಇದರಿಂದ ಆತನಿಗೆ ಬಹಳ ಸಂತೋಷವಾಯಿತು.

ಸೋಮವಾರ ಬೆಳಿಗ್ಯೆ ಆತನ ಶ್ರಮೆಗಳು ಪುನಃ ವಿಶೇಷವಾದಾಗ, ಆತನು ಹೇಳಿದ್ದೇನಂದರೆ: ಓ ನನ್ನ ಆತ್ಮದ ಸ್ನೇಹಿತನೇ, ನನ್ನ ಎಲ್ಲಾ ಎಲುವುಗಳು ನಿನ್ನ ಸಂಗಡ ಒಂದು ಕಟ್ಟಾಗಿ ಕಟ್ಟಿ ಇವೆ! ಬಡ ಮನುಷ್ಯನಾಗಿರುತ್ತೇನೆ; ಓ ಎಷ್ಟೋ ಸಂಕಷ್ಟವುಳ್ಳವನು!

ಒಬ್ಬ ಹೊಸ ವಿಶ್ವಾಸಿಯು ಅಲ್ಲಿಗೆ ಬಂದದ್ದನ್ನು ಆತನಿಗೆ ತಿಳಿಸಲು, ಆತನು ಹೇಳಿದ್ದು: ಅವನು ಇನ್ನೊಮ್ಮೆ ಬಂದರೆ, ಕೂಡಲೇ ಅವನನ್ನು ನನ್ನ ಬಳಿಗೆ ತನ್ನಿರಿ; ನನ್ನ ಮಕ್ಕಳನ್ನು ಇನ್ನೊಂದು ಸಾರಿ ನೋಡ ಅಪೇಕ್ಷಿಸುತ್ತೇನೆ.

ಸ್ವಲ್ಪ ಸಮಯದನಂತರ ಆತನು ಪ್ರಾರ್ಥನೆ ಮಾಡಿದ್ದೇನಂದರೆ: ಓ ಕರ್ತನೇ! ನಾನು ನನ್ನ ಓಟವನ್ನು ಸಂತೋಷದಿಂದ ತೀರಿಸಲಿ! ನಾನು ಶರೀರದ ಶ್ರಮೆಗಳಿಂದ ತುಂಬಿದ್ದೇನೆ. ಬಡವನೂ ಸಂಕಷ್ಟವುಳ್ಳವನೂ ಆಗಿದ್ದೇನೆ. ನನ್ನ ತಲೆಯು ಬಹಳ ತಿರುಗುತ್ತದೆ. ನಾನು ಚಿಂತೆಯಿಂದಲೂ ವ್ಯಥೆಯಿಂದಲೂ ತುಂಬಿದವನಾಗಿದ್ದೇನೆ. ಓ ನನ್ನ ಶರೀರ, ನನ್ನ ಶರೀರ, ಅದು ಎಷ್ಟೋ ನೋಯುತ್ತದೆ. ಬಡ ಕಷ್ಟವುಳ್ಳವನಾಗಿರುತ್ತೇನೆ. ಓ ಕರುಣೆಯುಳ್ಳ, ಓ ಒಳ್ಳೇ ಕರ್ತನೇ! ಆಗ ತನ್ನ ಸ್ವರವನ್ನೆತ್ತಿ ಹೇಳಿದ್ದೇನಂದರೆ: ಓ ನನ್ನ ಕರ್ತನೇ! ನೀನು ನನ್ನವನು, ನಾನು ನಿನ್ನವನು; ಪ್ರೀತಿಯು ನಮ್ಮನ್ನು ಒಟ್ಟುಗೂಡಿಸಿಯದೆ. ಓ ನನ್ನ ಆತ್ಮದ ಸ್ನೇಹಿತನೇ!

ಸೋಮವಾರ ಮಧ್ಯಾನ್ಹದ ಹೊತ್ತಿನಲ್ಲಿ ಆತನ ಶ್ರಮೆಯು ಅತಿ ತೀವ್ರವಾಗಿದ್ದಾಗ, ಅಂತರ್ಯದಲ್ಲಿ ಬಲಗೊಂಡು, ಮಂಚದೆಡೆಗೆ ತನ್ನನ್ನು ತರ ಬೇಕೆಂದು ಹೇಳಿ, ತನ್ನ ದೇವರ ವಾಕ್ಯದ ಪುಸ್ತಕವನ್ನು ಕೇಳಿದನು. ಮತ್ತು ಅಪೊಸ್ತಲಿಕ ಅಧಿಕಾರದಿಂದ ಒಂದು ಕಾಗದವನ್ನು ಬರೆಸಿ, "ಯೇಸು ಕ್ರಿಸ್ತನ ಸಾಕ್ಷಿಯಾದ ಸಮುವೇಲ್ ಹೆಬಿಕ್" ಎಂದು ಸ್ವಹಸ್ತದಿಂದ ಅದಕ್ಕೆ ದಸ್ಕತು ಹಾಕಿದನು. ಆ ಕಾಗದವು ಅತಿ ತ್ವರೆಯಲ್ಲಿ ಕಳುಹಿಸೋಣಾಯಿತು. ಈ ಸಮಯವೆಲ್ಲಾ ಆತನ ಚರ್ಯದಲ್ಲಿ ಗಂಭೀರತೆಯೂ ಒಂದು ಪ್ರಕಾರದ ಘನತೆಯೂ ಇತ್ತು.

ನಾಳೆ ಶಾಫ್‌ಹೌಸೆನಿಂದ ಸಹೋದರರು ಆತನಿದ್ದಲ್ಲಿಗೆ ಬರುವರೆಂದು ಮಧ್ಯಾನ್ಹದನಂತ್ರ ತಂತೀ ಟಪ್ಪಾಲ ಮುಖಾಂತ್ರ ಆತನಿಗೆ ತಿಳಿಸೋಣಾಯಿತು. ಅದನ್ನು ಕೇಳಿ, ಆತನು ಹೇಳಿದ್ದು: ಅದಕ್ಕೆ ನಾನು ಸಂತೋಷ ಪಡುತ್ತೇನೆ. ಅವರನ್ನು ಇನ್ನೊಂದು ಸಾರಿ ನೋಡ ಬೇಕು.

ನನ್ನ ರಕ್ಷಕನ ಶ್ರಮೆಗಳೆಲ್ಲ ಈಗ ನನ್ನ ಮುಂದೆ ಇವೆ. ನನ್ನ ಜೀವವು ದೇವರಲ್ಲಿ ಕ್ರಿಸ್ತನ ಸಂಗಡ ಅಡಗಿರುತ್ತದೆ.

ತನ್ನನ್ನು ನೋಡಲಿಕ್ಕೆ ಬಂದ ಕೆಲವರಿಗೆ ಆತನು ಹೇಳಿದ್ದೇನಂದರೆ: ಈ ಛಳಿಗಾಲದಲ್ಲಿ ಎಂದಾದರೂ ನೀವು ನನ್ನ ಬಳಿಗೆ ಬರಲಿಲ್ಲ. ನೀವು ಜೀವದ ವಾಕ್ಯವನ್ನು ಅಲಕ್ಷಿಸಿದ್ಧೀರಿ. ಇದು ಎಷ್ಟು ವ್ಯಸನಕರವು, ಈಗ ಸಮಯ ದಾಟಿತು.

ನ. ಧೊರೆಸಾನಿಗೆ ಆತನು ಹೇಳಿದ್ದೇನಂದರೆ: ನಿನಗೆ ವಿಶ್ವಾಸವಿಲ್ಲ. ಆಗ ಪ್ರಾರ್ಥಿಸುತ್ತಾ ಹೇಳಿದ್ದು: ಓ ನನ್ನ ಕರ್ತನೆ, ನನ್ನ ದೇವರೇ! ಕರುಣೆಯುಳ್ಳ ದೇವರೇ, ಒಳ್ಳೆ ದೇವರೇ! ನಂಬಿಕೆಯುಳ್ಳ ದೇವರೇ! ನನ್ನ ಸ್ನೇಹಿತನೇ!

ಕಾಲ್ವ ಪಟ್ಟಣದಿಂದ ಆತನನ್ನು ನೋಡುವದಕ್ಕೆ ಬಂದ ಪಂಡಿತ ಗುಂಡರ್ಟ್ ಧೊರೆಯು ಕಡೇ ಸಾರಿಗೆ ಅಪ್ಪಣೆ ತೆಗದು ಕೊಂಡನಂತ್ರ ಆತನು ಹೇಳಿದ್ದು: ಅವನು ಪ್ರಿಯ

ಮನುಷ್ಯನು, ಬಹಳ ಕಷ್ಟ ತಕ್ಕೊಳ್ಳುವವನು. ಅವನು ತನ್ನ ಲೇಖಣಿಯಲ್ಲಿ ಬಹು ಘಟ್ಟಿಗನು; ಅವನ ಸಂಗಡ ನನ್ನನ್ನು ಸರಿ ನೋಡಿದರೆ, ನಾನು ದಡ್ಡನೇ ಸರಿ. ಅಲ್ಲಿ ನಿಂತವರಲ್ಲಿ ಒಬ್ಬನು: ನೀವು ಸಹಾ ವಾಕ್ಯವನ್ನು ಪ್ರಸಂಗಿಸುವದರಲ್ಲಿ ಆಸಕ್ತಿಯುಳ್ಳವರೆಂದು ನುಡಿದಾಗ, ಆತನು ಹೇಳಿದ್ದು: ಹೌದು, ಅಷ್ಟರ ಮಟ್ಟಿಗೆ ನಾನು ಇದ್ದೆನು. ಆಗ ಇನ್ನೊಬ್ಬನು ಹೇಳಿದ್ದು: ವಾಕ್ಯವನ್ನು ಪ್ರಸಂಗಿಸುವದು ವಿಶೇಷವಾದ್ದೆಂತ ನಾನು ನೆನಸುತ್ತೇನೆ. ಅದಕ್ಕೆ ಆ ರೋಗಿಯು ಉತ್ತರವಾಗಿ: ಅದು ಸತ್ಯವೇ, ವಾಕ್ಯವನ್ನು ಪ್ರಸಂಗಿಸುವದು ಮೊದಲನೇದು. ಅದನ್ನು ಮಾಡಲಿಕ್ಕೆ ನನಗೆ ಕೃಪೆ ಇತ್ತು. ಇದು ಮಹಾ ದೊಡ್ಡದು! ಓ, ಕೃಪಾಳು ಕರ್ತನೇ!

ಸೋಮವಾರ ಸಾಯಂಕಾಲದಲ್ಲಿ ನ. ಧೊರೆಸಾನಿ ಆತನನ್ನು ನೋಡಲಿಕ್ಕೆ ಬಂದಳು. ಆತನು ಅವಳನ್ನು ಅತಿ ಪ್ರೀತಿಯಿಂದ ಆದರಿಸಿ, ಹೇಳಿದ್ದು: ಸಲಾಮ್ ಅಮ್ಮ! ನಾನು ಸಾಯಲಿಕ್ಕಿದ್ಧೇನೆ, ನಾನು ಈಗಲೇ ಸಾಯುತ್ತೇನೆ. ಮತ್ತು ಆತನು ತನ್ನ ಮಕ್ಕಳ ಕಡೆಗೆ ತಿರುಗಿ ಕೊಂಡು: ಅವಳು ಏನಾದರೂ ಕಂಡು, ತಕ್ಕೊಳ್ಳುವ ಹಾಗೆ ಕೆಲವು ಶ್ಲೋಕಗಳನ್ನು ಹಾಡಿರಿ. ನಾನು ಮಾತಾಡುವರೆ ಬಹಳ ಅಶಕ್ತನಾಗಿದ್ಧೇನೆ. ಹಾಡುವ ಸಮಯದಲ್ಲಿ ಆತನು, ತನ್ನ ಹೃದಯವು ಎಷ್ಟು ಪೂರ್ಣವಾಗಿ ತನ್ನ ದೇವರ ಪ್ರೀತಿಯಲ್ಲಿಯೂ ಸ್ತೋತ್ರದಲ್ಲಿಯೂ ತತ್ಪರವಾಗಿದೆ ಎಂಬದನ್ನು ತನ್ನ ಚರ್ಯೆಗಳಿಂದಲೂ, ತನ್ನಿಂದ ಕೂಡುವಷ್ಟು ಬೇರೆ ಕುರುಹುಗಳಿಂದಲೂ ತೋರಿಸಿದನು. ರಾಗವು ತೀರಿದಾಗ ಆತನು ತನಗೆ ನೋಡ ಬಂದವಳಿಗೆ ಹೇಳಿದ್ದು: ಈಗ ಮನೆಗೆ ಹೋಗು; ನನ್ನನ್ನು ನಿನ್ನ ಗಂಡನಿಗೆ ಜ್ಞಾಪಕ ಮಾಡು; ಮತ್ತು ಯೇಸುಕ್ರಿಸ್ತನು ನಿಜವಾಗಿ ನಿನ್ನನ್ನು ಕಂಡು ಕೊಂಡರೆ, ಅದಕ್ಕಾಗಿ ಆತನಿಗೆ ಸ್ತೋತ್ರ ಕೊಡು.

ಸೂರ್ಯಾಸ್ತಮಯವಾದಾಗ ಆತನು ತನ್ನನ್ನು ಇನ್ನೊಮ್ಮೆ ಕಿಟಕಿಯ ಬಳಿಗೆ ತರಬೇಕೆಂದು ಅಪೇಕ್ಷಿಸಿ, ಹೇಳಿದ್ದು: ಇನ್ನೊಮ್ಮೆ ನನ್ನ ಪರದೈಸನ್ನು ನನಗೆ ಕಾಣಿಸಿರಿ. ಆಹಾ, ಎಷ್ಟು ಸೌಂದರ್ಯವಾದದ್ದು, ಎಷ್ಟೋ ಮಹಿಮೆಯುಳ್ಳದ್ದು! ಇಡೀ ಲೋಕದಲ್ಲಿ ಇನ್ನೊಂದು ಸ್ಟುಟ್‌ಗಾರ್ಟ್ ಪಟ್ಟಣ ಶಿಕ್ಕದು.

ಸೋಮವಾರ ರಾತ್ರಿಯಲ್ಲಿ ಹೊರಗೆ ಕೇಳಿಸಿದ ಆತನ ಮಾತುಗಳ್ಯಾವವಂದರೆ: ಓ ನನ್ನ ದೇವರೇ, ನನ್ನನ್ನು ಬಿಟ್ಟು ಬಿಡ ಬೇಡ! ಓ ನನ್ನ ಕರ್ತನೇ, ನನ್ನ ದೇವರೇ!

ಮಂಗಳವಾರದ ಬೆಳಿಗ್ಯೆ ನ. ನ. ಧೊರೆಗೆ ಆತನು ಹೇಳಿದ್ದು: ಕರ್ತನಾದ ಯೇಸುವನ್ನು ಒತ್ತಿರು; ಅವನಲ್ಲಿ ಜೀವವು ಅದೆ; ಅದು ಮಾತ್ರವಲ್ಲ, ಅವನು ತಾನೇ ಜೀವವಾಗಿದ್ದಾನೆ. ಮತ್ತೆ ಹೇಳಿದ್ದು: ನನ್ನನ್ನು ಮೇಲಕ್ಕೆ ಎತ್ತಿ ಕೆಳಗೆ ಮಲಗಿಸುವದಕ್ಕೆ ಯಾರಾದರೂ ಒಬ್ಬನು ಬೇಕು.

ಅರೆನಿದ್ರೆಯಲ್ಲಿದ್ದಾಗ, ಆತನು ಹೇಳಿದ್ದು: ನನ್ನ ಪ್ರಿಯ ನ. ನ. ಧೊರೆಯು ಅಷ್ಟು ತೃಪ್ತಿಯಿಲ್ಲದವನಾಗಿದ್ದಾನೆ,—ಅದೆಲ್ಲ ಫಾಳಿಯೇ.

೧೦ ಘಂಟೆಗೆ ಶಾಫ್‌ಹೌಸೆನ್ ಪಟ್ಟಣದ ಸಹೋದರರು ಬಂದು ತಲಪಿ, ಎಲ್ಲಾ ತೀರುವ ವರೆಗೆ ಆತನ ಸಂಗಡ ಇದ್ದು, ಆತನು ಪ್ರಾರ್ಥನೆ ಮಾಡಿದ ಪ್ರಕಾರ ಅತ್ಯಂತ ಮಮತೆಯಿಂದ ಅವನನ್ನು ಮೇಲಕ್ಕೆ ಎತ್ತುವದಕ್ಕೂ ಕೆಳಗೆ ಮಲಗಿಸುವದಕ್ಕೂ ಸಹಾಯ ಮಾಡಿದರು. ನನ್ನ ಪ್ರಿಯ ಸ್ಪ. ಎಲ್ಲಿ? ಎಂದು ಕೇಳಿದಾಗ, ಸ್ಪ. ಧೊರೆಯು ಆತನ ಮಂಚದ ಬಳಿಗೆ ಬಂದನು. ಆಗ ಆತನು ಹೇಳಿದ್ದು: ಕರ್ತನಲ್ಲಿ ವಿಶ್ವಾಸಿಸು, ಆಗ ನೀನು ಎಂದೂ

ನಾಚಿಕೆ ಪಡಲಾರಿ. ಕರ್ತನಲ್ಲಿ ವಿಶ್ವಾಸವಿಟ್ಟವರ್ಯಾರಾದರೂ ಈ ವರೆಗೆ ನಾಚಿಕೆ ಪಡಲಿಲ್ಲ. ಆಗ ಆತನು ಕೇಳಿದ್ದು: ನಿನ್ನ ಸ್ಥಿತಿ ಹ್ಯಾಗೆ ಇದೆ? ನಿನಗೆ ಬೇಕಾದದ್ದೆಲ್ಲ ಶಿಕ್ಕಿತೋ?

ಸ್ವಲ್ಪ ಹೊತ್ತಿನ ತರುವಾಯ ಆತನು ಹೇಳಿದ್ದು: ಮನುಷ್ಯನ ತ್ರಾಣದಿಂದ ಏನೂ ಲಭ್ಯವಾಗದು. ದೇವರ ತ್ರಾಣವು ಅವಶ್ಯವಾಗಿದೆ. ದೇವರ ತ್ರಾಣದಲ್ಲಿ ಮಾಡಿದ್ದು ಎಂದೆಂದಿಗೂ ನಿಲ್ಲುವದು. ವ್ಯರ್ಥ ತಿರುಗಾಟವು ಇಲ್ಲದಿರಲಿ.

ಸಂಜೆಯಲ್ಲಿ ತನ್ನ ಮಂಚದ ಮೇಲೆ ಮಲಗಿ ಕೊಂಡಿರುವಾಗ ಬಹಳ ನಿತ್ರಾಣಿಯಾಗಿ ಆತನು ಪ್ರಾರ್ಥಿಸಿದ್ದು: ಓ ಕರ್ತನಾದ ಯೇಸುವೇ, ನನ್ನ ದೊಡ್ಡ ಕಷ್ಟಗಳಲ್ಲಿ ನನ್ನನ್ನು ಬಿಟ್ಟು ಬಿಡ ಬೇಡ. ಮತ್ತು ತನ್ನ ಶಬ್ದವನ್ನು ಎತ್ತಿ, ಆತನು ಹೇಳಿದ್ದು: ಅವನ ಕಟ್ಟಳೆಗಳು ಭಾರ ವಾದವುಗಳಲ್ಲಾ; ಯಾಕಂದರೆ, ದೇವರಿಂದ ಹುಟ್ಟಿದ್ದೆಲ್ಲ ಲೋಕವನ್ನು ಜೈಸುತ್ತದೆ. ಮತ್ತು ನಮ್ಮ ವಿಶ್ವಾಸವೇ ಲೋಕವನ್ನು ಜೈಸಿದ ಜಯವಾಗಿದೆ. ಯೇಸುವು ದೇವರ ಮಗ ನಾಗಿದ್ದಾನೆಂದು ವಿಶ್ವಾಸಿಸುವವನಲ್ಲದೆ, ಮತ್ತ್ಯಾವನು ಲೋಕವನ್ನು ಜೈಸುವವನಾಗಿ ದ್ದಾನೆ? ಇವನೇ ನೀರಿನಿಂದಲೂ ರಕ್ತದಿಂದಲೂ ಬಂದವನು; ಯಾವನಂದರೆ—ಕ್ರಿಸ್ತನಾದ ಯೇಸು; ಯಾಕಂದರೆ ಇದೇ ದೇವರ ಸಾಕ್ಷಿಯಾಗಿದೆ—ತನ್ನ ಮಗನನ್ನು ಕುರಿತು ಕೊಟ್ಟದ್ದೇ. ದೇವರ ಮಗನಲ್ಲಿ ವಿಶ್ವಾಸವಿಡುವವನು ತನ್ನಲ್ಲಿ ಸಾಕ್ಷಿ ಉಂಟಾದವನಾಗಿದ್ದಾನೆ; ಆ ಸಾಕ್ಷಿ ಏನಂದರೆ, ದೇವರು ನಮಗೆ ನಿತ್ಯಜೀವವನ್ನು ಕೊಟ್ಟಿದ್ದಾನೆ; ಮತ್ತು ಈ ಜೀವವು ಅವನ ಮಗನಲ್ಲಿ ಉಂಟು ಎಂಬುವದೇ. ಮಗನನ್ನು ಹೊಂದಿದವನು ಜೀವವನ್ನು ಹೊಂದಿದ್ದಾನೆ. ದೇವರ ಮಗನನ್ನು ಹೊಂದದವನು ಜೀವವನ್ನು ಹೊಂದಿದವನಲ್ಲಾ.

ಮಂಗಳವಾರ ದಿವಸ ರಾತ್ರೆ ಆತನು ಹೇಳಿದ್ದು: ಓ ನಾನು ನನ್ನ ಸ್ನೇಹಿತನನ್ನು ನೋಡಲಿ! ಓ ನನ್ನ ಯೇಸುವೇ, ನಿನ್ನನ್ನು ನೋಡಲಿಕ್ಕೆ ಬಹಳವಾಗಿ ಅಪೇಕ್ಷಿಸುತ್ತೇನೆ! ಓ ಎಂದೆಂದಿಗೂ ಯೇಸುವಿನ ಹತ್ತರ ಇರುವದು! ಪೂರ್ಣವಾಗಿ ರಕ್ಷಿಸಲ್ಪಡುವದು! ನಾನು ಆಶ್ಚರ್ಯಕರವಾದವುಗಳನ್ನು ನೋಡುತ್ತೇನೆ. ಆಹಾ, ಪರಲೋಕವು ಎಷ್ಟೋ ಮಹಿಮೆಯುಳ್ಳದ್ದು, ಎಷ್ಟೋ ಸುಂದರವಾದದ್ದು!

ಬುಧವಾರ ದಿವಸ ಆತನ ಶ್ರಮೆಯು ಅತಿ ವಿಶೇಷವಾಗಿತ್ತು. ಪದೇ ಪದೇ ಆತನು ಹೇಳಿದ್ದು: ಓ ಒಳ್ಳೆ ದೇವರೇ, ನಾನೆಲ್ಲಿ ಹೋಗಲಿ? ಆಹಾ ಈ ಬಡ ಆಯಾಸದ ಶರೀರಕ್ಕೆ ವಿಶ್ರಾಂತಿ ಇಲ್ಲ; ಸಹಾಯವೆಲ್ಲಿಯೂ ಇಲ್ಲ. ನನ್ನನ್ನು ಮರೆತು ಬಿಡ ಬೇಡ, ಓ ನನ್ನ ಜೀವದ ಸ್ನೇಹಿತನೇ! ಬಾ, ಬೇಗ ಬಾ!

ತಿರಿಗಿ ಆತನು ಅತಿ ದುಃಖದ ಸ್ವರದಿಂದ: ಇದು ಬಹುಶಾ ಹೆಚ್ಚಾಯಿತು, ಇನ್ನು ನಾನು ತಾಳಲಾರೆ. ಓ ಕೃಪಾಳು ಕರ್ತನೇ, ಪ್ರಿಯ ಕರ್ತನೇ!

ಸಂಜೆ ೭ ಘಂಟೆಯಿಂದ ಮಧ್ಯರಾತ್ರಿಯ ವರೆಗೆ ಆತನು ಪಟ್ಟ ಶ್ರಮೆಯು ಲವ ಮಾತ್ರಕ್ಕಾದರೂ ಬಿಡಲಿಲ್ಲ. ಒಂದು ನಿಮಿಷದ ವಿಶ್ರಾಂತಿಯಾದರೂ ಆತನಿಗೆ ದೊರಕಲಿಲ್ಲ. ೯ ಘಂಟೇ ಸಮಯಕ್ಕೆ ಆತನ ಮಕ್ಕಳಲ್ಲಿ ಇನ್ನೂ ಆರು ಮಂದಿಯು ಆತನ ಸಂಗಡ ರಾತ್ರಿ ಕಳಿಯಲಿಕ್ಕೆ ಬಂದರು. ಈಗ ಆತನು ಮರಣ ಪಟ್ಟ ಮಂಚದ ಸುತ್ತಲೂ ನಿಂತವರು ಒಟ್ಟು ೧೨ ಮಂದಿಯಾಗಿದ್ದರು. ಅವರು ಆತನನ್ನು ಒಂದು ಮಂಚದಿಂದ ಇನ್ನೊಂದು ಮಂಚಕ್ಕೆ ತೆಕ್ಕೊಂಡು ಹೋಗುವಾಗ, ಅವರಲ್ಲಿ ಒಬ್ಬನು ರೋಗಿಯ ಶರೀರವು ಬಹು ಭಾರವಾಗಿ ತೋರುತ್ತದೆ ಎಂತ ಹೇಳಿದ್ದಕ್ಕೆ, ಆತನು: ಆಹಾ, ಹೌದು, ಹೌದು, ನಿಶ್ಚಯವಾಗಿ ಭಾರ ಉಂಟು

ಎಂದು ನುಡಿದನು. ಆಗ ಇನ್ನೊಬ್ಬನು: ಇದು ಕಡೇ ರಾತ್ರಿ ಅಲ್ಲವೆಂತ ನಾನು ನಂಬುತ್ತೇನೆ, ಎನ್ನಲು; ಕರ್ತನ ಚಿತ್ತವು ಆಗಲಿ, ಎಲ್ಲವೂ ಚನ್ನಾಗಿರುವದು! ಎಂದು ಬೇಗ ಉತ್ತರ ಕೊಟ್ಟನು.

ಮಧ್ಯ ರಾತ್ರಿಯಲ್ಲಿ ನೋವು ತೀರಿತು, ಆತನು ನಿಧಾನವಾಗಿಯೂ ಮೌನವಾಗಿಯೂ ಇದ್ದನು. ಆತನಿಗೆ ಕಡೆ ವರೆಗೂ ಎಲ್ಲರ ಗುರುತು ಹಿಡಿಯಲಾಗುತ್ತಿತ್ತು; ಮತ್ತು ಕಡೇ ತನಕ ಬುದ್ಧಿಸ್ವಾಧೀನತೆಯು ಇತ್ತು. ಮೂರು ತಾಸುಗಳ ವರೆಗೆ ಆತನು ಶಾಂತವಾಗಿ ಮಲಗಿ, ಒಂದಾವರ್ತಿಯಾದರೂ ತನ್ನ ಕಣ್ಣುಗಳನ್ನು ತೆರೆಯದೆ ಇದ್ದನು. ತರುವಾಯ ಆತನು ಒಮ್ಮೆ ಅವುಗಳನ್ನು ಎತ್ತಿ, ಬಹು ಪ್ರಕಾಶವುಳ್ಳ ಮಹಿಮೆಯ ದೃಷ್ಟಿಯುಳ್ಳವನಾಗಿ: ಆಹಾ, ಮಲಬಾರವನ್ನು ಜ್ಞಾಪಕ ಮಾಡಿರಿ ಎಂದು ಹೇಳಿ, ತನ್ನ ತೋಳುಗಳನ್ನು ಚಾಚಿ: ಬಾ, ಬಾ, ಎಂತ ಹೇಳಿದನು. ಆಗ ಆತನ ಕಣ್ಣುಗಳು ಮರಳಿ ಮುಚ್ಚಿದವು; ಶ್ವಾಸವು ಕಡಿಮೆ ಕಡಿಮೆಯಾಗುತ್ತಾ ಕಡೆಯಲ್ಲಿ ನಿಂತು ಹೋಯಿತು. ಮತ್ತು ಯೇಸು ಕ್ರಿಸ್ತನ ನಂಬಿಗೆಯುಳ್ಳ ಸಾಕ್ಷಿಯಾದ ಈತನು ಏನೂ ಹೋರಾಟವಿಲ್ಲದೆ ತನ್ನ ಕರ್ತನ ಆನಂದದಲ್ಲಿ ಶೇರಿದನು. ಈ ಪ್ರಕಾರ ಕರ್ತನ ಈ ಸದ್ಭಕ್ತನು ತನ್ನ ಮರಣದ ಮಂಚದ ಸುತ್ತಲೂ ಅಳುತ್ತಾ, ಪ್ರಾರ್ಥಿಸುತ್ತಾ, ಹಾಡುತ್ತಾ ಇರುವ ತನ್ನ ಮಕ್ಕಳನ್ನು ಮೇ ತಾರಿಕು ೨೧ನೆ ದಿವಾರೋಹಣದ ದಿವಸ ಪ್ರಾತಃಕಾಲ ೩ ಘಂಟೇ ಸಮಯಕ್ಕೆ ಬಿಟ್ಟು ಹೋದನು.

ಕೀರ್ತನೆ. ೧೧೮, ೨೮.

“ನೀನು ನನ್ನ ದೇವರಾಗಿದ್ದೀ; ನಿನ್ನನ್ನು ಕೊಂಡಾಡುವೆನು, ನಿನ್ನನ್ನು ಉನ್ನತ ಮಾಡುವೆನು.”

ದೇವರಿಗೆ ವಿಶ್ವಾಸದಲ್ಲಿ “ನನ್ನ ದೇವರೇ!” ಎಂತ ಹೇಳುವದು ಮನೋಹರವಾದದ್ದು. ದೇವರು ಅಂದರೇನು? ಚಿಕ್ಕ ಶಬ್ದ “ನನ್ನ” ಎಂಬದಕ್ಕೆ ಯಾವ ಅರ್ಥ? ಈ ಎರಡು ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡಲಿಕ್ಕೆ ಮನುಷ್ಯನ ಬುದ್ಧಿಗೆ ಪೂರ್ಣವಾಗಿ ಆಗದು. ದೇವರು ಅಪರಿಮಿತವಾದ ಉತ್ತಮ ವಸ್ತು; ಆತನು ಬೆಳಕು; ಆತನಲ್ಲಿ ಎಷ್ಟು ಮಾತ್ರವು ಕತ್ತಲೆ ಇಲ್ಲ; ಆತನು ಪ್ರೀತಿ; ಆತನು ತಂದೆಯೂ ರಕ್ಷಕನೂ ತಲೆಯೂ ಕುರುಬನೂ ಮದಲಿಂಗನೂ ಆದರಿಕನೂ ಆಗಿದ್ದಾನೆ. ಇವೆಲ್ಲ ಹೆಸರುಗಳ ಹಿಂದೆ “ನನ್ನ” ಎಂಬ ಚಿಕ್ಕ ಶಬ್ದವು ಇಡಲಿಕ್ಕೆ ನಮಗೆ ಅಪ್ಪಣೆ ಶಿಕ್ಕಿದ್ದಾದರೆ, ಎಂಥಾ ಆನಂದವು, ಎಂಥಾ ಆದರಣೆಯು! “ನನ್ನ” ಎಂಬ ಚಿಕ್ಕ ಶಬ್ದವು ಸೂಚಿಸುವದೇನಂದರೆ: ದೇವರು, ಆತನ ಹೆಸರುಗಳು ತೋರುವಂತೆ ನನ್ನನ್ನು ನಡಿಸುತ್ತಾನೆ, ಅಥವಾ ಆತನು ತನ್ನ ವಾಕ್ಯದಲ್ಲಿ ತನ್ನನ್ನು ಪ್ರಕಟ ಮಾಡುವಂತೆ, ನಾನು ಆತನನ್ನು ತಿಳಿಯುವದಕ್ಕೂ ಅನುಭವಿಸುವದಕ್ಕೂ ಕೊಡುವದು. ಸೊಲೊಮೋನನ ಗೀತದಲ್ಲಿ ಶುಲಮಿತಳು ಮೂರು ಸಾರಿ “ನನ್ನ ಪ್ರಿಯನು ನನ್ನವನು” ಎಂತ ಹೇಳುತ್ತಾಳೆ; ಎರಡು ಸಾರಿ ಅದಕ್ಕೆ “ನಾನು ಅವನವಳೆಂದು” ಕೂಡಿಸುತ್ತಾಳೆ. ಆದರೆ ಇನ್ನೊಂದು ಸಾರಿ ಅವಳು ಹೇಳುವದೇನಂದರೆ: “ಅವನ ಇಚ್ಛೆಯು ನನ್ನ ಮೇಲೆ ಇರುವದು.” ಕ್ರಿಸ್ತನು ಕೆಲವು ಸಾರಿ ಮನುಷ್ಯರಿಗೆ “ನಿಮ್ಮ ತಂದೆ” ಎಂದು ಹೇಳಿದ್ದಲ್ಲದೆ, ಅವರಿಗೆ “ನಮ್ಮ ತಂದೆ” ಎಂದು ಪ್ರಾರ್ಥಿಸ ಕಲಿಸಿದನು. ಮತ್ತು ಎದ್ದ ಮೇ

ಲೆ (ಯೋಹಾ. ೨೦, ೧೭.) "ನನ್ನ ತಂದೆಯೂ ನಿಮ್ಮ ತಂದೆಯೂ, ನನ್ನ ದೇವರೂ ನಿಮ್ಮ ದೇವರೂ ಆಗಿರುವವನ ಬಳಿಗೆ ಏರಿ ಹೋಗುತ್ತೇನೆ" ಎಂದು ಹೇಳಿದನು. ಅಪೊಸ್ತಲರು ಅನೇಕ ಸಾರಿ "ನಮ್ಮ ಕರ್ತನಾದ ಯೇಸು ಕ್ರಿಸ್ತನ" ವಿಷಯ ಬೋಧಿಸುತ್ತಾರೆ. ನಮ್ಮ ಪರಿಶುದ್ಧಾತ್ಮವು ಎಂತ ಅವರು ಹೇಳುವದಿಲ್ಲ, ಸರಿ; ಆದರೂ ಅದು "ನಮಗೆ ಕೊಡಲ್ಪಟ್ಟದೆ" ಇಲ್ಲವೆ "ನಮ್ಮ ಹೃದಯಗಳಿಗೆ ಕಳುಹಿಸಲ್ಪಟ್ಟದೆ" ಇತ್ಯಾದಿ ಹೇಳುವರು. ಹೀಗೆ ಮಾತಾಡುವ ರೀತಿಯಿಂದ ನಮಗೆ ಸೂಚಿಸಿರುವದೇನಂದರೆ: ತ್ರಿಯೇಕನಾದ ದೇವರ ತಿಳುವಿಕೆಯೂ ಆರಾಧನೆಯೂ ನಮ್ಮ ಹೃದಯಗಳಲ್ಲಿ ಒಣದಾಗಿಯೂ ತಂಗಳಾಗಿಯೂ ಇರದೆ, ಅವುಗಳಿಗೆ ವಿಶ್ವಾಸವುಳ್ಳ ಅಂಗೀಕಾರವೂ ಅನುಭವವೂ ಕಲಿತಿರ ಬೇಕು; ಹೀಗಿದ್ದರೆ, ಮನಸ್ಸಿನ ಸಮಾಧಾನವೂ ಆತ್ಮದ ಬಲವೂ ತಾಳ್ಮೆಯೂ ದೇವರ ಐಕ್ಯವೂ ಹೆಚ್ಚಾದ ಅನುಭವದ ಅಪೇಕ್ಷೆಯೂ, ಹಾಗೂ ದೇವರನ್ನು ಆರಾಧಿಸುವದರಲ್ಲಿ ಆತನ ಕಡೆಗಾದ ಕೃತಜ್ಞತೆಯೂ ಸ್ತುತಿಯೂ ಹುಟ್ಟಿ ಬೆಳೆಯುವದು. ಹೀಗಿರುವದರಿಂದ ಮೇಲ್ಪರಹವಾಗಿ ಇಟ್ಟಿರುವ ವಚನದಲ್ಲಿ: "ನಿನ್ನನ್ನು ಕೊಂಡಾಡುವೆನು, ನನ್ನ ದೇವರೇ, ನಿನ್ನನ್ನು ಉನ್ನತ ಮಾಡುವೆನು," ಮತ್ತು ತರುವಾಯ: "ಕರ್ತನನ್ನು ಕೊಂಡಾಡಿರಿ, ಯಾಕಂದರೆ ಅವನು ಒಳ್ಳೆಯವನು, ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ" ಎಂದು ಹೇಳಿಯದೆ.

ಹಾಗಾದರೆ ನಾನು "ಕರ್ತನು ನನ್ನ ದೇವರಾಗಿದ್ದಾನೆ" ಎಂಬದಕ್ಕೆ ಸಂತೋಷ ಪಟ್ಟು, ಈ ದೊಡ್ಡ ಉಪಕಾರವನ್ನು ನೆನಸುವವನಾಗಿ, ಆತನನ್ನು ಸ್ತುತಿಸ ತಕ್ಕವನಾಗಿದ್ದೇನೆ. ಐಶ್ವರ್ಯವಂತನು ತನ್ನ ಹಣ, ತನ್ನ ಜಿಂದಿಗೆ, ತನ್ನ ಪ್ರಿಯ ಮನೆ ಭೂಮಿಗಳನ್ನು ನೋಡುತ್ತಾ, ಇದೆಲ್ಲ ನನ್ನದೆಂದು ಸಂತೋಷ ಪಡಲಿ! ಇನ್ನೊಬ್ಬನು ತನ್ನ ಉಪಕಾರಿಗಳನ್ನೂ ಸ್ನೇಹಿತರನ್ನೂ ನೆನಸಿ, ಅವರಲ್ಲಿ ಸಂತೋಷಿಸಲಿ! ನಾನಾದರೂ ಕರ್ತನು ನನ್ನ ದೇವರೆಂದು ಕರೆಯಲ್ಪಡುವದಕ್ಕೆ ನನಗೆ ನಾಚಿಕೆ ಪಡುವದಿಲ್ಲ (ಇಬ್ರಿ. ೧೧, ೧೬.) ಎಂಬ ಆಶ್ಚರ್ಯವಾದ ಪ್ರೀತಿಗೂ ಕ್ರಿಸ್ತನ ಮುಖಾಂತರ ದೇವರಿಗೆ "ನನ್ನ ದೇವರೇ," ಎಂದು ಕರೆಯಲಿಕ್ಕೆ ನನಗೆ ಅಧಿಕಾರವನ್ನು ಹೊಂದಿಸಿದ ಘನವಾದ ಕೃಪೆಗೂ ಸಂತೋಷ ಪಡುತ್ತೇನೆ.

ಮಂಜು ಆಕಾಶವನ್ನು ದಟ್ಟಣೆ ಮುಚ್ಚಿರುವ ಸಮಯದಲ್ಲಿ ಸೂರ್ಯನ ಮಂಡಲ ಕಾಣಿಸದೆ, ಅವನ ಕಳೆ ಸಹಾ ನಾವು ಅದನ್ನು ಪೂರ್ಣವಾಗಿ ಅನುಭವಿಸಲಾಗುವಷ್ಟು ತೋರದಿದ್ದರೂ, ಅವನು ಆಕಾಶದಲ್ಲಿ ಇದ್ದಾನೆಂದು ತಿಳಿಯುತ್ತೇವೆ; ಇದಲ್ಲದೆ ಅವನ ಕಾವನ್ನು ಅಲ್ಪ ಸ್ವಲ್ಪವಾಗಿ ತಿಳಿದು, ಅವನ ಬೆಳಕನ್ನು ಅನುಭವಿಸುತ್ತೇವೆ. ಇದರೋಪಾದಿಯಲ್ಲಿ ಈಗಲೇ ನನ್ನ ತಿಳಿಯುವಿಕೆಯ ದೃಷ್ಟಿಗೆ ಇನ್ನು ಮಂಜು ಅಥವಾ ಮೋಡಗಳು ಮುಸುಕುವದರಿಂದ, ನಾನು ಕರ್ತನನ್ನು ಪೂರ್ಣವಾಗಿ ಅನುಭವಿಸ ಕೂಡದು; ಆದರೆ ಭಾಗ್ಯವಾದ ನಿತ್ಯತ್ವದಲ್ಲಿ ಅಂಥಾ ಮೊಬ್ಬಾದ ಮುಸುಕು ತೆಗದಿರುವದು. ಆಗಲು ದೇವರ ಮಹಿಮೆಯು ಅತುಲವಾದ ನಿರ್ಮಲತನವೂ ಪ್ರಕಾಶವೂ ಆಗಿರುವ ಸೂರ್ಯನ ಹಾಗೆ ನೀತಿವಂತರಿಗೆ ಬೆಳಗಿಸಲು, ಅವರು ಆತನಿಗೆ ಈಗಕ್ಕಿಂತ ಅತಿ ಸಮಿಾಪವಾಗಿ ಶೇರಿಸಿ ಕೊಂಡು, ಸೋತ್ತೋಗದ ಕಣ್ಣುಗಳಿಂದ ಆತನನ್ನು ಇರುವ ಪ್ರಕಾರವೇ (೧ ಯೋಹಾ. ೩, ೨.) ನೋಡುವರು. ಅದು ಕಾರಣ "ನೀನು ನನ್ನ ದೇವರಾಗಿದ್ದೀ" ಎಂದು ಹೇಳ ಬಲ್ಲವನಿಗೆ ಆ ಮಾತಿನಲ್ಲಿ ಎಂಥಾ ಭಾಗ್ಯ ಉಂಟೆಂದು ಆ ದಿನದಲ್ಲಿ ಪೂರ್ಣ ಗೋಚರವಾಗುವದು. ಹಲ್ಲೆಲೂಯಾ.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೧. DECEMBER 1868. ಅಂಕೆ ೬.

ಕೊಲೊ. ೩, ೧೮—೨೫; ೪, ೧.

ಹೆಂಗಸರೇ, ಕರ್ತನಲ್ಲಿ ಯೋಗ್ಯವಾದ ಪ್ರಕಾರ ಸ್ವಂತ ಗಂಡಂದಿರಿಗೆ ಒಳಗಾಗಿರ್ರಿ. ಗಂಡಸರೇ, ಹೆಂಡರನ್ನು ಪ್ರೀತಿ ಮಾಡಿ, ಅವರಿಗೆ ಕಹಿಯಾಗಿರ ಬೇಡಿರಿ.

ಮಕ್ಕಳೇ, ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿರ್ರಿ; ಇದೇ ಕರ್ತನಿಗೆ ಆನಂದಕರ ವಾದದ್ದು. ತಂದೆಗಳೇ, ನಿಮ್ಮ ಮಕ್ಕಳು ಮನಗುಂದದ ಹಾಗೆ, ಅವರಿಗೆ ಕೋಪವನ್ನೆಬ್ಬಿಸ ಬೇಡಿರಿ.

ದಾಸರೇ, ಮನುಷ್ಯರನ್ನು ಮೆಚ್ಚಿಸುವವರಾಗಿ ಕಣ್ಣು ಸೇವೆಯನ್ನು ಮಾಡದೆ, ದೇವ ರಿಗೆ ಭಯ ಪಟ್ಟು, ಮಾಂಸದ ಪ್ರಕಾರದ ಯಜಮಾನರಾದವರಿಗೆ ಎಲ್ಲಾದರಲ್ಲಿ ಹೃದಯದ ಯಥಾರ್ಥದಿಂದ ವಿಧೇಯರಾಗಿರ್ರಿ. ಮತ್ತು ಮಾಡುವದನ್ನೆಲ್ಲಾ ಮನುಷ್ಯರಿಗೆಂದಲ್ಲ, ಕರ್ತನಿಗೆಂದು, ಹೃದಯದಿಂದ ಮಾಡಿರಿ. ಕರ್ತನಿಂದ ಬಾಧ್ಯತೆಯ ಪ್ರತಿಫಲವನ್ನು ಹೊಂ ದುವಿರೆಂದು ತಿಳಿದು ಕೊಳ್ಳುತ್ತೀರಲ್ಲ? ಯಾಕಂದರೆ ಕರ್ತನಾದ ಕ್ರಿಸ್ತನಿಗೆ ದಾಸರಾಗಿ ದ್ದೀರಿ. ಆದರೆ ಅನ್ಯಾಯ ಮಾಡುವವನು ಮಾಡಿದ ಅನ್ಯಾಯದ ಫಲವನ್ನು ಹೊಂದು ವನು; ಮುಖದಾಕ್ಷಿಣ್ಯವು ಇಲ್ಲ.

ಯಜಮಾನರೇ, ನಿಮಗೂ ಪರಲೋಕದಲ್ಲಿ ಯಜಮಾನನು ಇದ್ದಾನೆಂದು ತಿಳಿದು, ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ದಾಸರಿಗೆ ಕೊಡಿರಿ.

ಈ ಸ್ಥಳದಲ್ಲಿ ಅಪೊಸ್ತಲನಾದ ಪೌಲನು ಕ್ರೈಸ್ತರ ಮನೆತನದ ನ್ಯಾಯವನ್ನು ವಿವರಿ ಸುತ್ತಾನೆ. ಈ ನ್ಯಾಯವನ್ನು ಕೈಕೊಳ್ಳುವದಕ್ಕೆ ಯಥಾರ್ಥವಾದ ಭಯ ಭಕ್ತಿ ಅವಶ್ಯ ವಾಗಿದೆ. ಇದನ್ನು ಹುಟ್ಟಿಸ ತಕ್ಕ ಘನವಾದ ತಾತ್ಪರ್ಯವು ೨೫ನೇ ವಚನದಲ್ಲಿ ಕಾಣು ತ್ತದೆ, ಏನಂದರೆ:

ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ.

I. ಈ ಮಾತಿನ ಅಭಿಪ್ರಾಯುವನ್ನು ಚನ್ನಾಗಿ ವಿಚಾರಿಸುವ.

II. ಅದರ ಪ್ರಕಾರ ನಮಗೆ ನಾವೇ ಬುದ್ಧಿ ಹೇಳುವ.

ನನ್ನ ದೇವರಾದ ಕರ್ತನೇ, ಬಲವಿಲ್ಲದವನಾದ ನನ್ನನ್ನು ಬಲ ಪಡಿಸ ಬೇಕೆಂದು, ನಮಗಾಗಿಯೇ ಕ್ರೂಜಿಸಿದ ಯೇಸುವಿನ ಬಳಿಗೆ ಓಡಿ ಹೋಗಿ ಆತನನ್ನು ನಾವು ಆಶ್ರೈಸಿ ಕೊಳ್ಳುವ ಹಾಗೆ, ನಿನ್ನ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲವೆಂಬುವದನ್ನು ನಮ್ಮ ಹೃದಯಾಂತರ್ಯದಲ್ಲಿ ಶೇರಿಸ ಬೇಕೆಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ. ಆಮೆನ್.

I. ದೇವರು ಮುಖದಾಕ್ಷಿಣ್ಯವಿಲ್ಲದೆ, ತನ್ನ ನೀತಿಯ ನಿರಂತರವಾದ ನ್ಯಾಯದ ಪ್ರಕಾರ ಒಬ್ಬೊಬ್ಬ ಮನುಷ್ಯನಿಗೆ ನ್ಯಾಯ ತೀರಿಸಿ, ಅವನವನ ಕ್ರಿಯೆಗಳ ಪ್ರಕಾರ ಅವನವನಿಗೆ ಫಲ ಕೊಡುತ್ತಾನೆ ಎಂಬುವದು ಲೌಕೀಕ ಮನುಷ್ಯರಿಗೆ ಅಗೋಚರವಾದಂಥಾ, ಎಲ್ಲಾ ಸರಾಗ ಮಾಡುವ ನ್ಯಾಯತೀರ್ವಿಕೆಯ ಮಹಾ ದಿವಸದಲ್ಲಿ ಭಯಂಕರವಾದ ಮಹಿಮೆಯಿಂದ ಪ್ರಸಿದ್ಧವಾಗ ತಕ್ಕಂಥಾ ಸನ್ಮಾರ್ಗ ಬೋಧನೆಯ ಮುಖ್ಯವಾದ ಒಂದು ಪಾಠವಾಗಿದೆ. ಯೇಸು ಕ್ರಿಸ್ತನು ಅಂತ್ಯವಾದ ಪ್ರಧಾನಯಾಜಕ ಪ್ರಾರ್ಥನೆಯಲ್ಲಿ: ನೀತಿಯುಳ್ಳ ತಂದೆಯೇ, ಲೋಕವು ನಿನ್ನನ್ನು ಅರಿಯದು ಎಂದು ಹೇಳಿದನು. ಇದೇನಂದರೆ: ದೇವರು ನೀತಿಯುಳ್ಳವನೆಂದು ಲೋಕವು ತಿಳುಕೊಳ್ಳುವದಿಲ್ಲ. ದೇವರ ಮಾರ್ಗಗಳು ಪರಿಶುದ್ಧವಾಗಿವೆಂದೂ, ದೇವರ ನೇಮುಗಳು ಅಭೇದ್ಯವಾಗಿವೆಂದೂ, ದೇವರ ತೀರ್ಪುಗಳು ನ್ಯಾಯವಾಗಿವೆಂದೂ, ಲೋಕದವರು ಗ್ರಹಿಸಿ ಕೊಳ್ಳದೆ, ಇಹ ಭ್ರಮೆಯಿಂದ ಮರುಳಾಗಿ, ದೇವರು ಮಹೋನ್ನತದಲ್ಲಿ ವಾಸಿಸಿ, ಎಲ್ಲವನ್ನು ನೋಡಿ, ಆಳಿ ಕೊಂಡು, ಎಲ್ಲಾ ದುಷ್ಟತ್ವವನ್ನೂ ಅಂಧಕಾರವನ್ನೂ ಬೆಳಕಿಗೆ ತಂದು, ಲೋಕದಲ್ಲಿ ಹುಟ್ಟಿ ಬಾಳಿ ಸತ್ತ ಮನುಷ್ಯರೆಲ್ಲರ ನಡೆನುಡಿ ನೆನಪುಗಳನ್ನೆಲ್ಲ ಅಂತ್ಯ ದಿನದಲ್ಲಿ ಶೋಧಿಸಿ, ಮುಖದಾಕ್ಷಿಣ್ಯವಿಲ್ಲದೆ ಒಬ್ಬೊಬ್ಬನಿಗೆ ಮುಯ್ಯಿಗೆ ಮುಯ್ಯಿ ಕೊಡುವನೆಂದು ನೆನಸುವದಿಲ್ಲ. ಲೋಕವು ಇದನ್ನು ನಂಬಲೊಲ್ಲದು; ಯಾಕಂದರೆ ನೀತಿಯುಳ್ಳ ನ್ಯಾಯಾಧಿಪತಿಯಾದ ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ. ದೇವರು ಮನುಷ್ಯನ ಆತ್ಮಸ್ತುತಿಯ ಆಲೋಚನೆಯ ಪ್ರಕಾರವಲ್ಲ, ಪರರ ಎಣಿಕೆಯ ಪ್ರಕಾರವಲ್ಲ, ಹೃದಯದ ನೆಲದಲ್ಲಿಯೂ ಸಾಮಾನ್ಯವಾದ ನಡತೆಯಲ್ಲಿಯೂ ಕಾಣ ಬಂದ ಪಾಪ ಪುಣ್ಯಗಳ ಪ್ರಕಾರ ನ್ಯಾಯ ವಿಚಾರಿಸುತ್ತಾನೆ ಎಂಬುವದನ್ನು ಲೋಕದವರು ಮನಸ್ಸಿಗೆ ತಂದು ನಂಬಿದರೆ, ನಂಬಿದಂದಿನಿಂದ ದೇವರ ದೃಷ್ಟಿಯಲ್ಲಿ ನಿಜವಾಗಿ ಕಾಣ ತಕ್ಕ ನೀತಿಯನ್ನು ಪಡಕೊಳ್ಳ ಬೇಕೆಂದು ಜಾಗ್ರತೆಯಿಂದಲೂ ಭಯಕಂಪನದಿಂದಲೂ ಹುಡುಕಿ, ಲೌಕೀಕ ಭಾವವನ್ನು ಬಿಟ್ಟು, ಮಾನಸಾಂತರ ಪಡುವರು. ಆದರೆ ಅದನ್ನು ನಂಬುವದಿಲ್ಲ. ಆದ ಕಾರಣ ಮಾನಸಾಂತರವಾಗದೆ, ಅಂತರಂಗವಾದ ಹೃದಯದ ಸ್ಥಿತಿಯನ್ನು ಮರೆ ಮಾಡಿದ ಕಪಟ ಡಂಭಾಚಾರಗಳೆಲ್ಲ ಮಾಯದ ಮೊಬ್ಬಿನಂತೆ ಕಳದು, ಜೇಡನ ಬಲೆಯಂತೆ ಹರಿದು ಹೋಗುವಂಥಾ ಮುಖದಾಕ್ಷಿ

ಣ್ಯವಿಲ್ಲದ ನ್ಯಾಯಾಧಿಪತಿಯ ಉರಿಗಣ್ಣಿನ ಮುಂದೆ ಎಲ್ಲಾ ಬೈಲಾಗುವಂಥಾ ನ್ಯಾಯ ತೀರ್ವಿಕೆಯ ದಿವಸವಾದ, ನೀತಿಯ ದಿವಸವಾದ ಮಹಾ ದಿವಸವು ಮೂಡುವ ಪರ್ಯಂತರ ಮೋಸವನ್ನೂ ಸ್ವಕಪೋಲ ಬುದ್ಧಿಯನ್ನೂ ಪಿತೃಸಂಪ್ರದಾಯದ ಮಾಯಮಾರ್ಗವನ್ನೂ ಬಿಡಲಿಕ್ಕಿಲ್ಲ. ಪರಿಶುಧ್ಧಾತ್ಮದ ಶಿಕ್ಷೆಗೆ ಒಳಗಾಗಿ ಮುಕ್ತನಾಗ ತಕ್ಕ ಕಾಲ ವ್ಯರ್ಥವಾಗಿ ಕಳಕೊಂಡು, ಆ ದಿವಸದಲ್ಲಿ ಮಾತ್ರ ಕಪಟಿಯಾಗಿ ಕಾಣಿಸಿ ಕೊಳ್ಳುವವನಿಗೆ ಅಯ್ಯೋ! ಕೃಪೆಯ ಕಾಲ ಕಳದ ಬಳಿಕ, ಆ ದಿವಸದಲ್ಲಿ ಮಾತ್ರ ನೀನು ಎಂಥವನು ಎಂದು ತಿಳು ಕೊಳ್ಳುವಿಯಾದರೆ, ನಿನಗೆ ದಿಕ್ಕಿಲ್ಲವಕಟ.

ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ. ಲೋಕದಲ್ಲಿ ಮಾತ್ರವೆ ಮುಖದಾಕ್ಷಿಣ್ಯ ನಡಿಯುತ್ತದಷ್ಟೆ. ಲೋಕದಲ್ಲಿ ಅರಸು ಆಳು ಎಂಬ ಭೇದವದೆ. ಉದ್ಯೋಗ ಬಿರುದೂ, ಹೆಸರ್ವಾಸಿ ಲಾಂಛನಗಳೂ, ಮರ್ಯಾದೆ ಮಾನಸ್ಥಾನಗಳೂ ಉಂಟು; ಅಂಗಿ ಒಲ್ಲಿಗಳೂ, ಉಡುಗೆರೆ ವ ಬಳೆಗಳೂ, ಸರಪಳಿ ಪದಕಗಳೂ ಉಂಟು; ಬಡವ ಭಾಗ್ಯವಂತರೂ, ನೀಚ ಊಚರೂ, ನಾಗರೀಕ ನಾಡಿನವರೂ, ವಿದ್ವಾಂಸ ಮೂಢರೂ ಉಂಟು; ನಾನಾ ವಿಧ ವಾದ ವ್ಯವಹಾರ, ಉದ್ಯೋಗ, ಕುಶಲಗತಿ, ವ್ಯಾಪಾರ ಭೇದಗಳು ಉಂಟು; ಕುಲ, ಜಾತಿ, ಭಾಷೆ, ಮರ್ಯಾದೆ, ಭಕ್ತಿ, ಮತಗಳು ಉಂಟು. ಇದೆಲ್ಲಾ ಪ್ರಪಂಚ ಗತಿಗೆ ಶೇರು ತ್ತದೆ. ಇದು ಲೋಕಕ್ಕೆ ಯುಕ್ತವಾದದ್ದು. ಭಕ್ತನು ಸಹಾ ಲೋಕದ ಕಟ್ಟಳೆಗೆ ಒಪ್ಪಿ, ಮಾನ್ಯರಿಗೆ ಮಾನ ಮಾಡುತ್ತಾನೆ. ಇದರಲ್ಲಿ ತಪ್ಪು ಇಲ್ಲ. ಆದರೆ ಮುಖದಾಕ್ಷಿಣ್ಯ ಮಾಡಿ, ಒಲ್ಲಿ, ಬಿರುದು, ಹಣ, ಶರೀರ, ತ್ರಾಣವುಳ್ಳವರಿಗೆ ಇಲ್ಲದವರಿಗಿಂತ ಹೆಚ್ಚು ಮಾನ ಮಾಡುವದು ತಪ್ಪು. ಇಲ್ಲವೇ ಬಡವನ ಜೀವಕ್ಕಿಂತ ಐಶ್ವರ್ಯವಂತನ ಜೀವವು, ನೀಚನ ಜೀವಕ್ಕಿಂತ ಊಚನ ಜೀವವು ಘನವುಳ್ಳದ್ದೆಂದು ನೆನಸುತ್ತೀಯಾ? ಇಲ್ಲವೇ ಹೆಸರ್ವಾಸಿ ಯಾದ ಒಬ್ಬನು ಕ್ರಿಸ್ತನ ಹತ್ತರ ತಿರುಗಿ ಕೊಳ್ಳುವದು ಹೆಸರಿಲ್ಲದ ಪಾಪಿ ಮಾನಸಾಂತರ ಪಡುವದಕ್ಕಿಂತ ಕರ್ತನಿಗೆ ಹೆಚ್ಚು ಮಾನವೆಂದು ನೆನಸುತ್ತೀಯಾ? ಇಲ್ಲವೇ ಜೀವಮಾ ರ್ಗವಾಗಿ ದೇವರು ನೇಮಕ ಮಾಡಿದ ಪದ್ಧತಿಯನ್ನು ವಿಚಾರುವದಕ್ಕೆ ದೊಡ್ಡವರಿಗೆ ಚಿಕ್ಕ ವರಿಗಿಂತ ಹೆಚ್ಚು ಅಧಿಕಾರ ಉಂಟೆಂದು, ಹುಚ್ಚನಾಗಿಯೂ ಹಾಸ್ಯಗಾರನಾಗಿಯೂ ಇದ್ದು, ಕಣ್ಣು ನೋಂಪು ಮೈಗಿಂಪು ಡಂಭಾಚಾರ ಇತ್ಯಾದಿಗಳನ್ನು ಇಚ್ಛೈಸಿ, ತನಗೆ ಹಿತವಾದ ಮಾ ರ್ಗದಲ್ಲಿ ನಡಕೊಳ್ಳಲಿಕ್ಕೆ ಐಶ್ವರ್ಯವಂತನೂ ಬಡವನಿಗಿಂತ ಹೆಚ್ಚು ಯೋಗ್ಯನಾಗಿದ್ದಾ ನೆಂದು ನೆನಸುತ್ತೀಯಾ? ವಿದ್ವಾಂಸನೊಬ್ಬನು ಯೇಸು ಕ್ರಿಸ್ತನ ವಾಕ್ಯವನ್ನೂ ಕ್ರೂಜೆಯ ನ್ನೂ ತರ್ಕನೀತಿಯ ಪ್ರಕಾರ ಆಕ್ಷೇಪಿಸಲಿಕ್ಕೆ ತಿಳಕೊಂಡು, ತನ್ನ ಗರ್ವಬುದ್ಧಿಯನ್ನು ವಿದ್ವಾಂಸರ ಪದ್ಧತಿಯ ಪ್ರಕಾರ ರಚಿಸಿದ ಪುಸ್ತಕದಲ್ಲಿ ಪ್ರಕಟ ಮಾಡಿದರೆ, ಗ್ರಂಥರಚನೆ ಯಲ್ಲಿಯೂ ಚೇಷ್ಟೆ ಮಾತುಗಳಲ್ಲಿಯೂ ಮತ್ತೊಬ್ಬರಿಗಿಂತ ಪ್ರಾಜ್ಞನಾಗಿರುವದರಿಂದ, ಮೂಢನಾದ ಅವಿಶ್ವಾಸಿಗೆ ನೇಮಕವಾದ ಶಿಕ್ಷೆಗೆ ತಪ್ಪಿಸಿ ಕೊಳ್ಳುವನೆಂದು ನೆನಸುತ್ತೀಯಾ? ಈ ಲೋಕದವರ ಬುದ್ಧಿಗೂ ಪ್ರಪಂಚದ ನಡೆನುಡಿಗಳಿಗೂ ದೇವರು ಮೆಚ್ಚುತ್ತಾನೆಂದು ನೆನಸುತ್ತೀಯಾ? ದೇವರು ಮುಖದಾಕ್ಷಿಣ್ಯವನ್ನು ಮಾಡುತ್ತಾನೆಂದು ನೆನಸುತ್ತೀಯಾ?

ಹಾಗಲ್ಲ, ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲ. ಅವನು ನೀತಿವಂತನಾದ ನ್ಯಾಯಾಧಿಪತಿಯಾಗಿದ್ದು, ಹಿರಿಕಿರಿಯರಿಗೂ, ನಾಗರೀಕ ಹಳ್ಳಿಯವರಿಗೂ, ಕಲಿತ ಕಲಿಯದವರಿಗೂ, ಹಣವಂತ ಹಣವಿಲ್ಲದವರಿಗೂ, ಅವರವರ ಕ್ರಿಯೆಗಳ ಪ್ರಕಾರ ನ್ಯಾಯ ತೀರಿಸಿ, ಅವಿಶ್ವಾಸಿಗಳೆಲ್ಲರಿಗೂ, ಮಾನಸಾಂತರ ಪಡದವರಿಗೂ, ಕರ್ತನನ್ನು ತಿಳಿಯದವರಿಗೂ, ಜೀವದ ಪುಸ್ತಕದಲ್ಲಿ ಹೆಸರು ಬರೆಸಿ ಕೊಳ್ಳದವರಿಗೂ ತಾನು ಮುಂಚೆ ಹೇಳಿದ ಪ್ರಕಾರ ನ್ಯಾಯ ತೀರಿಸಿ, ಆಜ್ಞೆನಿರ್ಣೈಸುವನು. ಆದರೆ ಸತ್ಕರ್ಮದಲ್ಲಿ ತಾಳಿ ಕೊಂಡು, ನಿತ್ಯಜೀವವನ್ನು ಹುಡುಕುವ ಬಡವರಿಗಾಗಲಿ ಐಶ್ವರ್ಯವಂತರಿಗಾಗಲಿ, ನೀಚರಿಗಾಗಲಿ ಊಚರಿಗಾಗಲಿ, ವಿದ್ವಾಂಸರಿಗಾಗಲಿ ವಿದ್ಯವಿಲ್ಲದವರಿಗಾಗಲಿ, ಕಲಿತವರಿಗಾಗಲಿ ಕಲಿಯದವರಿಗಾಗಲಿ, ಮಹಿಮೆಯನ್ನೂ ಮಾನವನ್ನೂ ನಿರ್ಲಯವನ್ನೂ ಕೊಡುವನು; ಯಾಕಂದರೆ ಆತನ ಕರುಣೆಯೂ ಆತನ ನೇಮುಗಳೂ ಆತನ ತೀರ್ಪುಗಳೂ ಎಲ್ಲರಿಗೆ ಸರಿಯಾಗಿವೆ.

ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ. ಇದಕ್ಕೆ ದೇವರ ವಾಕ್ಯವೇ ಸಾಕ್ಷಿ. ಹೊಲೆಗಳಿಸಿದ ಪಾಪಿಗಳಿಗೆಲ್ಲ ನ್ಯಾಯ ತೀರಿಸುವ ಪರಿಶುದ್ಧನಾದ ದೇವರು ಉದ್ಯೋಗ, ಪ್ರಾಯ, ವಿದ್ಯ, ಬುದ್ಧಿ, ವಂಶ, ಜಾತಿಭೇದಗಳನ್ನು ನೋಡದೆ, ಎಲ್ಲಾ ಮನುಷ್ಯರಿಗೆ ಒಟ್ಟಾಗಿ ಸಾಮಾನ್ಯವಾದ ತೀರ್ಪು ಮಾಡುತ್ತಾನೆಂದು ಸ್ಪಷ್ಟವಾಗಿ ಬರದದೆ. ಎಲ್ಲರನ್ನು ಅವಿಶ್ವಾಸದ ಬಂಧದಲ್ಲಿ ಹಾಕಿದ್ದಾನೆ. ಯೆಹೂದ್ಯರಾಗಲಿ ಪರಜನರಾಗಲಿ, ಯಾವ ಅಧಿಕಾರ ಉದ್ಯೋಗ ಕುಲಗಳವರಾಗಲಿ, ಎಲ್ಲರು ಒಟ್ಟು ಪಾಪಿಗಳಾಗಿದ್ಧಾರೆ; ದೇವರ ಮಹಿಮೆಗೆ ತಪ್ಪಿ, ಯೇಸು ಕ್ರಿಸ್ತನಿಂದ ಉಂಟಾದ ರಕ್ಷಣೆಯ ಮುಖಾಂತರ ಪುಣ್ಯವಿಲ್ಲದೆ ಕೃಪೆಯಿಂದಲೇ ನೀತಿ ಪಡ ತಕ್ಕ ಪಾಪಿಗಳಾಗಿದ್ಧಾರೆ. ಮನುಷ್ಯನೇ, ಕೇಳು! ನಿನ್ನ ದೇವರು ನಿನಗೆ ಹೇಳ ಕಳುಹಿಸುವದೇನಂದರೆ: ಸ್ವಭಾವದಿಂದ ಪಾಪಿಯಾಗಿದ್ಧೀ; ಪಾಪಗರ್ಭದಿಂದಲೇ ಹುಟ್ಟಿದ್ಧೀ. ದೇವರು ಮೆಚ್ಚುವ ಸತ್ಕ್ರಿಯೆ ಒಂದನ್ನಾದರೂ ಮಾಡುವದಕ್ಕೆ ನಿನ್ನಿಂದ ನೀನೆ ಅಶಕ್ತನಾಗಿದ್ಧೀ. ನೀನು ದೇಹಾತ್ಮ ಸುಶೀಲ ಶಿಖಾಮಣಿಯಾಗಿದ್ದರೂ, ಮಹಾ ಧನಿಕನಾಗಿದ್ದರೂ, ನಿನ್ನ ನೆರೆಹೊರೆಯವರಲ್ಲಿ ಬುದ್ಧಿಶಾಲಿಯಾಗಿಯೂ ವಿದ್ವಾಂಸನಾಗಿಯೂ ಹೆಸರ್ಗೊಂಡರೂ, ನಯ ವಸ್ತ್ರಗಳನ್ನು ಹಾಕಿ ಕೊಳ್ಳುತ್ತಾ ಈ ಬಾಳಿನ ವೈಭವ ಭೋಗಗಳನ್ನೆಲ್ಲ ಅನುಭವಿಸಿದರೂ, ಏನೇನಾಗಿದ್ದರೂ, ಸದ್ಗುಣವಂತನೆಂದೂ ನಿರ್ದೋಷಿಯಾದ ಗೃಹಸ್ಥನೆಂದೂ ಅನ್ನಿಸಿ ಕೊಂಡರೂ, ಅಥವಾ ಸತ್ಯವ್ರತೆಯಾಗಿ ಹೆಸರ್ವಾಸಿಯಾಗಿದ್ದರೂ, ನೀನು ಪಾಪಿಯೇ, ಮುಕ್ತನಾಗುವದಕ್ಕೆ ಎಷ್ಟು ಮಾತ್ರವು ಪಾತ್ರನಲ್ಲದ ಕಡು ಬಡ ಪಾಪಿಯೇ ಸರಿ. ಸರ್ವಲೋಕದ ನ್ಯಾಯಾಧಿಪತಿಯ ಮುಂದೆ ಯಾವ ಹೆಸರಾದರೂ ಸಾಲದು. ಮುಕ್ತನಾಗ ಬೇಕಾದರೆ, ಕಡು ಕೀಳ ಕಳ್ಳನಂತೆ ಎಲ್ಲಾ ಮನುಷ್ಯರಿಗಾಗಿ, ಸಾಮಾನ್ಯರಾದ ಎಲ್ಲಾ ಪಾಪಿಗಳಿಗಾಗಿ, ಗೊಲ್ಗೊಥದಲ್ಲಿ ಹೊಯಿದ ರಕ್ತದಿಂದಲೇ ಮುಕ್ತನಾಗ ಬೇಕು. ಎಲ್ಲರೂ ಮರಣಕ್ಕೂ ನರಕಕ್ಕೂ ಪಾತ್ರರಾಗಿದ್ಧಾರೆಂದು ಗಾಂಭೀರ್ಯವಾಗಿ ಸಾಕ್ಷಿ ಕೊಟ್ಟು, ಎಲ್ಲಾ ಮನುಷ್ಯರಿಗೆ ದೇವರು ಮಾಡಿದ ತೀರ್ಪನ್ನು ಮನುಷ್ಯರಿಗೆ ಸಹ

ಜವಾದ ಗರ್ವವು ನಾನಾ ವಿಧವಾದ ನೆವನಗಳಿಂದ ಎದುರಿಸುತ್ತದಕಟ! ಪಾಪಿ, ಬಡ ಪಾಪಿ ಎಂಬ ಶಬ್ದವನ್ನು ಅಸಂಹಿಸಿ, ಹಗೆ ಮಾಡಿ, ಕರ್ತನ ಹೆಸರಿನಲ್ಲಿ ತಮ್ಮನ್ನು ಹಾಗೆ ಕರಿಯುವವರನ್ನು ಕೇಳಿದರೆ, ಶಿಟ್ಟನಿಂದ ಹೃದ್ಭ್ರಮಣವಾಗುವ ಜನರು ಉಂಟು. "ಈ ಶಬ್ದ ಕಡು ಕೀಳಾದದ್ದು. ಈ ಕಾಲದ ನಾಗರೀಕತನಕ್ಕೆ ಅತಿ ವಿರೋಧವಾದದ್ದು. ನಡತೆ ಪೂರ್ಣ ನಿಷ್ಕಳಂಕವಾಗದಿದ್ದರೂ, ದೇವರ ವಾಕ್ಯವು ತಾರತಮ್ಯ ನೋಡದೆ ಎಲ್ಲಾ ಮನುಷ್ಯರಿಗೆ ಇಡುವ ಬಡ ಪಾಪಿ ಎಂಬ ಹೆಸರಿಗೆ ನಾವು ಹ್ಯಾಗೂ ಪಾತ್ರರಾಗಿ ಇರುವದು ಇಲ್ಲವೆಂದು ಹೇಳಿ ಕೊಳ್ಳುತ್ತಾರೆ. ಉತ್ತಮ ಬುದ್ಧಿ ಇಲ್ಲದ ಜನಸಮೂಹಕ್ಕೆ ಇದು ಆದೀತು. ಶೆರೆ ಬಿದ್ದವರಿಗೆ ಅಥವಾ ಪ್ರಾಣಶಿಕ್ಷೆ ಹೊಂದ ತಕ್ಕವರಿಗೆ ಈ ಮಾತು ಸಲ್ಲುತ್ತದೆ. ಆದರೆ ನಾಗರೀಕನು ಬೇರೆ" ಎಂದು, ದೇವರ ಸತ್ಯಕ್ಕೆ ವಿರೋಧವಾಗಿ ಕಡಂಗ ಆಳ್ವೇರಿಗಳನ್ನು ಕಟ್ಟಿ, ದೇವರನ್ನು ಸುಳ್ಳುಗಾರನಾಗಿ, ಆತನ ವಾಕ್ಯವನ್ನು ಕಟ್ಟುಕಥೆಯನ್ನಾಗಿ ಮಾಡುತ್ತಾರೆ. "ಹೀಗಿರಲಾಗಿ ದೇವರು ನ್ಯಾಯದ ಪ್ರಕಾರ ತೀರ್ಪು ಮಾಡಿದರೆ, ನರಕದಲ್ಲಿ ಬೀಳ ತಕ್ಕ ಕಡು ಬಡ ಪಾಪಿಗಳೆಂದು ಹೆಸರ್ಗೊಳ್ಳ ಬಾರದಂಥಾ ಮಾನ ಮರ್ಯಾದೆಯುಳ್ಳ ನಾಗರೀಕರೂ ಹೆಸರ್ವಾಸಿಯಾದ ಒಳ್ಳೇ ಗೃಹಸ್ಥರೂ ಘನವುಳ್ಳ ಕುಲೀನರೂ ಇದ್ದಾರಲ್ಲ? ಇಂಥವರಾದ ನಮ್ಮನ್ನು ಕರ್ತನು ಇಷ್ಟು ಕಠಿಣವಾಗಿ ನಡಿಸುವನೋ? ಆಗದು! ಎಲ್ಲಾ ಮನುಷ್ಯರ ಪ್ರಕಾರ ನಮಗೂ ನಮ್ಮ ನಮ್ಮ ತಪ್ಪುಗಳು ಇದ್ದೇ ಇದೆ. ಆದರೆ ಈ ತಪ್ಪುಗಳ ದೆಶೆಯಿಂದ ನಾವು ನರಕಕ್ಕೆ ಗುರಿಯಾಗಿದ್ಧೇವೆಂದು ಹೇಳಿದರೆ, ಅದು ನಿಸ್ಸಾರವಾದಂಥಾ ಮಿತಿ ಮಿಾರಿದಂಥಾ ಜ್ಞಾನಕೃತ್ಯದ ಮಾತಾಗಿದೆ" ಅನ್ನುತ್ತಾರೆ. ಆದರೆ ದೇವರ ವಾಕ್ಯಕ್ಕೆ ವಿಧೇಯರಾಗಲೊಲ್ಲದವರೆಲ್ಲರು ತಮ್ಮ ತಮ್ಮ ಬುದ್ಧಿಯ ಪ್ರಕಾರ ಬೇರೆ ಬೇರೆ ಪ್ರತಿವಾದ ನೆವನ ಭೇಷಜಗಳನ್ನು ಕಲ್ಪಿಸುತ್ತಾರೆ. ಅನೇಕರು ತಮ್ಮನ್ನು ಸಾಮಾನ್ಯವಾದ ಪಾಪಿಗಳ ಪಙ್ತಿಯಲ್ಲಿ ಶೇರಿಸಿ, ಇದನ್ನು ಅರಿಕೆ ಮಾಡುವದರಿಂದ ತಮ್ಮ ಭಕ್ತಿಯ ಆಧಿಕ್ಯವು ತೋರುತ್ತದೆಂದು ಅಂತರಂಗದಲ್ಲಿ ನೆನಸಿ, ನೀತಿಯುಳ್ಳ ದೇವರ ಪೂರ್ಣ ಸತ್ಯಕ್ಕೆ ಒಳಗಾಗಲಿಕ್ಕೆ ಎಷ್ಟು ಮಾತ್ರವು ಮನಸ್ಸಿಲ್ಲದವರಾಗಿ, ತಾವು ದಿಕ್ಕಿಲ್ಲದ ಬಡ ಪಾಪಿಗಳೆಂದು ತಿಳಿಯದೆ, ದೇವರು ಮೆಚ್ಚ ತಕ್ಕ ವಿಶೇಷವಾದ ಒಂದು ಪುಣ್ಯವು ಒಂದು ಸದ್ಗುಣವು ತಮಗುಂಟೆಂದು ಎಣಿಕೆ ಮಾಡಿ, ಹ್ಯಾಗಾದರೂ ಇಂಥಾ ಅಂಥಾ ಜನರಷ್ಟು ದುಷ್ಟರಾಗಿ ನಾವು ನಡಕೊಳ್ಳಲಿಲ್ಲ; ಭಕ್ತಿಯಲ್ಲಿ ತಕ್ಕಷ್ಟು ವೃದ್ಧಿ ಹೊಂದದೆ ಇದ್ದೆವಾದರೆ, ನಮ್ಮ ಕುಲ ವ್ಯಾಪಾರ ಉದ್ಯೋಗ ವೃತ್ತಿಗಳು ನಮಗೆ ಅಡ್ಡಿ ಮಾಡಿದದರಿಂದ ನಮಗೆ ಮೋಸವಾಯಿತು ಎಂದು ಹೇಳಿ ಕೊಳ್ಳುತ್ತಾರೆ. ಈ ರೀತಿಯಿಂದ ಮನುಷ್ಯನು ನೆವನಗಳನ್ನು ಕಟ್ಟಿಕೊಂಡು, ದೇವರ ಬಳಿಯಲ್ಲಿ ಮುಖದಾಕ್ಷಿಣ್ಯ ಉಂಟೆಂದು ನೆನಸುತ್ತಾನೆ. ಆದರೆ ಹೀಗಾಗಿ ಇರುವದು ಇಲ್ಲ. ತನ್ನ ಪಾಪವನ್ನು, ತನ್ನ ಮೋಹದ ಪಾಪವನ್ನು ಅರಿಕೆ ಮಾಡಿ, ಭೇಷಜ ನೆವನಾದಿಗಳನ್ನು ಬಿಟ್ಟು, ದೇವರ ಸಾಕ್ಷಿಗೆ ಸತ್ಯವೆಂದು ತನ್ನನ್ನು ತಗ್ಗಿಸಿಕೊಂಡು, ಲೋಕದ ಪಾಪಕ್ಕಾಗಿ ಒಂದೇ ವಿಮೋಚನೆ ಬಲಿಯಾಗಿ ತನ್ನನ್ನು ಅರ್ಪಿಸಿದ ಕ್ರಿಸ್ತನನ್ನು ಆಶ್ರೈಸಿ ಕೊಳ್ಳಲಿಕ್ಕೆ ಮನಸ್ಸಿಲ್ಲದ ಮನುಷ್ಯನು ಎಂಥವನಾಗಿದ್ದರೂ ನಿರಂತರ

ವಾದ ನರಕಾಗ್ನಿ ಎಂಬ ಫಲವನ್ನು ಕಪಟಿಗಳ ಸಹಿತವಾಗಿ ಹೊಂದ ತಕ್ಕ ಸುಳ್ಳುಗಾರನಾಗಿದ್ದಾನೆ. ಯಾಕಂದರೆ ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ.

ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲ. ಎಲ್ಲಾನ್ನು ಅವಿಧೇಯತ್ವದ ಮೂಲವಾಗಿ ಪಾಪಬಂಧನದಲ್ಲಿ, ಪಾಪದ ಮೂಲವಾಗಿ ಮರಣಬಂಧನದಲ್ಲಿ ಇಟ್ಟ ಪ್ರಕಾರ ಎಲ್ಲಾನ್ನು ಕ್ರಿಸ್ತನಿಂದ ಉಂಟಾದ ರಕ್ಷಣೆಯ ಲೆಖ್ಖದಲ್ಲಿಯೂ ಏಕ ಮಧ್ಯವರ್ತಿಯಿಂದ ಸಿದ್ಧವಾದ ಪ್ರೀತಿ ಕರುಣೆಗಳ ನೇಮದಲ್ಲಿಯೂ ಶೇರಿಸಿದ್ದಾನೆ. ಈ ವಿಷಯದಲ್ಲಿಯೂ ದೇವರು ಮನುಷ್ಯರ ಮುಖದಾಕ್ಷಿಣ್ಯ ನೋಡುವದಿಲ್ಲ. ಅತಿಥಿಗಳನ್ನು ಔತಣಕ್ಕೆ ಕರಿಯುವದಕ್ಕೆ ದೊಡ್ಡ ಅರಸನು ಕಳುಹಿಸಿದ ಆಳುಗಳಿಗೆ ಪಟ್ಟಣಿಗರು ಕಿವಿಗೊಡದೆ, ಕರೆದವರಲ್ಲಿ ಒಬ್ಬನು ಭೂಮಿಯ ನೆವನವನ್ನು, ಒಬ್ಬನು ಎತ್ತುಗಳ ನೆವನವನ್ನು, ಒಬ್ಬನು ಮದುವೆಯ ನೆವನವನ್ನು ಹೇಳಿದಾಗ, ಬೀದಿಗಳಿಗೂ ಓಣೀ ಬೇಲಿಗಳಿಗೂ ಹೋಗಿ, ಕುಂಟ, ಕುರುಡ, ಪೋಕ, ತಿರಕ, ದೇಶಾಟಕ ಮುಂತಾದವರನ್ನು, ದಿಕ್ಕಿಲ್ಲದೆ ಕಂಡವರನ್ನೆಲ್ಲಾ ಕರ ಕೊಂಡು ಬರಲಪ್ಪಣೆ ಆಯಿತು. ಔತಣಕ್ಕೆ ಕರದ ದಯೆಯನ್ನು ನಾನಾ ನೆವನಗಳಿಂದ ಅಸಡ್ಡೆ ಮಾಡಿದ ಮಾನ್ಯರಾದ ಗೃಹಸ್ಥರಿಗಿಂತ ಆ ಬಡವರು ಅರಸನಿಗೆ ಅಧಿಕ ಶ್ಲಾಘ್ಯರಾಗಿದ್ದರಲ್ಲ? ನಿತ್ಯ ಸಮಾಧಾನಾಲೋಚನೆಗಳಾದ ದೇವರ ಆಲೋಚನೆಗಳು ಇಂಥಾವೆ. ಆತನು ಮುಖದಾಕ್ಷಿಣ್ಯ ನೋಡುವವನಲ್ಲ. ಬಡತನ ಮುಂತಾದ ಅವಸ್ಥೆಯಿಂದ ಅರೆಜೀವವಾಗಿರುವ ಗ್ರೀನ್‌ಲಂದ ದೇಶದ ಕಾಡ ಜನರವನು ಮಾನಸಾಂತರ ಪಟ್ಟರೆ, ಬಿನ್ನಣದ ಮನೆಯಲ್ಲಿ ವಾಸಿಸುವ ವಿಲಾಯತಿಯವನಾದ ಭಕ್ತನಷ್ಟು ಪ್ರಿಯನಾಗುತ್ತಾನೆ. 1. ಸರ್ವ ಜನರಲ್ಲಿ ಪ್ರೀತಿಯಾಗಿದ್ದಾನೆ. 2. ಸರ್ವ ಜನರಿಗೆ ಓಲು ತಡೆದು, 3. ಬಡ ಜನರನ್ನೆಲ್ಲಾ ಕರಕೊಳ್ಳುತ್ತಾನೆ. 4. ಸರ್ವಲೋಕಸಮಾಧಾನಕರ್ತನು.

ಎಲ್ಲರಿಗಾಗಿ ಕ್ರಿಸ್ತನು ಸತ್ತನು. ಸರ್ವ ಲೋಕ ಪಾಪಗಳನ್ನೆಲ್ಲಾ ಕ್ರಿಸ್ತನು ಹೊತ್ತುಕೊಂಡನು. ಯೆಹೂದ್ಯರಿಗೂ ಪರಜನರಿಗೂ, ಹಣವಂತರಿಗೂ ಬಡವರಿಗೂ, ಊಚರಿಗೂ ನೀಚರಿಗೂ ವ್ಯತ್ಯಾಸವಿಲ್ಲ. ವಿಮೋಚನೆಯ ರಕ್ತವು ಎಲ್ಲರಿಗಾಗಿ ಹೊಯಿದು ಹೋಯಿತು. ಎಲ್ಲರಿಗೆ ತನ್ನ ರಕ್ತದಿಂದಣ ಪಾಪ ಪರಿಹಾರದ ಅಮೂಲ್ಯವಾದ ಮಹಾ ಸುವಾರ್ತೆಯನ್ನು ಆತನು ಸಾರಿಸಿ, ತೋರಿಸುತ್ತಾನೆ. ಸರ್ವಲೋಕಕ್ಕೆ ಹೋಗಿ, ಸರ್ವ ನಿರ್ಮಾಣಕ್ಕೆ ಸುವಾರ್ತೆಯನ್ನು ಸಾರಿರಿ, ಅಂದನು. ವಿಶ್ವಾಸದ ಆಶೆಯಿಂದ ಅಂಗೀಕರಿಸಿ, ಹೃದಯದಲ್ಲಿ ಇಟ್ಟು, ನಡತೆಯಲ್ಲಿ ಕೈಕೊಂಡು, ನಂಬಿ ಸ್ನಾನ ತಕ್ಕೊಳ್ಳುವವನು ರಕ್ಷಣೆಯ ಹೊಂದುವನು. ಆದರೆ ನಂಬದೆ ಹೋಗುವವನ್ಯಾವನಾದರೂ ಆಜ್ಞೆಯನ್ನು ಹೊಂದುವನು. ಆತನ ಕೃಪೆಯ ಲೆಖ್ಖದಲ್ಲಿಯೂ ಆತನ ಸುವಾರ್ತೆಯ ನ್ಯಾಯದಲ್ಲಿಯೂ ಮನುಷ್ಯ ಮನುಷ್ಯರಿಗೂ ಕಾಲ ಕಾಲಕ್ಕೂ ಹೆಚ್ಚು ಕಡಿಮೆ ಇಲ್ಲ. ೧೮೦೦ ವರುಷದಿಂದ ಸುವಾರ್ತೆಯು ಸಾರಿಸಿ ಕೊಳ್ಳುತ್ತದೆ. ಈ ಕಾಲದಲ್ಲೆಲ್ಲಾ ಕೋಟ್ಯಾನುಕೋಟಿ ಮನುಷ್ಯರು ಕೇಳಿ, ನಂಬಿ, ರಕ್ಷಣೆಯನ್ನು ಹೊಂದಿದರು. ಸುವಾರ್ತೆಯು ಪೂರ್ವ ಕಾಲದಲ್ಲಿ ಇದ್ದ ಹಾಗೆಯೇ ಈಗಲೂ ಇದೆ. ಕ್ರಿಸ್ತನ ಕಾಲದಲ್ಲಿ ಲೋಕಕ್ಕೆಲ್ಲಾ ಸಾರಿಸಿ ಕೊಂಡ ಕೃ

ಪೆಯ ಸುವಾರ್ತೆ ಈಗಲು ನಿನಗೂ ನಮ್ಮೆಲ್ಲರಿಗೂ ಸಾರಲಾಗುತ್ತದೆ. ಅಪೊಸ್ತಲರ ಕಾಲದಲ್ಲಿದ್ದ ಪ್ರಥಮ ಕ್ರೈಸ್ತರ ಪ್ರಕಾರವೇ ಈ ಕಾಲದಲ್ಲಿ ಹುಟ್ಟಿದವರಾದ ನಾವು ಕ್ರಿಸ್ತನ ವಿಶ್ವಾಸದಿಂದ ರಕ್ಷಣೆಯ ಹೊಂದುವದಕ್ಕೆ ಏನೂ ಅಡ್ಡಿ ಇಲ್ಲ. ಎಲ್ಲರನ್ನು ನಿರ್ಮಿಸಿದ ದೇವರು ಎಲ್ಲರನ್ನು ರಕ್ಷಿಸಿದ್ದಾನೆ. ನಿರಂತರನಾದ ದೇವರ ಕೃಪೆಯು ಎಲ್ಲಾ ಜಾತಿಗಳಿಗೂ ಎಲ್ಲಾ ಯುಗಗಳಿಗೂ ಸಾಮಾನ್ಯವಾದ ನಿರಂತರ ಕೃಪೆಯಾಗಿದೆ. ಯೇಸು ಕ್ರಿಸ್ತನು ನಿನ್ನೆಯೂ ಇಂದೂ ಸದಾಕಾಲವೂ ಒಂದೇ ಪ್ರಕಾರವಾಗಿದ್ದಾನೆ.

ಎಲ್ಲಾ ಮನುಷ್ಯರಿಗೆ ದೇವರ ರಾಜ್ಯದ ವಾಕ್ಯವನ್ನು ಸಾರ ಬೇಕೆಂಬ ಕಟ್ಟಳೆ ಅಪೊಸ್ತಲರಿಗೆ ಮೊದಲು ತುಂಬ ಮರ್ಮವಾಗಿತ್ತು. ದೇವರು ಆದು ಕೊಂಡ ಜನಾಂಗವಾದ ಯೆಹೂದ್ಯರಿಗೆ ಮಾತ್ರ ಅದನ್ನು ಸಾರ ಬೇಕೆಂದೂ, ಅವರು ಅದನ್ನು ಸಂತೋಷವಾಗಿ ನಂಬುವರೆಂದೂ ನೆನಸಿ, ಆರಂಭದಲ್ಲಿ ಪರಜನರಿಗೆ ಪ್ರಸಂಗ ಮಾಡಲಿಲ್ಲ. ಆದರೆ ಪೇತ್ರನಿಗೆ ಪರಲೋಕದಿಂದ ಕಾಣ ಬಂದ ದಿವ್ಯ ಕನಸಿನ ಮೂಲವಾಗಿ ದೇವರು ಪರಜನರಿಗೂ ಜೀವಾತ್ಮಾರ್ಥವಾದ ಮಾನಸಾಂತರವನ್ನು ಕೊಟ್ಟನೆಂಬುವದು ಪ್ರಕಟವಾಯಿತು. ಇದು ಶತಾಧಿಪತಿಯಾದ ಕೊರ್ನೇಲಿಯನ ಮಾನಸಾಂತರ ಸ್ನಾನಗಳಿಂದ ತೊಡಗಿತು. (ಅಪೊ. ಕ್ರಿ. ೧೦.) ಆಗ ಪೇತ್ರನು ಹೇಳಿದ್ದೇನಂದರೆ: "ದೇವರು ಮುಖದಾಕ್ಷಿಣ್ಯ ನೋಡುವವನಲ್ಲವೆಂದೂ, ಸಕಲ ಜನಾಂಗಗಳಲ್ಲಿ ಅವನಿಗೆ ಭಯ ಪಟ್ಟು ನೀತಿಯನ್ನು ನಡಿಸುವವನು ಅವನಿಗೆ ಸಮರ್ಪಕನಾಗಿದ್ದಾನೆಂದೂ, ನಿಶ್ಚಯವಾಗಿ ಗ್ರಹಿಸುತ್ತೇನೆ." ಕ್ರಿಸ್ತನು ಕ್ರೂಜೆಯಲ್ಲಿ ಸತ್ತದರಿಂದ ಯೆಹೂದ್ಯರಿಗೂ ಪರಜನರಿಗೂ ನಡುವೆಯಲ್ಲಿದ್ದ ಅಡ್ಡ ಗೋಡೆ ಕೆಡವಿ ಹೋಯಿತು. ಅಂದಿನಿಂದ ದೇವರ ರಾಜ್ಯದ ಪ್ರಸಂಗವು ಸರ್ವ ಲೋಕದಲ್ಲಿಯೂ ವ್ಯತ್ಯಾಸವಿಲ್ಲದೆ ನಡಿಯಿತು. ದೇವರು ಎಲ್ಲರನ್ನು ಪ್ರೀತಿ ಮಾಡಿ, ಕ್ರಿಸ್ತನ ಮುಖಾಂತರ ತನಗೆ ಸ್ವಕೀಯರಾಗಿ, ನಿತ್ಯ ನೀತಿಯಿಂದಲೂ ನಿರಪರಾಧತ್ವದಿಂದಲೂ ಸೌಖ್ಯದಿಂದಲೂ ತನ್ನನ್ನು ಸೇವಿಸುವ ಹಾಗೆ, ಎಲ್ಲರನ್ನು ಉಂಟು ಮಾಡಿದನೆಂಬ ಸರ್ವ ಲೋಕ ವಿಮೋಚನೆಯ ಸುವಾರ್ತೆಯ ಮಹಾ ವಾಕ್ಯವಾಗಿದೆ. ವಿಮೋಚನೆಯ ಮಹಾ ವಾಕ್ಯವನ್ನು ಎಲ್ಲಾ ಮನುಷ್ಯರಿಗೆ ಸಾರಿ, ನಿಮ್ಮನ್ನು ಸಹಾ ರಕ್ಷಕನು ಪ್ರೀತಿ ಮಾಡುತ್ತಾನೆ ಎಂದು ಸಾಕ್ಷಿ ಕೊಡ ಬಹುದು. ಈ ಹೊತ್ತು ಸಹ ನನ್ನ ಮಾತು ಕೇಳುವ ಒಬ್ಬೊಬ್ಬನಿಗೆ ನಾನು ಆಸಕ್ತಿಯಿಂದ ತಿರಿಗಿ ಹೇಳುವದೇನಂದರೆ: ಇಗೋ, ನಿನ್ನನ್ನು ಸಹ, ನೀನು ಕಡು ಕೆಟ್ಟ ಜಾತಿಯಲ್ಲಿ ಹುಟ್ಟಿದವನಾಗಿದ್ದರೂ, ನಿನ್ನನ್ನು ಸಹ, ನೀನು ಮನುಷ್ಯರಲ್ಲಿ ಪೂರ್ಣವಾಗಿ ಗೊತ್ತಿಲ್ಲದವನಾಗಿದ್ದರೂ, ನಿನ್ನನ್ನು ಸಹ ದೇವರು ಮರತು ಬಿಡಲಿಲ್ಲ. ನಿನ್ನನ್ನು ಸಹ ನೆನಸಿ ಕೊಂಡು, ನಿನ್ನ ಅಪರಾಧವನ್ನು ಸಹ ನಿತ್ಯಾತ್ಮದ ಮುಖಾಂತರ ದೇವರಿಗೆ ತನ್ನನ್ನು ಬಲಿಯಾಗಿ ಅರ್ಪಿಸಿದ ಯೇಸು ಕ್ರಿಸ್ತನ ಬಲಿಯ ಲೆಖ್ಖದಲ್ಲಿ ಆತನು ಶೇರಿಸಿ ಇದ್ದಾನೆ. ನೀನು ಸಹ ಅವನು ರಕ್ಷಿಸಿದ ಪ್ರಾಣಿಗಳಲ್ಲಿ ಒಂದಾಗಿದ್ಧೀ.

ದೇವರುಂಟು ಮಾಡಿದ
ಪ್ರಾಣ ಎಲ್ಲಾ ಕಾಯುತ್ತಾನೆ.

ಎಲ್ಲರಲ್ಲಿ ಸರ್ವಥಾ
ನಿತ್ಯ ಕೃಪೆಯಾಗಿದ್ಧಾನೆ.

ಹೌದು, ನಿನ್ನನ್ನು ಸಹ ಅವನು ಉಂಟು ಮಾಡಿ, ಕೊಂಡು ಕೊಂಡು, ರಕ್ಷಿಸಿ ಇದ್ಧಾನೆ. ನಿನ್ನ ಪಾಪಗಳಿಗೆ ವಿಮೋಚನೆ ಉಂಟು. ನೀನು ಪಟ್ಟೆ ಉಟ್ಟವನಾಗಿದ್ದರೂ ಕಂಬಳಿ ಹೊದ್ದವನಾಗಿದ್ದರೂ, ಸೂಕ್ಷ್ಮ ಪಾಪಿಯಾಗಿದ್ದರೂ ಸ್ಥೂಲ ಪಾಪಿಯಾಗಿದ್ದರೂ, ನಾಗರೀಕನಾಗಿದ್ದರೂ ನಾಡಿನವನಾಗಿದ್ದರೂ, ಕಲಿತವನಾಗಿದ್ದರೂ ಕಲಿಯದವನಾಗಿದ್ದರೂ, ವಯಸ್ಕನಾಗಿದ್ದರೂ ವೃದ್ಧನಾಗಿದ್ದರೂ, ಮೇಲ್ಜಾತಿಯವನಾಗಿದ್ದರೂ ಕೀಳ ಜಾತಿಯವನಾಗಿದ್ದರೂ, ಆತನ ಮುಂದೆ ಏನೂ ಹೆಚ್ಚು ಕಡಿಮೆ ಇಲ್ಲ. ಆತನು ಮುಖದಾಕ್ಷಿಣ್ಯ ಮಾಡುವದು ಇಲ್ಲ. ಹೌದು, ನೀನು ನಿನ್ನ ಅಪರಾಧಕ್ಕೆ ಚಿಂತಾಕ್ರಾಂತನಾಗಿದ್ದು, ಸರ್ವ ಲೋಕದಲ್ಲಿಯೂ ನಿನ್ನಷ್ಟು ದೊಡ್ಡ ಪಾಪಿ ಇಲ್ಲವೆಂದು ನೆನಸಿದರೂ, ಇಗೋ, ನಿನಗೂ ಆತನ ಸಾಮಾನ್ಯವಾದ ಕರುಣೆಯಿಂದ ಗತಿಯದೆ; ಯಾಕಂದರೆ ಕ್ರಿಸ್ತನು ಎಲ್ಲರಿಗಾಗಿ ಸತ್ತು ಹೋದದರಿಂದ, ಆತನ ಮುಂದೆ ಮುಖದಾಕ್ಷಿಣ್ಯವಿಲ್ಲ.

II. ಅಯ್ಯೋ, ಈ ತಾತ್ಪರ್ಯವನ್ನು ಎಷ್ಟೋ ಸಾರಿ ಪ್ರಸಂಗಿಸಿದೆನು! ಅದನ್ನು ನಂಬುವವರೆಷ್ಟರು? ಜನರು ನಂಬಿದರೆ, ಕ್ರಿಸ್ತನನ್ನು ಅವರಿಗೆ ಮರೆ ಮಾಡುವಂಥಾ, ತಾವು ಕೆಟ್ಟವೆಂಬ ದುಃಖದಿಂದ ಒಂದು ಘಳಿಗೆಯಾದರೂ ಅವರನ್ನು ಸೌಖ್ಯವಾಗಿರಲೀಸದಂಥಾ ಮೋಶೆಯ ಮುಸುಕು ಅವರ ಮುಖದ ಮುಂದೆ ಜೋತು ಬೀಳುತ್ತಿದ್ದಿಲ್ಲವೋ? ಅವರು ನಂಬಿದರೆ, ಅವರನ್ನು ಸಹ ಪ್ರೀತಿ ಮಾಡಿದ ದೇವರ ಪ್ರೀತಿಯ ಈ ಒಂದೇ ಮಾತು ಅವರ ಸತ್ತ ಹೃದಯಗಳನ್ನು ಮರಣದಿಂದ ಎಳದು, ಅವರನ್ನು ಜೀವಶಿಲೆಗಳಾಗಿ ದೇವರ ಆಲಯದಲ್ಲಿ ಶೇರಿಸುತ್ತಿದ್ದಿಲ್ಲವೋ? ಮನುಷ್ಯರು ಯಾಕೆ ನಂಬುವದಿಲ್ಲವಕಟಾ! ಒಬ್ಬನು ನಂಬಲೊಲ್ಲದೆ ಇದ್ಧಾನೆ; ಯಾಕಂದರೆ ಪಾಪವನ್ನು ಪ್ರೀತಿ ಮಾಡಿ, ಯೇಸು ಕ್ರಿಸ್ತನ ವಿಮೋಚನೆ ಪಾಪಕ್ಕೆಲ್ಲಾ ಮರಣಕರವಾಗಿರುವದರಿಂದ, ತಾನು ನಂಬಿದರೆ ತನ್ನ ಪಾಪವು ಸಾಯ ಬೇಕೆಂದು ಚನ್ನಾಗಿ ತಿಳ ಕೊಳ್ಳುತ್ತಾನೆ. ಒಬ್ಬನು, ನಾನು ನಂಬಲಾರೆನೆಂದು ಹೇಳುತ್ತಾನೆ. ಯಾಕೆ ಸುವಾರ್ತೆಯನ್ನು ನಂಬಲಾರಿ? ನಾನು ಬಹಳ ಕೆಟ್ಟವನಾಗಿದ್ಧೇನೆ. ಅದು ನನ್ನ ಗೊಡವೆಗೆ ಬರುವದು ಇಲ್ಲ. ನಾನು ಮೊದಲು ಬೇರೆ ಆಗ ಬೇಕು. ಆದಾಗ್ಯೂ ಯಾರೂ ಎಂದಿಗೂ ತನ್ನಿಂದ ತಾನೆ ಬೇರೆ ಆಗುವದಿಲ್ಲ. ಹಾಗಾದರೆ, ನೀನು ಕೆಟ್ಟವನಾಗಿರುವದರಿಂದ, ದೇವರು ಲೋಕವನ್ನು ಪ್ರೀತಿ ಮಾಡಿದ್ಧಾನೆಂದು ಹೇಳಿದ ರಕ್ಷಕನನ್ನು ಸುಳ್ಳುಗಾರನಾಗಿ ಮಾಡಿ, ನಿತ್ಯ ಸುವಾರ್ತೆಯನ್ನು ಭಯಭ್ರಷ್ಟವಾದ ನಿನ್ನ ಹೃದಯದ ಸುಳ್ಳಾಲೋಚನೆಗಳಿಂದ ಅಲ್ಲಗಳೆಯುತ್ತೀಯಾ? ಏನು ಮಾಡುತ್ತೀ ಎಂದು ನೋಡಿಕೋ! ಕ್ರಿಸ್ತನು ನಮ್ಮ ಪಾಪಗಳಿಗಾಗಿಯೂ, ಸರ್ವ ಲೋಕದ ಪಾಪಗಳಿಗಾಗಿಯೂ ಕೃಪಾಸನವಾಗಿದ್ಧಾನೆಂದು, ಬರಹವು ಹೇಳುವ ಮಾತು ಸುಳ್ಳೋ? ಹೇಳು! ಈ ಮಾತಿನ ಅಭಿಪ್ರಾಯ ಸ್ಪಷ್ಟವಾಗಿ ತೋರುವದಿಲ್ಲವೋ? ಹಾಗಾದರೆ, ಅದನ್ನು ನಂಬಿ ಹೃದಯಾಂತರ್ಯಕ್ಕೆ ಶೇರಿಸು! ಅದನ್ನು ನಂಬುವಂದಿನಿಂದ ಸೈತಾನನನ್ನು ಜೈಸ ಬಲ್ಲಿ. ನಿನ್ನ ಸ್ವಂತ

ಕರ್ಮ, ಇಚ್ಛೆ, ಯತ್ನ, ಭಯ, ಚಿಂತಾದಿಗಳಲ್ಲಿ ಲೋಕ ರಕ್ಷಕನಲ್ಲಿಯೂ ದೇವರ ಉಚಿತ ಕೃಪೆಯಲ್ಲಿಯೂ ಇರುವ ವಿಶ್ವಾಸವೇ ಲೋಕವನ್ನಲ್ಲದೆ, ನರಕಬಲಗಳನ್ನೆಲ್ಲ ಸಹ ಅಧಿಕಾಧಿಕವಾಗಿ ಜೈಸುವ ಜಯವಾಗಿದೆ.

ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲ. ಅವನು ಒಬ್ಬನನ್ನೂ ಬಿಡದೆ ಎಲ್ಲರನ್ನು ರಕ್ಷಣೆಯ ಲೆಖ್ಖದಲ್ಲಿ ಶೇರಿಸಿದ ಹಾಗೆಯೇ, ನಂಬದೆ ಇರುವವರೆಲ್ಲರನ್ನು ಆಜ್ಞಾನಿರ್ಣಯಕ್ಕೆ ಶೇರಿಸಿದ್ಧಾನೆ. ಈ ಪರಿಯಲ್ಲಿಯೂ ಮನುಷ್ಯರಲ್ಲಿ ಹೆಚ್ಚು ಕಡಿಮೆ ಇಲ್ಲ. ಹಣವಂತ ಬಡವರಿಗೂ, ಊಚ ನೀಚರಿಗೂ, ಕಲಿತ ಕಲಿಯದವರಿಗೂ, ನಾಗರೀಕ ನಾಡಿನವರಿಗೂ, ಪರ ಜನರಿಗೂ, ಯೆಹೂದ್ಯರಿಗೂ ಅಥವಾ ಕ್ರೈಸ್ತರಿಗೂ ಹೆಚ್ಚು ಕಡಿಮೆ ಇಲ್ಲ. ಸುವಾರ್ತೆಯ ಪ್ರಸಂಗವನ್ನು ಕೇಳಲು ನಂಬದೆ, ಕ್ರಿಸ್ತನನ್ನು ತನ್ನ ನೀತಿ ಎಂದು ಹೊಂದದೆ, ಅವನಿಗೆ ಒಳಗಾಗದೆ, ಅವನ ರಕ್ತ ಆತ್ಮಗಳ ಬಲದಿಂದ ತನ್ನ ಹೃದಯವನ್ನು ಶುದ್ಧವಾಗಲೀಸದೆ ಇರುವವನು ಆಜ್ಞಾನಿರ್ಣಯ ಪಡುವನು. ಎಲ್ಲಾ ಮನುಷ್ಯರು ಅವನನ್ನು ಆಕಾಶದ ಪರ್ಯಂತರ ಎತ್ತಿದರೂ, ಪುಣ್ಯ ಪುರುಷನಾದ ಮುಕ್ತನೆಂದೂ, ಪರಮ ಮುಕ್ತನೆಂದೂ ಹೊಗಳಿದರೂ, ಆಜ್ಞಾನಿರ್ಣಯ ಪಡುವನು; ಯಾಕಂದರೆ ಈ ಪರಿಯಲ್ಲಿ ಹೆಚ್ಚು ಕಡಿಮೆ ಇಲ್ಲ. ಮೋಸಜನಕನು ಮನುಷ್ಯರ ಮನಸ್ಸುಗಳಲ್ಲಿ ಹುಟ್ಟಿಸುವ ಸಾವಿರಾರು ಮೋಸ ಭಾವನೆಗಳುಂಟು. ಒಬ್ಬನು ಈ ಬಿರುದು, ಒಬ್ಬನು ಆ ಬಿರುದು ತನಗೆ ಉಂಟೆಂದು, ದೇವರು ನಮಗೆ ನೇಮಕ ಮಾಡಿದ ರಕ್ಷಣೆಯ ನೇಮಕ್ಕೆ ಬೇರೆ ಜನರ ಹಾಗೆ ವಿಧೇಯನಾಗಲಿಕ್ಕೆ ತನಗೆ ಅವಸರವಿಲ್ಲವೆಂದು ಹೇಳಿ ಕೊಳ್ಳುತ್ತಾನೆ. ದೇವರ ಮಾರ್ಗಗಳನ್ನೂ ಕಟ್ಟಳೆಗಳನ್ನೂ ಶೋಧಿಸಿ, ತೀರ್ಪು ಮಾಡ ಬಲ್ಲರು. ಒಬ್ಬನು, ನನ್ನ ಕೈಲಾಗುವದನ್ನು ಮಾಡುತ್ತೇನೆ; ಮತ್ತು ತಪ್ಪು ಮಾಡಿದರೆ, ದೇವರು ನನ್ನನ್ನು ಕ್ಷಮಿಸ ಬೇಕೆಂದು ಹೇಳುತ್ತಾನೆ. ಒಬ್ಬನು, ಬುದ್ಧಿಯೇ ನನಗೆ ಪ್ರಮಾಣ, ಅದನ್ನು ಕೈಕೊಳ್ಳುತ್ತೇನೆ; ನನ್ನ ಬುದ್ಧಿಗೆ ಸರಿ ಬೀಳದಂಥಾದರ ಪ್ರಕಾರ ದೇವರು ನನಗೆ ವಿಚಾರ ಮಾಡ ಕೂಡದು ಎಂದು ಹೇಳುತ್ತಾನೆ. ಒಬ್ಬನು, ದೇವರಿಗೆ ಭಯ ಪಟ್ಟು ನೀತಿಯನ್ನು ನಡಿಸುವವನು ಯಾವನಾದರೂ ಅವನಿಗೆ ಸಮರ್ಪಕನಾಗಿದ್ಧಾನೆಂಬ ಮಾತನ್ನೇ ಹಿಡುಕೊಳ್ಳುತ್ತೇನೆ; ಬರಹದಲ್ಲಿರುವ ಉಳಿದ ಮಾತೆಲ್ಲಾ ಸಾರಾಂಶವಾದದ್ದಲ್ಲ, ನಮ್ಮ ಗೊಡವೆಗೆ ಬರುವಂಥಾದ್ದಲ್ಲವೆಂದು ಹೇಳುತ್ತಾನೆ. ಒಬ್ಬನು, ಮನುಷ್ಯಪ್ರೀತಿಯ ಕಟ್ಟಳೆಯನ್ನು ಮೋಕ್ಷ ಮಾರ್ಗವಾಗಿ ಹಿಡು ಕೊಳ್ಳುತ್ತೇನೆಂದು ಹೇಳುತ್ತಾನೆ. ಒಬ್ಬನು, ಜನರು ನಿಮಗೆ ಮಾಡ ಬೇಕೆಂದು ಅಪೇಕ್ಷಿಸುವದನ್ನು ಅವರಿಗೂ ಮಾಡಿರಿ ಎಂಬ ಮಾತನ್ನು ನಾನು ಆದು ಕೊಳ್ಳುತ್ತೇನೆಂದು ಹೇಳುತ್ತಾನೆ. ಈ ರೀತಿಯಾಗಿ ತಮಗೆ ಹಿತವಾದದ್ದನ್ನು ಬರಹದಿಂದ ತಕ್ಕೊಂಡು, ಉಳಿದದ್ದನ್ನು ಧಿಕ್ಕರಿಸುತ್ತಾರೆ. ತಾವು ಕೊಂಚಕ್ಕಾದರೂ ಒಪ್ಪಿದರೆ, ಮಹಾದೇವನಿಗೆ ಮಾನವೆಂದು ಕಾಣಬೇಕೆಂತ ಆದರೆ, ಅವರು ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಹೇಳುವದು ಸಹಾ ಸುಳ್ಳಕಟಾ! ಅವರು ಹೇಳುವ ಪ್ರಕಾರ ಮಾಡಿದರೆ, ಎಲ್ಲರು ಹ್ಯಾಗೂ ರಕ್ಷಕನ ಬಳಿಗೆ ಬರ ಬೇಕಾಗಿತ್ತು. ಪರಲೋಕದಲ್ಲಿ ಇರುವ ನನ್ನ ತಂದೆಯ ಚಿತ್ತವನ್ನು ಅನುಸರಿ

ಸುವವನು ನನ್ನ ಬೋಧನೆ ದೇವರಿಂದ ಬಂತೆಂದು ತಿಳು ಕೊಳ್ಳುವನು ಎಂದು ಕರ್ತನು ಹೇಳಿದ ಪ್ರಕಾರ, ಅವರು ತಾವು ಹೇಳುವ ವಾಕ್ಯಗಳನ್ನು ಅನುಸರಿಸುವವರಾದರೆ, ಅವಿಶ್ವಾಸದಲ್ಲಿಯೂ ಪ್ರಪಂಚದ ಬುದ್ಧಿಯಲ್ಲಿಯೂ ನೆಲೆಯಾಗಿರಲಾರದೆ, ಸತ್ಯದ ಮಾರ್ಗದಿಂದ ಸತ್ಯ ಜೀವಗಳ ಅರಸನ ಬಳಿಗೆ ಬಂದು, ಮಾನಸಾಂತರವಾಗುವರು. ಅವರ ಬಾಯಿಯಲ್ಲಿ ಇರುವ ಮೇಲೆ ಬರದ ವಚನಗಳು ಬಹುಶಾ ಪಾಪಿಗಳನ್ನು ತಗ್ಗಿಸಿ, ಬಡವರನ್ನು ಪರಲೋಕಕ್ಕೆ ಎತ್ತ ತಕ್ಕ ನಿತ್ಯ ಸುವಾರ್ತೆಯ ಸಾರಾಂಶಕ್ಕೆ ವಿರೋಧವಾದ ಅವಿಶ್ವಾಸದ ಸಾಕ್ಷಿಗಳಾಗಿವೆ. ಮಾನ ಮರ್ಯಾದಸ್ಥರಾದ ಒಳ್ಳೊಳ್ಳೇ ಜನರಾದ ಬೇರೆ ಕೆಲವರು ಉಂಟು. ಅವರು ಸುವಾರ್ತೆಯನ್ನು ತಿಳಿಯದೆ, ತಾವು ಉತ್ತಮರೆಂದು ಹೃದಯದಲ್ಲಿ ಭಾವಿಸದೆ ಇದ್ದರೂ, ದೇವರು ತಮಗಾಗಿ ಪ್ರತ್ಯೇಕವಾದ ಸೂಕ್ಷ್ಮ ಮೋಕ್ಷಮಾರ್ಗವನ್ನೂ ಕೊಂಚ ವಿರಳವಾದ ಹಾದಿಯನ್ನೂ ವಿಶೇಷವಾದ ಒಂದು ಪರಲೋಕವನ್ನೂ ಉಂಟು ಮಾಡಿದ್ದಾನೆಂದೂ, ಎಲ್ಲಾ ಪಾಪಿಗಳ ಮೇಲೆ ಬಂದ ಸಾಮಾನ್ಯವಾದ ತಿರಸ್ಕಾರದ ತೀರ್ಪಿಗೆ ತಮ್ಮಂಥವರಾದ ನಾಗರೀಕ ಮನೆತನದವರು ಗುರಿಯಾಗಿರುವದು ಇಲ್ಲವೆಂದು ನೆನಸುತ್ತಾರೆ. ಅದೆಂದಿಗೂ ಆಗದು. ಬಹು ಚಟವಟಿಕೆಯೂ ಅತಿ ವಿನಯ ಮರ್ಯಾದೆಯೂ ಉಳ್ಳ ಮನುಷ್ಯನು ಬಡ ಪಾಪಿಯಾಗಿ, ಕ್ರೂಜಿತನಾದ ಯೇಸುವಿನ ಆಶ್ರಯಕ್ಕೆ ಓಡಿ ಬಂದು, ತಾನು ಅಪರಾಧಿಗಳ ಪಙ್ತಿಯಲ್ಲಿ ಕೂಡ್ರ ತಕ್ಕವನೆಣಿಸಿ ಕೊಂಡು, ಆ ಕಳ್ಳನಲ್ಲಿ ಪ್ರಸಿದ್ಧವಾದ ಕೃಪೆಯ ಮೂಲಕವಾಗಿಯೇ ಮುಕ್ತನಾಗ ಅಪೇಕ್ಷಿಸದೆ ಇದ್ದರೆ, ಮೋಕ್ಷದಲ್ಲಿ ಅಲ್ಲ, ಕಳ್ಳರೂ ಕೊಲೆಗಾರರೂ ಬೀಳುವ ನರಕದಲ್ಲಿಯೇ ಶೇರ ಬೇಕು. ಯಾಕಂದರೆ ಸಾಧುವಿನಲ್ಲಿ ನೆಲೆಯಾಗಿರುವ ಅವಿಶ್ವಾಸಕ್ಕೂ ಮೂರ್ಖನಲ್ಲಿ ಇರುವ ಅವಿಶ್ವಾಸಕ್ಕೂ ಹೆಚ್ಚುಕಡಿಮೆ ಇಲ್ಲದದರಿಂದ, ವಿಶ್ವಾಸಿಸದವನು ಆಜ್ಞಾನಿರ್ಣಯವನ್ನು ಹೊಂದುವನೆಂಬ ಬರಹದ ಪ್ರಕಾರ, ಅವಿಶ್ವಾಸಿಗಳೆಲ್ಲರು ಒಂದೇ ತೀರ್ಪು ಹೊಂದುವರು.

ಈ ಮಾತು ಅನೇಕರ ಹೃದಯದಲ್ಲಿ ಹೋಗುವ ಬೆಣೆಯಾಗಿ, ಸತ್ಯಕ್ಕೆ ಬಾರದ ಹಾಗೆ ಅನೇಕರ ಆತ್ಮಗಳನ್ನು ತಡಿಸುವ ಸೈತಾನನ ಅಗಳತೆ ಆಳ್ವೇರಿಗಳನ್ನು ಒಡಿಯಲ್ಯಕಟ! ಅಯ್ಯೋ, ನೀನು ಆಯಾ ಉದ್ಯೋಗದಲ್ಲಿ ಇರುವದರಿಂದ, ನೀನು ಆಳಲ್ಲದೆ ಧೊರೆಯಾಗಿರುವದರಿಂದ, ನೀನು ಚಾಕರನಲ್ಲ. ಯಜಮಾನಿಯಾಗಿರುವದರಿಂದ, ನೀನು ನೆರೆ ಹೊರೆಯವರಿಗಿಂತ ಹೆಚ್ಚು ಹೊನ್ನು ಹಣ ಉಳ್ಳವನಾಗಿರುವದರಿಂದ, ಸತ್ಯ ಕ್ರಿಸ್ತನ ಭಕ್ತಿಯನ್ನು ಉದಾಸೀನ ಮಾಡಿ, ದೆವರ ರಾಜ್ಯದ ಕಾರ್ಯಕ್ಕೆ ತೀರ್ಪು ಮಾಡುವದಕ್ಕೆ ಅಧಿಕಾರಿಯಾಗಿದ್ಧೀ ಎಂದು ನೆನಸುತ್ತೀಯಾ? ದೇವರು ನಿನ್ನನ್ನು ಮೆಚ್ಚಿಸುವದಕ್ಕೆ ಬೇರೆ ಸುವಾರ್ತೆಯನ್ನು ಕಲ್ಪಿಸಿ, ಬೇರೆ ಕ್ರಿಸ್ತನನ್ನು ಕಳುಹಿಸುವನೆಂದು ನೆನಸುತ್ತೀಯಾ? ಹಾಗಲ್ಲ, ನೀನು ಲಕ್ಷ್ಯವಿಲ್ಲದೆ ದಾಟಿ ಹೋಗುವ ತಿರಕನಂತೆ ಕರುಣೆಯನ್ನು ಬೇಡ ತಕ್ಕ ಬಡ ಪ್ರಾಣಿಯಾಗಿದ್ಧೀ ಎಂಬುವದಲ್ಲದೆ, ಪರಿಶುದ್ಧರೆಲ್ಲರು ಸ್ವಭಾವದ ಪ್ರಕಾರ ದೇವರ ಮುಂದೆ ಪಾಪಿಗಳಿಗೆ ಸರಿಯಾಗಿದ್ದಾರೆ; ಯಾಕಂದರೆ ಪಾಪಿಗಳಾಗಿ ಹುಟ್ಟಿದವರೆಲ್ಲರು ತಮ್ಮಲ್ಲಿ ಅಶುದರೂ ಆಗದವರೂ ಆಗಿ ಇದ್ದಾರೆ. ದೇವರ ಮುಂದೆ ಕ್ರಿಸ್ತನಿಂದ ಉಂಟಾದ ನೀತಿ ಪರಿ

ಶುದ್ಧತ್ವಗಳ ಹೊರ್ತು ಏನೂ ಸಲ್ಲುವದು ಇಲ್ಲ. ಇದು ಗರ್ವಿಷ್ಠರಿಗೆ ಕಠಿಣವಾದ ಬೋಧನೆಯೇ ಸರಿ. ಈ ಗಾಯನವನ್ನು ಕೇಳಲಿಕ್ಕೆ ಆತ್ಮಸ್ತುತಿ ಪ್ರಿಯವಾದ ಅಹಂಕಾರಿಯಾದ ಪ್ರಪಂಚದವರ ಕಿವಿ ತೆರಿಯುವದಿಲ್ಲ. ದೇವರು ತನ್ನ ವಾಕ್ಯವನ್ನು ಅವರ ಆತ್ಮಸ್ತುತಿಯ ಭಾವನೆಗಳಿಗೂ, ಅವರ ಭಟರ ಹದನಾದ ನಯವಾದ ರಮ್ಯವಾದ ಮಾತುಗಳಿಗೂ, ಮನುಷ್ಯಭಾವವನ್ನು ಹೊಗಳುವ ಸುಳ್ಳು ಪ್ರವಾದಿಗಳ ಪ್ರಸಂಗಗಳಿಗೂ ಅನುಕೂಲ ಮಾಡಿದರೆ, ಪರಿಶುದ್ಧನಾದ ಮಹಾದೇವನು ಆಯಾ ಸಾಧು ಕುಲೀನ, ವಿದ್ವಾಂಸ, ಬುದ್ಧಿವಂತ, ಸ್ವನೀತಿವಂತ, ಕಪಟಸ್ಥ, ಕ್ಷುದ್ರಗಾರರಾದ ಮನುಷ್ಯರಿಗೆ ಕಟ್ಟಳೆ ಬಿಟ್ಟು ಬೇರೆ ಬೇರೆ ಅಪ್ಪಣೆ ಕೊಟ್ಟರೆ, ಅವರಿಗೆ ಆದೀತು. ಆದರೆ ದೇವರು ಎಂದಿಗೂ ಹೀಗೆ ಮಾಡಲಿಕ್ಕೆ ಇಲ್ಲ. ಕರ್ತನು ಈ ಸುವಾರ್ತೆಯನ್ನು ನಿಶ್ಚಂಚಲವಾದ ವಾಕ್ಯವಾಗಿ ನಮಗೆ ಕೊಟ್ಟು ಇದ್ದಾನೆ. ಇದರ ಪ್ರಕಾರ ನಮ್ಮನ್ನು ರಕ್ಷಿಸುವನು; ಇದರ ಪ್ರಕಾರ ನಮಗೆ ನ್ಯಾಯ ತೀರಿಸುವನು. ಅದನ್ನು ಇದ್ದ ಹಾಗೇ, ಏನು ಹೆಚ್ಚು ಏನು ಕುಂದು ಮಾಡದೆ, ತಕ್ಕೊಳ್ಳ ಬೇಕು. ಆದರೆ ಸುವಾರ್ತೆಯನ್ನು ಯಥಾರ್ಥವಾಗಿಯೂ ದೀನ ಭಾವವಾಗಿಯೂ ಮನಃಪೂರ್ವಕವಾಗಿಯೂ ತಕ್ಕೊಳ್ಳ ಬೇಕೆಂಬ ಈ ಕಟ್ಟಳೆ ಕನಸಿನ ಗಂಟಾದ ತಮ್ಮ ಪುಣ್ಯ ಬುದ್ಧಿಗಳಿಂದ ಮರುಳುಗೊಂಡ ಸಾವಿರಾರು ಜನರಿಗೆ ಆಗದೆ ಇರುವದರಿಂದ, ಅವರು ತಮ್ಮ ಪುಣ್ಯ ಬುದ್ಧಿಗಳ ಸಹಿತರಾಗಿ ನಾಶವಾಗುತ್ತಾರೆ. ಅಧಿಕ ವಿದ್ಯಾಶಾಲಿಗಳಾದಂಥ, ಅಧಿಕ ನಾಗರೀಕರಾದಂಥ ಕುಶಲಗತಿ ವಿದ್ಯ ಜ್ಞಾನಗಳಲ್ಲಿ ಅಗ್ರಗಣ್ಯರಾಗಿ ಸರ್ವ ಲೋಕದಲ್ಲಿಯೂ ಪ್ರಖ್ಯಾತಿಯಾಗಿದ್ದಂಥ, ಯಾವಾಗಲೂ ನೂತನವಾದದ್ದನ್ನು ಕೇಳಲೂ ಕಾಣಲೂ ಅಪೇಕ್ಷಿಸಿದಂಥ, ಬೆಳಕಿಗೆ ಹೋಗುವ ಮಾರ್ಗದಲ್ಲಿ ತಡಿಯದೆ ಮುಂದರಿಯುವವರು ಅನ್ನಿಸಿ ಕೊಂಡಂಥ ಅಥೇನೆಯವರು ಹಾಗೆ ಮಾಡಿದರಲ್ಲ? ಅಪೊಸ್ತಲನಾದ ಪೌಲನು ಅವರಿಗೆ ಸುವಾರ್ತೆಯನ್ನು ಪ್ರಸಂಗಿಸಿ, ಯೇಸುವಿನ ಪುನರುತ್ಥಾನಕ್ಕೂ ಆತನ ನ್ಯಾಯತೀರ್ವಿಕೆಗೂ ಸಾಕ್ಷಿ ಕೊಡಲು, ಅವರು ಮಹಾ ಜ್ಞಾನಿಗಳಾದ ತಾವು ಬೇರೆ ಜನರಂತೆ ಈ ನ್ಯಾಯತೀರ್ವಿಕೆಗೆ ಒಳಗಾಗ ತಕ್ಕವರಲ್ಲವೆಂದೆಣಿಸಿ, ಹಾಸ್ಯ ಮಾಡಿ, ಈ ಜ್ಞಾನಪೈತ್ಯನಾದ ಹರಟೆಯವನು ಬಾಯಾಡುವದು ಏನು? ಎಂದು ಹೇಳಿದರು. ಆದರೆ ನಾಗರೀಕರಾದ ಈ ಅಥೇನೆಯವರು ಸ್ಥೂಲ ಪಾಪಿಗಳು ಬೀಳುವ ನರಕದಲ್ಲಿಯೇ ಬೀಳುವರು. ದೇವರು ಅವರಿಗೆ ವಿಶೇಷವಾದ ಒಂದು ನರಕವನ್ನು ಸಿದ್ಧ ಮಾಡುವದಿಲ್ಲ.

ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲ. ಒಬ್ಬರು ಹೆಚ್ಚು ಬುದ್ಧಿ ಸದ್ಗುಣ ಚಮತ್ಕಾರ ಉಳ್ಳವರಾಗಿ ಹುಟ್ಟಿ, ಒಬ್ಬರಿಗಿಂತ ಉತ್ತಮರಾಗಿ ಇದ್ದಾರೆ. ಒಬ್ಬರು ಶಿಕ್ಷೆಯೂ ಸಾಧನವೂ ಇಲ್ಲದವರಾಗಿ, ತಾಳೆ ಮರದಂತೆ ಬೆಳಿಯುತ್ತಾರೆ. ಒಬ್ಬರು ತೋಟದ ಮರಗಳಂತೆ ಶಿಕ್ಷೆ ಸಾಧನಗಳನ್ನು ಪಡ ಕೊಳ್ಳುತ್ತಾರೆ. ಒಬ್ಬರಿಗಿಂತ ಹೆಚ್ಚು ಸಾರಿ ಸತ್ಯವನ್ನು ಕೇಳಲಿಕ್ಕೂ ಒಳ್ಳೇ ನಡತೆಯನ್ನು ನೋಡಲಿಕ್ಕೂ ಸಮಯವನ್ನು ಹೊಂದುತ್ತಾರೆ. ಹೀಗಾಗಿರುವದರಿಂದ, ಈ ವ್ಯತ್ಯಾಸಗಳು ದೇವರು ಮುಖದಾಕ್ಷಿಣ್ಯ ಮಾಡಿ, ಕಂಡವರನ್ನು ಒಲಿದು, ಕಂಡವರನ್ನು ಹಗೆ ಮಾಡುತ್ತಾನೆಂಬುವದಕ್ಕೆ ಪ್ರಾಮಾಣಿಕವಾಗೆವೆಂದು ಹೇ

ಳಲೋ? ಆಗದು. ಮೊದಲಾಗಿ ತಿಳಕೊಳ್ಳ ತಕ್ಕದ್ದೇನಂದರೆ: ಹೆಚ್ಚು ಹೊಂದಿದವನು ಕಡಿಮೆ ಹೊಂದಿದವನಿಗಿಂತ ಹೆಚ್ಚಾದ ಲೆಖ್ಖವನ್ನು ಕೊಡ ಬೇಕು. ಆದರೆ ದೇವರ ಸತ್ಯವಾದ ಸುವಾರ್ತೆಯನ್ನು ಕೇಳಿ ತಿಳು ಕೊಂಡವರೆಲ್ಲರು ಸರಿಯಾಗಿ ಅದನ್ನು ಕೈಕೊಳ್ಳುವ ಹಂಗಿನಲ್ಲಿ ಇದ್ಧಾರೆ. ಮತ್ತು ತಿಳ ಕೊಳ್ಳ ತಕ್ಕದ್ದೇನಂದರೆ: ಒಂದು ಕೃಪೆಯ ರಾಜ್ಯ ಉಂಟು; ಅದರ ಅರಸನು ಇಂಗಿತಜ್ಞನಾಗಿ, ಹೃದಯಾಂತರ್ಯವಾದ ಬುಡದ ನೆಲವನ್ನು ವಿಚಾರಿಸಿ, ನ್ಯಾಯ ತೀರಿಸುತ್ತಾನೆ. ಅದರ ರಾಜ್ಯನೀತಿ ಕ್ರಮವು ಸ್ವಭಾವದಿಂದ ಬಲವಂತರೂ ಜ್ಞಾನಿಗಳೂ ಕುಲೀನರೂ ಆದವರು ಇನ್ನೂ ಹೆಚ್ಚಾಗಿ ಬಲವಂತರೂ ಕುಲೀನರೂ ಆಗುವಂಥಾದ್ದಲ್ಲ. ಆ ರಾಜ್ಯದ ವಿಷಯವಾಗಿ ಅಪೊಸ್ತಲನು ಹೇಳುವದೇನಂದರೆ: ಸಹೋದರರೇ, ನಿಮ್ಮ ಕರಿಯುವಿಕೆಯನ್ನು ನೋಡಿರಿ; ಏನಂದರೆ, ಮಾಂಸ ಪ್ರಕಾರದ ಜ್ಞಾನಿಗಳು ಅನೇಕರು ಇಲ್ಲ; ಬಲವುಳ್ಳವರು ಅನೇಕರು ಇಲ್ಲ; ಕುಲೀನರು ಅನೇಕರು ಇಲ್ಲ; ಆದರೆ ಜ್ಞಾನಿಗಳನ್ನು ನಾಚಿಕೆ ಪಡಿಸುವ ಹಾಗೆ, ಲೋಕದ ಹುಚ್ಚಾದದ್ದನ್ನು ದೇವರು ಆದು ಕೊಂಡಿದ್ಧಾನೆ. ಮತ್ತು ಇರುವವುಗಳನ್ನು ಹೀನ ಮಾಡುವ ಹಾಗೆ, ಲೋಕದ ಕುಲಹೀನವಾದದ್ದನ್ನೂ ಅಸಡ್ಡೆಯಾದದ್ದನ್ನೂ ಇಲ್ಲದ್ದನ್ನೂ ದೇವರು ಆದು ಕೊಂಡು ಇದ್ಧಾನೆ. ನಿಶ್ಚಯ, ನಿಶ್ಚಯವಾಗಿ ದೇವರು ಮುಖದಾಕ್ಷಿಣ್ಯ ಮಾಡುವದು ಇಲ್ಲವಾದದರಿಂದ, ಅನಾದಿಯಿಂದ ವಿಶೇಷ ಜ್ಞಾನವೂ ಬಲವೂ ಉಳ್ಳವರ ಮುಖಾಂತರ, ತನ್ನ ರಾಜ್ಯವನ್ನು ಭೂಲೋಕದಲ್ಲಿ ವಿಸ್ತರಿಸದೆ, ಅನಾದಿಯಿಂದ ಕೀಳ ಬಲವಿಲ್ಲದ ಆಳುಗಳ ಮುಖಾಂತರವಾಗಿ ವಿಸ್ತರಿಸುತ್ತಾ ಬಂದನು. ಅಪೊಸ್ತಲರು ಯಾರಾಗಿದ್ದರು? ಆ ಕಾಲದ ವೈದಿಕರಲ್ಲಿಯೂ ಜ್ಞಾನಿಗಳಲ್ಲಿಯೂ ಶೇರದ ಬೆಸ್ತರೂ ಪಂಚಾಳರೂ ಆಗಿದ್ದರು. ಮಹಾದೇವನ ಕೈಯಲ್ಲಿ ಒಳ್ಳೇ ಸೇವೆ ಮಾಡಿದ ಪ್ರಿಯ ಭಕ್ತರಾದ ಅನೇಕರು ಯಾರಾಗಿದ್ದರು? ಸ್ವಭಾವದಿಂದ ಬಲವಿಲ್ಲದ, ಅತಿ ಬಲವಿಲ್ಲದ ಮನುಷ್ಯರೇ. ಆದರೆ ಮತ್ತೊಬ್ಬನು ಅಲ್ಲ, ಕರ್ತನೇ ದೇವರೆಂದು ಸರ್ವ ಲೋಕವು ತಿಳಿಯುವ ಹಾಗೆಯೂ, ಯಾವ ಮಾಂಸವಾದರೂ ಆತನ ಮುಂದೆ ಹೆಚ್ಚಳ ಪಡದ ಹಾಗೆಯೂ, ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲವೆಂಬುವದು ಸೃಷ್ಟಿಯಲ್ಲೆಲ್ಲಾ ಪ್ರಕಟವಾಗುವ ಹಾಗೆಯೂ, ಸ್ವಭಾವದಿಂದ ಸಿಕ್ಕದೆ ಹೋದದ್ದು ಕೃಪೆಯಿಂದ ಅವರಿಗೆ ಸಿಕ್ಕಿತು.

ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲವೆಂಬುವದು ಕಚ್ಚಾಗಿ ಕಡಿದು ಮೂಳೆಲುವುಗಳನ್ನು ಕತ್ತರಿಸುವ ವಾಕ್ಯವಕಟ! ಮನುಷ್ಯರು ಹೊಗಳಿ ಹೇಳುವಂಥಾದ್ದಲ್ಲ, ಮನುಷ್ಯರು ಪರೀಕ್ಷಿಸಿ ಪ್ರತಿಷ್ಠೆ ಮಾಡುವಂಥಾದ್ದಲ್ಲ. ನಾನಾ ನೆವನಗಳಿಂದಲೂ ನಾನಾ ಸರ್ಪಯುಕ್ತಿಗಳಿಂದಲೂ ತುಂಬಿದ ಸ್ವಂತ ಹೃದಯವು ಭಾವಿಸಿ ಕೊಳ್ಳುವಂಥಾದ್ದು ಸಲ್ಲುವದಿಲ್ಲ. ನೀನು ಕಪಟ ಬುದ್ಧಿಯಿಂದ ಪಾಪರೋಗಮಯವಾದ ಶರೀರಕ್ಕೆ ಹೊದ್ದಿಸುವ ಬಟ್ಟೆ ಸಲ್ಲುವದಿಲ್ಲ. ಯಾವ ವೇಷವಾದರೂ ದೇವರ ಉರಿಗಣ್ಣಿನ ಮುಂದೆ ಸಲ್ಲುವದಿಲ್ಲ. ದೇವರು ಅಂತರಾಂತರ್ಯವಾದದ್ದನ್ನು ನೋಡುತ್ತಾನೆ. ನಿನ್ನ ಅಂತರಾಂತರ್ಯವು ಎಂಥಾದ್ದೋ ಅಂಥವನಾಗಿಯೇ ನೀನು ಆತನ ಪರಿಶುದ್ಧ ಮುಖದ ಮುಂದೆ

ಕಾಣಿಸುತ್ತೀ. ಮನುಷ್ಯರಿಗಾಗಲಿ ದೇವರಿಗಾಗಲಿ, ತನಗೆ ತಾನೇ ಆಗಲಿ, ಕಪಟವನ್ನು ನಡಿಸುವ ಸೂಕ್ಷ್ಮ ಕಪಟ ಅಥವಾ ಸ್ಥೂಲ ಕಪಟ, ಅರೆಕಪಟ, ದೇವರು ಮುಖದಾಕ್ಷಿಣ್ಯ ಮಾಡುವದಿಲ್ಲವೆಂಬ ಭಯಂಕರವಾದ ವಾಕ್ಯವನ್ನು ಕೇಳುತ್ತಲೇ ಅವನ ಹೃದಯವು ಎಷ್ಟೋ ಕಂಪಿಸ ಬೇಕಾಗಿದೆ. ದೇವರ ರಾಜ್ಯವಾದ ಸಮಸ್ತ ಲೋಕದಲ್ಲಿ ಅಂತರಾಂತರ್ಯದ ನಿಜ ಭಾವವೂ, ಒಬ್ಬೊಬ್ಬನ ಯೋಗ್ಯತೆ ಎಂಬ ವಿಚಾರ ಕೂಡದ ಒಂದು ಪದ್ಧತಿಯೂ, ಪರಿಶುದ್ಧವಾದ ಒಂದು ನ್ಯಾಯವೂ ಉಂಟು. ವಂಚನೆಯಿಂದಲೂ ಕಪಟದಿಂದಲೂ ಮೋಸ ಹೋಗದೆ, ಮನುಷ್ಯನು ತನಗೂ ಮತ್ತೊಬ್ಬರಿಗೂ ಕಣ್ಣು ಕಟ್ಟುವ ಸ್ವದೋಷನಿವಾರಣೆಗಳೂ ಸುಳ್ಳು ಮಾತುಗಳೂ ಸರ್ಪಯುಕ್ತಿಗಳೂ ಮೊದಲಾದ ಮೊಬ್ಬುಗಳನ್ನೆಲ್ಲಾ ದಾಟಿ, ನೆಲವನ್ನೇ ಕಂಡು, ಕಂಡ ಪ್ರಕಾರವೇ ನ್ಯಾಯ ತೀರಿಸುವ ಒಂದು ಕಣ್ಣು ಉಂಟು. ಈ ನ್ಯಾಯವಿಚಾರದಲ್ಲಿ ಕೃಪಾನಿಧಿಗಳಾದ ದೇವರ ಮಕ್ಕಳೆಂದು, ಲೋಕದಲ್ಲಿ ಹೆಸರ್ಗೊಂಡ ಭಕ್ತರಾದ ಅನೇಕರನ್ನು ದೇವರು ನಿಷ್ಪ್ರಯೋಜಕ ಆಳುಗಳೆಂದು, ಅಥವಾ ಸುಳ್ಳುಗಾರರಾದ ಕಪಟಿಗಳೆಂದು, ಜೀವದ ಪುಸ್ತಕದಿಂದ ಅಳಿಸಿ, ತಳ್ಳಿ ಬಿಡುವನು. ಈ ಗತಿ ಭಯಂಕರವಾದದ್ದಲ್ಲವೋ? ಕರುಣೆ ಉಳ್ಳ ದೇವರಾದ ಕರ್ತನು ನಮ್ಮನ್ನು ಇದಕ್ಕೆ ತಪ್ಪಿಸಲಿ. ದೇವರೇ, ನನ್ನನ್ನು ಶೋಧಿಸಿ, ನನ್ನ ಹೃದಯವನ್ನು ತಿಳಿದು, ನನ್ನನ್ನು ಪರೀಕ್ಷಿಸಿ, ನನ್ನ ಭಾವನೆಗಳನ್ನು ತಿಳುಕೋ ಎಂದು, ಅವನನ್ನು ಪ್ರಾರ್ಥಿಸು ಅಕಟಾ. ನಿನ್ನ ಕಣ್ಣಿಗೆ ಮದ್ದು ಕೊಡ ಬೇಕೆಂದು ಅವನನ್ನು ಬೇಡಿಕೋ, ಪಾಪವನ್ನು ನಿನಗೆ ದೂರ ಮಾಡ ಬೇಕೆಂದು ಅವನನ್ನು ಬೇಡಿಕೋ; ಯಾಕಂದರೆ ಸತ್ಯದಲ್ಲಿ ನೆಲೆಯಾಗಿರದವನು ಅವನ ಮುಂದೆ ನಿಲ್ಲಲಾರನು.

ಇಹದಲ್ಲಿ ಪ್ರಪಂಚದುರಾಚಾರವನ್ನು ಮರೆ ಮಾಯಿಸುವ ನೆವನಗಳೂ ತರ್ಕವಾದಗಳೂ ಸಾಲದೆ ಹೋಗಲಿಕ್ಕಿಲ್ಲ. ಒಂದು ವೇಳೆ ಪ್ರಪಂಚಗತಿಯ ಮೇಲೆಯೂ ಬುದ್ಧಿ ಹುಟ್ಟುವದಕ್ಕೆ ಬೇಕಾದ ಸಾವಕಾಶವನ್ನು ಕೊಡದ ಉದ್ಯೋಗದ ಮೇಲೆಯೂ ತಪ್ಪು ಹೊರಿಸುತ್ತಾರೆ. ಒಂದು ವೇಳೆ ಹ್ಯಾಗಾದರೂ ನಂಬಲಾರೆವೆಂದು ಹೇಳಿ, ತಮ್ಮ ಅವಿಶ್ವಾಸದ ಮೇಲೆಯೇ ನೆವವಾಗಿ ತಪ್ಪು ಹೊರಿಸುತ್ತಾರೆ. ಒಬ್ಬರು ಲೋಕಪ್ರೀತಿ ಲೋಕಾನುಸರಣೆ ಮೊದಲಾದ ದೋಷಗಳನ್ನು ಅಲ್ಲಗಳೆಯ ಬೇಕೆಂದು, ಕ್ರಿಸ್ತನ ವಾಕ್ಯಕ್ಕೆ ಪೂರ್ಣಾನುಕೂಲವಾಗಿ ನಡಕೊಳ್ಳ ಬೇಕಾದರೆ, ಲೋಕದ ಹಾಸ್ಯಕ್ಕೆ ಗುರಿಯಾಗುವೆವು ಎಂದು ಹೇಳುತ್ತಾರೆ. ಒಬ್ಬರು ನ್ಯಾಯವನ್ನೂ ಸತ್ಯವನ್ನೂ ಕೈಕೊಳ್ಳುವ ಸದ್ಗುಣವೆಂಬ ಕೋಟೆ ಕೊತ್ತಳವನ್ನೂ ಜ್ಞಾನ ವಿದ್ಯಗಳೆಂಬ ಅಗುಳತೆ ಆಳ್ವೇರಿಗಳನ್ನೂ ಕಟ್ಟಿ, ದೇವರ ಸತ್ಯವನ್ನು ಮರೆ ಮಾಡುತ್ತಾರೆ. ಒಬ್ಬರು, ಹ್ಯಾಗೂ ದೇವರ ವಾಕ್ಯವನ್ನು ಪ್ರೀತಿ ಮಾಡುತ್ತೇವಲ್ಲಾ? ಭಕ್ತರ ಸಲಿಗೆಯವರಾಗಿದ್ದೇವಲ್ಲಾ? ನಾಗರೀಕರಾಗಿದ್ಧೇವಲ್ಲಾ? ದೊಡ್ಡ ಉದ್ಯೋಗದಲ್ಲಿದ್ದೇವಲ್ಲ? ಅಥವಾ ಬಡವರಾಗಿದ್ದು, ಜಂಬರದಲ್ಲಿ ಮುಣುಗಿ, ಭಕ್ತಿಯ ಅಭ್ಯಾಸಕ್ಕೆ ಹೊತ್ತು ಕಾಣೆವು ಎಂಬ ಮೊದಲಾದ ಅನೇಕ ನೆವನಗಳನ್ನು ಕಲ್ಪಿಸುತ್ತಾರೆ. ಆದರೆ ಇಂಥಾ ನೆವನಗಳನ್ನು ಮುಖದಾಕ್ಷಿಣ್ಯವಿಲ್ಲದ ನ್ಯಾಯಾಧಿಪತಿಯ ಕಣ್ಣಿನ ಮುಂ

ದೆ ಹೇಳುವರೆಂದು ನೆನಸುತ್ತೀಯಾ? ಹೃದಯದ ತಿರುಳೂ ಕ್ರಿಯೆಗಳ ಸತ್ಯ ಕಾರಣಗಳೂ ಪ್ರಕಟವಾಗುವ ಆ ದಿವಸದಲ್ಲಿ ಮನುಷ್ಯನು ದೇವರನ್ನು ಸನ್ಮಾನಿಸದೆ ಹೋದ ಮುಖ್ಯ ಕಾರಣವು ಪಾಪವೇ ಎಂಬುವದು ಬಯಲಾಗುತ್ತಲೇ ಆ ಕಪಟ ವಾಕ್ಯಗಳೆಲ್ಲಾ ಬಿದ್ದೇ ಬೀಳುವವು. "ಹಿರಿಕಿರಿಯರಾದ ಸತ್ತವರು ದೇವರ ಮುಂದೆ ನಿಂತಿರುವದನ್ನು ಕಂಡೆನು. ಪುಸ್ತಕಗಳು ತೆರಿಯಲ್ಪಟ್ಟವು. ಮತ್ತೊಂದು ಪುಸ್ತಕವು ತೆರಿಯಲ್ಪಟ್ಟಿತು. ಅದು ಜೀವದ ಪುಸ್ತಕವು. ಆಗ ಆ ಪುಸ್ತಕಗಳ ಬರಹದ ಪ್ರಕಾರ ಸತ್ತವರಿಗೆ ಅವರ ಕ್ರಿಯೆಗಳ ಪ್ರಕಾರ ನ್ಯಾಯತೀರ್ವಿಕೆಯಾಯಿತು" ಎಂದು ಯೋಹಾನನು ಬರೆಯುತ್ತಾನೆ. ಹಾಗಾದರೆ ಸತ್ಯದ ಪ್ರಕಾರವೇ ಕಠಿಣವಾದ ನ್ಯಾಯತೀರ್ವಿಕೆ ಆಗುತ್ತದೆ; ಯಾಕಂದರೆ ಸತ್ಯದ ನೇಮವು ದೇವರ ರಾಜ್ಯದಲ್ಲೆಲ್ಲಾ ನಡಿಯುತ್ತದೆ. ಅನೇಕರು ಈ ಕಾರ್ಯವನ್ನು ಧ್ಯಾನಿಸಿ, "ನನ್ನ ಸಾಲದ ಪುಸ್ತಕವೂ ಅಲ್ಲಿ ತೆರೆಯಲಾದೀತು" ಎಂದು ಎಣಿಕೆ ಮಾಡುವವರಾದರೆ, ಇಷ್ಟು ಹಗುರ ಮನಸ್ಸಾಗಿಯೂ ಕಪಟ ಭಾವವಾಗಿಯೂ ನಡಕೊಳ್ಳುತ್ತಿರುವರಲ್ಲ ಕಟಾ! ತಂದೆ ತಾಯಿಗಳಾದ ಗಂಡ ಹೆಂಡರು ಈ ಕಾರ್ಯವನ್ನು ಧ್ಯಾನಿಸುವರಾದರೆ, ದೇವರ ಭಯವನ್ನೂ ಯೇಸುವಿನ ಪ್ರೀತಿಯನ್ನೂ ಕೈಕೊಂಡು, ಮಕ್ಕಳನ್ನು ಜಾಗ್ರತೆಯಿಂದ ಸಾಕಿ, ಅವರನ್ನು ಕರ್ತನ ಶಿಕ್ಷೆಯಲ್ಲಿಯೂ ಉಪದೇಶದಲ್ಲಿಯೂ ಬೆಳಿಸುತ್ತಿರುವರಕಟಾ! ಮನೆಯಾಳುಗಳು ಈ ಕಾರ್ಯವನ್ನು ಧ್ಯಾನಿಸುವರಾದರೆ, ಕರ್ತನನ್ನು ದೃಷ್ಟಿಸಿ ಹೆಚ್ಚು ಮಾತುಬರಿಯಾಗಿರುತ್ತಿರುವರು; ಅವರಲ್ಲಿ ಅನೇಕರು ಯಜಮಾನರ ಹಿಂದೆ ಅಂತರಂಗವಾಗಿ ಮೋಸ ಮಾಡುವದು, ಕದ್ದು ಕೊಳ್ಳುವದು, ಕಂಡದ್ದನ್ನು ತಿಂದು ಬಿಡುವದು ಇತ್ಯಾದಿ ಅನ್ಯಾಯಗಳನ್ನು ಅಸಹ್ಯವಾದ ಅಪರಾಧಗಳೆಂದು ಬಿಟ್ಟು ಬಿಡುತ್ತಿರುವರು; ಯಾಕಂದರೆ ಸ್ವಲ್ಪದರಲ್ಲಿ ಮಾತುಬರಿಯಾಗಿರುವವನು ಬಹಳದರಲ್ಲಿಯೂ ಮಾತುಬರಿಯಾಗಿದ್ದಾನೆ. ಸ್ವಲ್ಪದರಲ್ಲಿ ಅನ್ಯಾಯಿಯಾಗಿರುವವನು ಬಹಳದರಲ್ಲಿಯೂ ಅನ್ಯಾಯಿಯಾಗಿದ್ದಾನೆ.—ಬಹು ಮಂದಿ ಯಜಮಾನರು ಈ ಕಾರ್ಯವನ್ನು ಮನಸ್ಸಿಗೆ ತಕ್ಕೊಂಡರೆ, ಮನೆಯಾಳುಗಳಿಗೆ ಹೆಚ್ಚು ದಯವನ್ನೂ ಕರುಣವನ್ನೂ ತೋರಿಸಿ, ತಮ್ಮ ರಕ್ಷಣೆಯನ್ನು ಭಯದಿಂದಲೂ ನಡುಗಿನಿಂದಲೂ ಉಂಟು ಮಾಡಿ ಕೊಳ್ಳುತ್ತಿರುವರು. ನ್ಯಾಯತೀರ್ವಿಕೆಯ ದಿವಸದಲ್ಲಿ ಯಜಮಾನನು ಸೇವಕನ ಹತ್ತರ, ಯಜಮಾನಿಯು ಸೇವಕಿಯ ಹತ್ತರ ನಿಂತು, ಹುಟ್ಟಿದಂದಿನಿಂದ ಅವರ ಜೊತೆಯಲ್ಲಿದ್ದವರಂತೆ ಕಾಣಿಸುವರು". ಕೊಂಚವಾಗಿ ಬಿತ್ತುವವನು ಕೊಂಚವಾಗಿಯೇ ಕೊಯ್ಯುವನು; ಮತ್ತು ಬಹಳವಾಗಿ ಬಿತ್ತುವವನು ಬಹಳವಾಗಿಯೇ ಕೊಯ್ಯುವನು; ತನ್ನ ಮಾಂಸಕ್ಕೆ ಬಿತ್ತುವವನು ಮಾಂಸದಿಂದ ಕೊಳಕೆಯನ್ನು ಕೊಯ್ಯುವನು. ಮುಖದಾಕ್ಷಿಣ್ಯವಿಲ್ಲ.

ಹೀಗಿರಲಾಗಿ, ಪ್ರಿಯ ಅಣ್ಣ ತಮ್ಮಂದಿರೇ, ಪ್ರಿಯ ಅಕ್ಕ ತಂಗ್ಯಂದಿರೇ, ಮುಖದಾಕ್ಷಿಣ್ಯವಿಲ್ಲದ ಪರಿಶುದ್ಧ ನೀತಿಯುಳ್ಳ ದೇವರಾದ ದೇವರು ಮೋಗಣದಲ್ಲಿದ್ದಾನೆಂದು ಆಲೋಚಿಸಿ, ಭಯದಿಂದ ಅವನನ್ನು ಸನ್ಮಾನಿಸಿರಿ; ಆತ್ಮದಲ್ಲಿ ಬಡವರೇ, ದೊಡ್ಡ ಹೊರೆ ಹೊತ್ತು ದಣಿದವರೇ, ಕೀಳರೆಣಿಸುವ ಮಾನಭಂಗರೇ, ಅನ್ಯಾಯಗಳಿಂದ ಪೀಡೆ ಪಡುವವರೆ, ಕರ್ತ

ನನ್ನು ಭಯ ಭಕ್ತಿಯಿಂದ ಪ್ರೀತಿ ಮಾಡುವವರೆಲ್ಲರೇ, ಕರ್ತನನ್ನು ದೃಷ್ಟಿಸಿ, ಮೌನವಾಗಿರ್ರಿ. ನಿಮ್ಮ ನೀತಿ ಪ್ರಕಟವಾಗುವಂಥಾ, ಕರ್ತನು ಅನ್ಯಾಯ ಪಡುವವರಿಗೆಲ್ಲಾ ನ್ಯಾಯ ತೀರಿಸುವಂಥಾ ಒಂದು ದಿವಸವು ಬರುತ್ತದೆಂದು ನೆನಸಿ ಕೊಳ್ಳಿರಿ! ನಿನ್ನ ಗರ್ವವನ್ನು ಬಿಡಲೊಲ್ಲದೆಯೂ ಕರ್ತನ ಬಲವಾದ ಕೈಕೆಳಗೆ ತಗ್ಗಿಸಿ ಕೊಳ್ಳಲೊಲ್ಲದೆಯೂ ಈ ನೆವವನ್ನು ಆ ನೆವವನ್ನು ಕೈಕೊಳ್ಳುವ ಅಹಂಕಾರಾತ್ಮನೇ, ನಿನ್ನ ಮೇಣಿನಿಂದ ಇಳಿದು ಬಾ! ಇಳಿ! ಇಳಿ! ನಿನ್ನ ಆತ್ಮದೃಷ್ಟಿಯಲ್ಲಿ ಬಡ ಕೀಳ ಪಾಪಿಯಾಗು; ಯಾಕಂದರೆ ಎತ್ತರ ಕಣ್ಣುಗಳೆಲ್ಲಾ, ಗರ್ವ ಹೃದಯಗಳೆಲ್ಲಾ, ಹೊಗಳಿ ಕೊಳ್ಳುವ ಪುಣ್ಯಾತ್ಮರೆಲ್ಲಾ, ನಿತ್ಯದೇವರ ವಾಕ್ಯಕ್ಕೆ ಜಗಳಾಡಿ ತರ್ಕಿಸುವವರೆಲ್ಲಾ, ಮಾನಭಂಗರಾಗಿ ಗುಂಡಿಯಲ್ಲಿ ದೊಬ್ಬಿ ಹೋಗುವಂಥಾ, ಉದಾಸೀನ ಮಾಡಿದ ಕುಚೋದ್ಯಗಾರರೆಲ್ಲರ ಗುಂಡಿಗೊಡೆಯುವಂಥಾ ಒಂದು ದಿವಸ ಬರುತ್ತದೆ. ಈಗಲಾದರೂ ಕರ್ತನು ಅವರಿಗೆ ನಗುತ್ತಾನೆ; ಪರಲೋಕದಲ್ಲಿ ಕೂತು ಕೊಳ್ಳುವವನು ಅವರನ್ನು ಗೇಲಿಡುತ್ತಾನೆ. ಆಗ ಕ್ರಿಸ್ತನನ್ನು ಅಸಡ್ಡೆ ಮಾಡಿದ ಪುಣ್ಯಾತ್ಮರೂ ಸ್ವನೀತಿಯುಳ್ಳವರೂ ಸುಳ್ಳುಗಾರರೆಲ್ಲರೂ ತಮ್ಮ ತಮ್ಮ ಕ್ರಿಯೆಗಳ ಫಲವನ್ನು ಹೊಂದುವರು; ಆದರೆ ಅವನನ್ನು ಭಯದಿಂದ ಪ್ರೀತಿ ಮಾಡುವ ನೀವು ಸಂತೋಷ ಪಡಿರಿ; ಯಾಕಂದರೆ ನಿಮ್ಮನ್ನು ನೋಡಿ, ನಿಮ್ಮ ಗುರ್ತು ತಿಳಿಯುತ್ತಾನೆ. ನಿಮ್ಮ ಜೀವವು ಅವನ ಸಂಗಡ ದೇವರಲ್ಲಿ ಮರೆಯಾಗಿರಲಾಗಿ, ಅವನ ಪ್ರತ್ಯಕ್ಷತೆಯಲ್ಲಿ ನೀವು ಮಹಿಮೆಯಿಂದ ಪ್ರತ್ಯಕ್ಷರಾಗುವ ಹಾಗೆ ಅಧಿಕಾಧಿಕ ಜಾಗ್ರತೆಯಾಗಿದ್ದು, ಅವನಲ್ಲಿ ಬೆಳಿಯಿರಿ! ಆಮೆನ್.

ಶಕ್ತಿಯುಳ್ಳ ಪ್ರಾರ್ಥನೆ.

ನಾವು ನಮ್ಮ ಮಕ್ಕಳನ್ನು ನಡಿಸುವ ರೀತಿಯಲ್ಲಿ ದೇವರು ನಮ್ಮನ್ನು ನಡಿಸುತ್ತಾನೆ ಎಂತ ಹೇಳ ಬಹುದು. ನಾನು ನನ್ನ ಕೋಣೆಯಲ್ಲಿ ಬರೆಯುತ್ತಾ ಅಥವಾ ಧ್ಯಾನಿಸುತ್ತಾ ಇರಲಾಗಿ, ನನ್ನ ಮಕ್ಕಳೊಂದರ ಅಳುವಿಕೆ ನನ್ನ ಕಿವಿಯಲ್ಲಿ ಬೀಳುವಾಗ, ನಾನು ಒಡನೊಡನೆ ಅದರ ಸಹಾಯಕ್ಕೆ ಓಡಿ ಹೋಗುವದಿಲ್ಲ; ಯಾಕಂದರೆ ಅದರ ಕಣ್ಣೀರು ಒಂದು ವೇಳೆ ಬೇರೊಬ್ಬರು ತಪ್ಪಿಸ ಕೂಡುವಂಥಾ ಅಥವಾ ಆಡುವ ಸಾಮಾನುಗಳಿಂದ ತೆಗೆಯಲಾಗುವಂಥಾ ಒಂದು ಕ್ಷಣದ ನೋವಿನಿಂದ ಬಂತೆಂದು ನೆನಸುವೆನು. ಆದರೆ ಅದರ ಕೂಗು ನಿಲ್ಲದೆ, ನಾನು ಬಂದರೆ ಹೊರ್ತು ಅದು ಸಮಾಧಾನ ಹೊಂದುವದಿಲ್ಲವೆಂದು ಕಂಡರೆ, ನಾನು ಎಲ್ಲವನ್ನು ಬಿಟ್ಟು ಅದರ ಕಡೆಗೆ ಹೋಗುವೆನು. ದೇವರ ಮಕ್ಕಳು ಆತನ ಸನ್ನಿಧಾನ ಕ್ಕೋಸ್ಕರ ಕೂಗಲಿಕ್ಕೆ ತೊಡಗುವಾಗ ಹೀಗೆ ಇರುವದು. ಆತನು ಒಡನೊಡನೆ ಉತ್ತರ ಕೊಡದೆ, ಅವರ ಕೂಗು ಪುನಃ ಕೇಳಿಸುತ್ತದೋ ಏನೋ ಎಂದು ಕಾದು ಕೊಳ್ಳುವನು. ಆಗ ಮಗನು ತನ್ನ ತಂದೆಯ ಸನ್ನಿಧಾನದಿಂದ ಹೊರ್ತಾಗಿ ಬೇರೆ ಯಾತರಿಂದ ಆದರಣೆ ಹೊಂದಲಿಕ್ಕಿಲ್ಲವೆಂದು ಕಂಡರೆ, ದೇವರು ಆ ಕೃಪೆ ಬಹು ಕಾಲಕ್ಕೆ ಅವನಿಗೆ ಕೊಡಲಿಕ್ಕೆ ಬಿಡಲಿಕ್ಕಿಲ್ಲ.

ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಯಾಗಿದ್ದರೆ, ಅವನು ಬಹಳ ಫಲ ಫಲಿಸುತ್ತಾನೆ; ಯಾಕಂದರೆ ನಾನಿಲ್ಲದೆ ಏನೂ ಮಾಡಲಾರಿರಿ. ಯೋಹಾ. ೧೫, ೫.

Bei dir, Jesu, will ich bleiben.

೧. ನಿನ್ನ ಹತ್ರ ನಿಲ್ಲುತ್ತೇನೆ;
ಎಂದು ಬಿಟ್ಟು ಬಿಡದೆ
ನಿನ್ನ ದಾಸನಾಗಿದ್ಧೇನೆ,
ಅತಿ ಪ್ರಿಯ ಯೇಸುವೆ!
ನೀನು ನನ್ನ ಅಂತಃಪ್ರಾಣ,
ನನ್ನ ಜೀವಬಲವೇ;
ಗಿಡ ಕೊಂಬಿಗೆಲ್ಲ ತ್ರಾಣ
ಕೊಡುತ್ತಿಪ್ಪ ಹಾಗೆಯೇ.

೨. ನಿನ್ನ ಹಾಗೆ ಮಿತ್ರನೆಲ್ಲಿ?
ಪ್ರೇಮದಾಬ್ಧಿ ದೇವರೆ!
ಸ್ವಂತ ಜೀವರಕ್ತ ಚೆಲ್ಲಿ
ಕ್ಷೇಮ ಕೊಟ್ಟೆ ನನಗೆ.
ನೀನು ಭದ್ರದುರ್ಗಸ್ಥಲ
ಭಯಭ್ರಷ್ಟ ಪಾಪಿಗೆ,
ಸರ್ವಲೋಕ ರಾಜ್ಯ, ಬಲ,
ಅಧಿಕಾರ ನಿನ್ನದೆ.

೩. ನಿನ್ನ ಹತ್ರ ನಿಲ್ಲುತ್ತೇನೆ
ಸುಖ ದುಃಖದೊಳಗೆ.
ನಿನ್ನ ದಾಸನಾಗಿದ್ಧೇನೆ
ಇಹ ಪರದಲ್ಲಿಯೆ.
ಇಹದಲ್ಲಿ ಭಕ್ತರನ್ನು
ಕೃಪೆಯಿಂದ ಸುತ್ತುತಿ;
ಅಂತ್ಯದಲ್ಲಿ ಕ್ಷೇಮವನ್ನು
ಸ್ವರ್ಗದಲ್ಲಿ ಕೊಡುವಿ.

೪. ನನ್ನ ಹತ್ರ ನಿಲ್ಲು, ಯೇಸು!
ಜೀವದಂತ್ಯದಲ್ಲಿಯೆ.
ಇಹ ರಾತ್ರಿ, ಮೇಲೆ ಲೇಸು;
ಸೂರ್ಯನಾಗು ನನಗೆ.
ದೇಹ ಸಾವುಭ್ರಷ್ಟನಾಗಿ
ಕಣ್ಣು ಮೊಬ್ಬುವಾಗಲೇ,
ನಿತ್ಯಜೀವಗತಿಗಾಗಿ
ಶೇರಿಸೆನ್ನನೇಸುವೇ!

A. G.

---

೫. ಕೀರ್ತನೆ.

Lord, in the morning thou shalt hear.

ಹೊತಾರೆ ಕರ್ತ ನಿನಗೆ
ನಾನಡ್ಡ ಬೀಳ್ವೆನು;
ಹೊತಾರೆ ನಿನ್ನ ಪೀಠಕೆ
ವಿಜ್ಞಾಪನೇಳ್ವದು.

ನಿನ್ನತಿ ಪ್ರಿಯ ನಾಮಕೆ
ಕೃತಜ್ಞವರ್ಪಿಸಿ,
ಸದ್‌ಭಕ್ತ ಸಭೆಯೆಡೆಗೆ
ನಾನೆಂದು ಶೇರಲಿ.

ನಿನ್‌ವಾಕ್ಯ ನನ್ನ ಪಾದಕೆ
ಸುಜ್ಯೋತಿ ಬೆಳಕು;
ಪಾಪಾತ್ಮ ಮೋಸ ಮಾಯೆಗೆ
ನನ್ನಾತ್ಮ ತಪ್ಪಿಸು!

ವಿಶ್ವಾಸಿಯನ್ನೆಂದೆಂದಿಗೂ
ನೀನಾಶೀರ್ವಾದಿಸಿ,
ಕಾರುಣ್ಯಾ ಕೃಪೆಯಿಂದಲೂ
ಡಾಲಂತೆ ಸುತ್ತುತಿ.

A. G.

Printed by Stolz & Reuther, Basel Mission Press, Mangalore.

...ತ್ರ

...ರಿ ಪ್ರಕಟಿಸಲ್ಪಡುವದು.

...೭೮ ಅಂಕೆ ೧.

...ಧಿ ಪತ್ರ.

...ರಾಷ್ಟ್ರದ ಜಿಲ್ಲೆಗಳಲ್ಲಿಯೂ ಕೊಡಗ ಶೀಮೆಯಲ್ಲಿ
...ಸೆಲ್ ಮಿಶ್ಯನ್ ಸಭೆಗಳ ಪ್ರಯೋಜನಾರ್ಥಕ್ಕಾ
...ಗದವನ್ನು ತಿಂಗಳು ತಿಂಗಳಿಗೆ ಪ್ರಸಿದ್ಧ ಮಾಡಲಿಕ್ಕೆ

...ಲ್ಲದೆ ತಿಳುವಿಕೆಯಲ್ಲಿ ಸಹಾ ಬೆಳೆಯ ಬೇಕೆಂಬದೇ
...ಗುವ ಪುಸ್ತಕಗಳು ಕರ್ನಾಟಕ ಭಾಷೆಯಲ್ಲಿ ಸ್ವಲ್ಪ
...ಸಿದ ದೇವವಾಕ್ಯವ್ಯಾಖ್ಯಾನದ ಪುಸ್ತಕಗಳನ್ನು
...ೂ ಈ ಪ್ರಕಾರ ಒಂದು ಕೊರತೆ ಇರುವದರಿಂದ
...ಂಬ ಭಾವದಿಂದ ಅದನ್ನು ಛಾಪಿಸುವರೆ ಆಲೋ

...ಏನಂದರೆ—ದೇವರ ವಾಕ್ಯದ ಒಂದು ಪರಿಚ್ಛೇದ
... ವಚನಗಳ ಟೀಕೂ, ದೇವರ ರಾಜ್ಯದ ಮುಖ್ಯ
...ನಡಿಯುವ ನಮ್ಮ ಬಾಸೆಲ್ ಮಿಶ್ಯನ್ ಕುರಿತಾದ
...ಎತ್ನೈಸುವ ರೀತಿ ತೋರಿಸುವಂಥ ವಿಚಿತ್ರವಾದ
...ಗತಿಯಲ್ಲಿ ಕಾಣಿಸುವಂತೆ ನಿರೀಕ್ಷಿಸುತ್ತೇವೆ.
... ಪ್ರಕಾರ ಪ್ರಯೋಗಿಸುವವರು ತಮ್ಮನ್ನು ಕ್ರೈಸ್ತ
...ಗೂ ಸಮಸ್ತ ದೇವಸಭೆಗೂ ಆತ್ಮಿಕ ಸಂಬಂಧ ಉಂ